# ಜನತಾವಾಣಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ, ಚಿತ್ರದುರ್ಗ, ಹಾವೇರಿ, ಶಿವಮೊಗ್ಗ, ವಿಜಯನಗರ ಜಿಲ್ಲೆಗಳಲ್ಲಿ ಪ್ರಸಾರ ಹೊಂದಿರುವ ಪ್ರಾದೇಶಿಕ ಪತ್ರಿಕೆ

ದಾವಣಗೆರೆ
ಶನಿವಾರ, ಜುಲೈ 09, 2022

ಸಂಪುಟ : 49 ಸಂಚಿಕೆ : 56 ☎ 254736 91642 99999 RNI No: 27369/75 KA/SK/CTA-275/2021-2023. O/P @ B.V. Nagar P.O. ಪುಟ : 6 ರೂ : 5.00 www.janathavani.com janathavani@mac.com


# ಜಪಾನ್ ಮಾಜಿ ಪ್ರಧಾನಿ ಶಿಂಜೊ ಅಬೆ ಹತ್ಯೆ

## ಮನೆಯಲ್ಲೇ ಮಾಡಿದ ಬಂದೂಕು ಬಳಸಿ ಮಾಜಿ ಸೈನಿಕನಿಂದ ಕೃತ್ಯ

ಟೋಕಿಯೋ (ಜಪಾನ್), ಜು. 8 - ಜಪಾನ್‌ನ ಅತ್ಯಂತ ಪ್ರಭಾವಿ ನಾಯಕರಲ್ಲಿ ಒಬ್ಬರಾದ ಮಾಜಿ ಪ್ರಧಾನ ಮಂತ್ರಿ ಶಿಂಜೊ ಅಬೆ ಅವರನ್ನು ಗುಂಡಿಟ್ಟು ಹತ್ಯೆಗೈಯ್ಯಲಾಗಿದೆ. ಪಶ್ಚಿಮ ಜಪಾನ್‌ನ ನಾರಾ ಎಂಬಲ್ಲಿ ಚುನಾವಣಾ ಪ್ರಚಾರ ಭಾಷಣ ಮಾಡುವಾಗ ಹತ್ಯೆ ನಡೆದಿದೆ.

67 ವರ್ಷದ ಅಬೆ ಅವರು ಭಾಷಣ ಆರಂಭಿಸಿದ ಕೆಲವೇ ನಿಮಿಷಗಳ ನಂತರ ಹಿಂದಿನಿಂದ ಗುಂಡು ಹಾರಿಸಲಾಗಿದೆ. ತಕ್ಷಣವೇ ಅವರನ್ನು ಚಿಕಿತ್ಸೆಗಾಗಿ ಆಸ್ಪತ್ರೆಗೆ ದಾಖಲಿಸಲಾಯಿತು. ಆದರೆ, ಅಷ್ಟರ ವೇಳೆಗೆ ಅವರ ಉಸಿರಾಟ ಹಾಗೂ ಹೃದಯ ಬಡಿತ ನಿಂತಿತ್ತು. ತುರ್ತು ಚಿಕಿತ್ಸೆ ನೀಡಲಾಯಿತಾದರೂ, ಅವರ ಜೀವ ಉಳಿಯಲಿಲ್ಲ ಎಂದು ಆಸ್ಪತ್ರೆಯ ಅಧಿಕಾರಿಗಳು ಹೇಳಿದ್ದಾರೆ.



ಗುಂಡಿನ ದಾಳಿಯಿಂದಾಗಿ ಅಬೆ ಹೃದಯಕ್ಕೆ ಹಾನಿಯಾಗಿತ್ತು. ಕುತ್ತಿಗೆಯ ಬಳಿ ಎರಡು ಗಾಯಗಳಾಗಿದ್ದವು. ಇದರಿಂದ ತೀವ್ರ ರಕ್ತ ಸೋರಿಕೆಯಾಗಿತ್ತು ಎಂದು ನಾರಾ ಮೆಡಿಕಲ್ ಯುನಿವರ್ಸಿಟಿ ತಿಳಿಸಿದೆ. ಘಟನಾ ಸ್ಥಳದಲ್ಲಿ ಪೊಲೀಸರು ಟುಟ್ಸುಯ ಯಮಗಾಮಿ ಎಂಬ ವ್ಯಕ್ತಿಯನ್ನು ಬಂಧಿಸಿದ್ದಾರೆ. 41 ವರ್ಷದ ಈ ಮಾಜಿ ಸೈನಿಕ ಹತ್ಯೆ ನಡೆಸಿರುವುದಾಗಿ ಪೊಲೀಸರು ತಿಳಿಸಿದ್ದಾರೆ.

ಗುಂಡಿನ ದಾಳಿ ನಡೆಸಿದ ನಂತರ ಯಮಗಾಮಿ ತಪ್ಪಿಸಿಕೊಳ್ಳುವ ಯತ್ನ ನಡೆಸಲಿಲ್ಲ. ಬಂದೂಕು ಕೆಳಗಿಟ್ಟು ನಿಂತಲ್ಲೇ ನಿಂತಿದ್ದ ಎಂದು ಪ್ರತ್ಯಕ್ಷದರ್ಶಿಗಳು ತಿಳಿಸಿದ್ದಾರೆ.

ಯಮಗಾಮಿ ಮನೆಯಲ್ಲೇ ತಯಾರಿಸಿದ್ದ ಬಂದೂಕು ಬಳಸಿ ಹತ್ಯೆ ಮಾಡಿದ್ದಾನೆ. ಇದು 40 ಸೆಂ.ಮೀ.ಗಳಷ್ಟು ಉದ್ದವಿತ್ತು. ಆತನಿದ್ದ ಒಂದು ಕೋಣೆಯ ಅಪಾರ್ಟ್‌ಮೆಂಟ್ ಮೇಲೆ ದಾಳಿ ನಡೆಸಿದಾಗ ಇದೇ ರೀತಿಯ ಶಸ್ತ್ರಗಳು ಪತ್ತೆಯಾಗಿವೆ. (2ನೇ ಪುಟಕ್ಕೆ)

# ಮಕ್ಕಳಿಗೆ ಷೂ - ಸಾಕ್ಸ್‌ಗೆ 132 ಕೋಟಿ



ಬೆಂಗಳೂರು, ಜು. 8 - ಶಾಲಾ ಮಕ್ಕಳಿಗೆ ಷೂ, ಸಾಕ್ಸ್ ನೀಡಲು 132 ಕೋಟಿ ರೂಪಾಯಿ ಒದಗಿಸಿ ಅನುಮೋದನೆ ನೀಡಲಾಗುತ್ತದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಷೂ, ಶಾಕ್ಸ್ ನೀಡುವ ವಿಚಾರದಲ್ಲಿ ಗೊಂದಲ ಅಗತ್ಯವಿಲ್ಲ. ಮಕ್ಕಳಿಗೆ ಸಮವಸ್ತ್ರ ನೀಡುವ ವಿಚಾರದಲ್ಲಿ ಸರ್ಕಾರ ಈಗಾಗಲೇ ಅನುಮೋದನೆ ಕೊಟ್ಟಿದೆ ಎಂದರು. ಷೂ, ಶಾಕ್ಸ್ ನೀಡಲು ಭಿಕ್ಷೆ ಬೇಡಿ ಒಂದು ಕೋಟಿ ರೂಪಾಯಿ ನೀಡುವುದಾಗಿ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಹೇಳಿದ್ದಾರೆ ಎಂಬ ಪ್ರಶ್ನೆಗೆ ಪ್ರತಿಕ್ರಿಯಿಸಿದ ಮುಖ್ಯಮಂತ್ರಿ, ಕೋವಿಡ್ ಕಾಲದಲ್ಲಿ ಇದೇ ರೀತಿ ಭಿಕ್ಷೆ ಬೇಡಿದ್ದರು. ಅದು ಎಲ್ಲಿ ಹೋಯಿತು? ಇದು ಹಾಗೆಯೇ ಎಂದು ಟೀಕಿಸಿದರು.

# ನದಿ ನೀರು ಹೆಚ್ಚಳ ಎದುರಿಸಲು ಸನ್ನದ್ಧರಾಗಿ : ಎಸಿ ದುರ್ಗಾಶ್ರೀ

## ಜನ-ಜಾನುವಾರಗಳ ಕಾಳಜಿಗೆ ಉಪವಿಭಾಗಾಧಿಕಾರಿ ಸೂಚನೆ



ಹರಿಹರ, ಜು. 8 - ನದಿ ನೀರು ಹೆಚ್ಚಾದ ಸಂದರ್ಭದಲ್ಲಿ ತಾಲ್ಲೂಕಿನ ವಿವಿಧ ಗ್ರಾಮಗಳಲ್ಲಿ ತೊಂದರೆಗಳು ಎದುರಾದರೆ ಎದುರಿಸಲು ಎಲ್ಲಾ ಇಲಾಖೆಯ ಅಧಿಕಾರಿಗಳು ಸನ್ನದ್ಧರಾಗಿರಬೇಕು ಎಂದು ಉಪವಿಭಾಗಧಿಕಾರಿ ದುರ್ಗಾಶ್ರೀ ಅಧಿಕಾರಿಗಳಿಗೆ ಸೂಚನೆ ನೀಡಿದರು.

ನಗರದಲ್ಲಿ ಕಳೆದ ಎಂಟು ದಿನಗಳಿಂದ ಧಾರಾಕಾರವಾಗಿ ಸುರಿಯುತ್ತಿರುವ ಮಳೆಯ ಹಿನ್ನೆಲೆಯಲ್ಲಿ ತಗ್ಗು ಪ್ರದೇಶವಾದ ನಗರದ ಗಂಗಾನಗರ, ಬೆಂಕಿನಗರ, ಕಾಳಿದಾಸನಗರ ಮತ್ತು ತಾಲ್ಲೂಕಿನ ಹಲಸಬಾಳು ಗ್ರಾಮಕ್ಕೆ ಭೇಟಿ ನೀಡಿದ ನಂತರ ತಹಶೀಲ್ದಾರ್ ಕಚೇರಿಯ ಸಭಾಂಗಣದಲ್ಲಿ ವಿವಿಧ ಇಲಾಖೆಯ ಅಧಿಕಾರಿಗಳ ಮಹತ್ವದ ಸಭೆಯಲ್ಲಿ ಅವರು ಮಾತನಾಡಿದರು.

ಮುಂಜಾಗ್ರತೆಯಿಂದ ನದಿ ದಂಡೆಯ ಮೇಲಿರುವ ಮನೆಗಳನ್ನು ಸ್ಥಳಾಂತರ ಮಾಡಬೇಕು. ಜಾನುವಾರುಗಳಿಗೆ ತೊಂದರೆ ಆಗದಂತೆ ತಡೆಯಲು ತಾಲ್ಲೂಕಿನ ಎಲ್ಲಾ ಇಲಾಖೆಯ ಅಧಿಕಾರಿಗಳು ಸಿದ್ದತೆ ಮಾಡಿಕೊಂಡಿರಬೇಕು. ಕೆಲವು ಗ್ರಾಮಗಳಲ್ಲಿ ರಸ್ತೆಗಳು, ಸೇತುವೆಗಳು ಮುಳುಗಡೆ ಆದರೆ ಬೋಟಿಂಗ್, ದೋಣಿ ವ್ಯವಸ್ಥೆ ಮಾಡಿಕೊಂಡಿರಬೇಕು (2ನೇ ಪುಟಕ್ಕೆ)

# ಅ.29ರಿಂದ ಶ್ರೀಶೈಲ ಪಾದಯಾತ್ರೆ

## ಅ.10ರಿಂದ ಧಾರ್ಮಿಕ ಹಾಗೂ ಸಾಮಾಜಿಕ ಕಾರ್ಯಕ್ರಮ



ದಾವಣಗೆರೆ, ಜು. 8 - ಬರುವ ಅಕ್ಟೋಬರ್ 10ರಿಂದ ಜನವರಿ 15ರವರೆಗೆ ಶ್ರೀಶೈಲ ಜಗದ್ಗುರು ಡಾ. ಚನ್ನಸಿದ್ಧರಾಮ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ಅವರ ದ್ವಾದಶ ಪೀಠಾರೋಹಣ ಮಹೋತ್ಸವ ಮತ್ತು ಜನ್ಮ ಸುವರ್ಣ ಮಹೋತ್ಸವದ ಅಂಗವಾಗಿ ವಿವಿಧ ಧಾರ್ಮಿಕ, ಸಾಮಾಜಿಕ ಹಾಗೂ ಜನಜಾಗೃತಿ ಪಾದಯಾತ್ರೆ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

ಪತ್ರಿಕಾಗೋಷ್ಠಿಯಲ್ಲಿ ಈ ವಿಷಯ ತಿಳಿಸಿರುವ ಶ್ರೀಶೈಲ ಜಗದ್ಗುರುಗಳು, ಪ್ರತಿ ವರ್ಷ ಶ್ರೀಶೈಲಕ್ಕೆ ಲಕ್ಷಾಂತರ ಜನರು ಪಾದಯಾತ್ರೆಯಲ್ಲಿ ಬರುತ್ತಾರೆ. ಈ ಬಾರಿ ತಾವೂ ಸಹ ಪಾದಯಾತ್ರೆಯಲ್ಲಿ ಪಾಲ್ಗೊಳ್ಳುತ್ತೇವೆ. ಪಾದಯಾತ್ರಿಗಳ ಸಮಸ್ಯೆಗಳನ್ನು ನೇರವಾಗಿ ಅರಿತು, ಅವುಗಳನ್ನು ಬಗೆಹರಿಸುತ್ತೇವೆ. ಪಂಚಪೀಠಾಧೀಶರು ಕೇವಲ ಪಲ್ಲಕ್ಕಿ ಮೇಲೆ ಕೂರುವವರು ಎಂಬ ಭಾವನೆ ಸಮಾಜದ ಕೆಲವರಲ್ಲಿದೆ. ಆದರೆ, ಸಮಯ ಬಂದಾಗ ಪಂಚಪೀಠಾ ಧೀಶರು ಪಾದಯಾತ್ರೆ ಸಹ ಮಾಡಬಲ್ಲರು ಎಂದು ತಿಳಿಸಿದರು.

ದ್ವಾದಶ ಪೀಠಾರೋಹಣ ಮಹೋತ್ಸವದ ಅಂಗವಾಗಿ ಮೂರು ಹಂತದ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ಮೊದಲ ಹಂತದಲ್ಲಿ ಅಕ್ಟೋಬರ್ 10 ರಿಂದ (3ನೇ ಪುಟಕ್ಕೆ)


## ವಿವಾಹ ಮಹೋತ್ಸವ ಆಹ್ವಾನ

ದಾವಣಗೆರೆ ಸಿಟಿ ಶಾಮನೂರು ವಾಸಿ
ಮಲ್ಲಾಪುರದ ದಿ|| ಎಸ್.ಎಂ. ಹನುಮಂತಪ್ಪ ದಿ|| ಶ್ರೀಮತಿ ಗಂಗಮ್ಮ ಇವರ ಮಗನಾದ
ಶ್ರೀ ಎಂ.ಹೆಚ್. ಬಸವರಾಜು ಮತ್ತು ಶ್ರೀಮತಿ ಮೀನಾಕ್ಷಿ ಹಾಗೂ
ದಾವಣಗೆರೆ ಜಿಲ್ಲೆ, ಚನ್ನಗಿರಿ ತಾಲ್ಲೂಕು ಹೊನ್ನೇಮರದಹಳ್ಳಿ ಗ್ರಾಮದ ವಾಸಿ
ಶ್ರೀಮತಿ ಜಯ್ಯಮ್ಮ ಮತ್ತು ಶ್ರೀ ಗೌಡ್ರ ಜಿ.ಆರ್. ಸಿದ್ದಪ್ಪ ಇವರು ಮಾಡುವ ವಿಜ್ಞಾಪನೆಗಳು.
ಶ್ರೀ ಮದುಜ್ಜಯಿನಿ ಸದ್ಧರ್ಮ ಸಿಂಹಾಸನಾಧೀಶ್ವರ ಶ್ರೀ ತರಳಬಾಳು ಜಗದ್ಗುರು
ಡಾ|| ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳು ಶ್ರೀ ತರಳಬಾಳು ಜಗದ್ಗುರು ಬೃಹನ್ಮಠ, ಸಿರಿಗೆರೆ.
ಇವರ ಕೃಪಾಶೀರ್ವಾದದೊಂದಿಗೆ
ದಿನಾಂಕ : 10.07.2022ನೇ ಭಾನುವಾರ ಬೆಳಿಗ್ಗೆ 10.51 ರಿಂದ 11.51ರ ವರೆಗೆ ಸಲ್ಲುವ
ಅಭಿಜಿನ್ ಲಗ್ನದ ಶುಭ ಮುಹೂರ್ತದಲ್ಲಿ

(ಶ್ರೀಮತಿ ಮೀನಾಕ್ಷಿ ಮತ್ತು ಶ್ರೀ ಎಂ.ಹೆಚ್. ಬಸವರಾಜು ಇವರ ಸುಪುತ್ರ)
**ಚಿ|| ರಾ|| ಎಂ.ಬಿ. ಚಂದ್ರಕಾಂತ್**
ಜೊತೆ
**ಚಿ|| ಕುಂ|| ಸೌ|| ಜಿ.ಕೆ. ದೀಪಾ**
(ಶ್ರೀಮತಿ ಗೀತಾ ಎ.ಸಿ. ಮತ್ತು ಶ್ರೀ ಗೌಡ್ರ ಜಿ.ಕೆ. ಕುಮಾರ್ ಇವರ ಸುಪುತ್ರಿ)

ಇವರ ವಿವಾಹ ಮಹೋತ್ಸವವನ್ನು ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಸಕುಟುಂಬ ಪರಿವಾರ ಸಮೇತರಾಗಿ ಆಗಮಿಸಿ, ವಧು-ವರರನ್ನು ಆಶೀರ್ವದಿಸಬೇಕಾಗಿ ಕೋರುವ,


| ಆರತಕ್ಷತೆ : | ವಿವಾಹ ಮುಹೂರ್ತ : | ವಿವಾಹ ಸ್ಥಳ : |
|---|---|---|
| 09.07.2022 ನೇ ಶನಿವಾರ | 10.7.2022ನೇ ಭಾನುವಾರ | ಬಾಪೂಜಿ ಬ್ಯಾಂಕ್ |
| ಸಮಯ : | ಸಮಯ : | ಸಮುದಾಯ ಭವನ |
| ಸಂಜೆ 6.30 ರಿಂದ | ಬೆಳಿಗ್ಗೆ 10.51 ರಿಂದ 11.51ರವರೆಗೆ | ಶಾಮನೂರು ರಸ್ತೆ, ದಾವಣಗೆರೆ. |

ತಮ್ಮ ಆಗಮನಾಭಿಲಾಷಿಗಳು :
ಶ್ರೀಮತಿ ಮೀನಾಕ್ಷಿ, ಶ್ರೀ ಎಂ.ಹೆಚ್. ಬಸವರಾಜು, ಶಾಮನೂರು
ಶ್ರೀಮತಿ ಗೀತಾ ಎ.ಸಿ., ಶ್ರೀ ಗೌಡ್ರ ಜಿ.ಕೆ. ಕುಮಾರ್, ಚಿ|| ಜಿ.ಕೆ. ದಿನೇಶ್, ಅರಳಿಕಟ್ಟೆ
ಶ್ರೀಮತಿ ಅನಿತಾ, ಶ್ರೀ ಎಸ್.ಎಂ. ಪ್ರದೀಪ್‌ಕುಮಾರ್, ಚಿ|| ಸುಹಾಸ್ ಎಸ್.ಪಿ., ಶಾಮನೂರು.
ಶ್ರೀಮತಿ ಎಂ.ಬಿ. ಗಂಗಾ, ಶ್ರೀ ಡಿ.ಎಸ್. ಸಂತೋಷ್, ಶ್ಯಾಗಲೆ. ಸೀನಿಯರ್ ಸಾಫ್ಟ್‌ವೇರ್ ಇಂಜಿನಿಯರ್, ಬೆಂಗಳೂರು
ಬೇಬಿ ಆಧ್ಯ ಹಾಗೂ ಬಂಧು - ಮಿತ್ರರು. ಮೊ. 94494-23389, 94483-73455

ಇಂದ : ಶ್ರೀಮತಿ ಮೀನಾಕ್ಷಿ, ಶ್ರೀ ಎಂ. ಹೆಚ್. ಬಸವರಾಜ್ (ಅಂಗಡಿ ರಾಜಣ್ಣ)
**ಶ್ರೀ ಆಂಜನೇಯ ಪ್ರಾವಿಜನ್ ಸ್ಟೋರ್**
ಶ್ರೀ ಆಂಜನೇಯಸ್ವಾಮಿ ದೇವಸ್ಥಾನದ ಎದುರು, ಶಾಮನೂರು.

ವಿ.ಸೂ : ಆಹ್ವಾನ ಪತ್ರಿಕೆಗಳನ್ನು ಕಳುಹಿಸಲಾಗಿದ್ದು, ತಲುಪದವರು ಇದನ್ನೇ ವೈಯಕ್ತಿಕ ಆಹ್ವಾನವೆಂದು ಭಾವಿಸಿ ಆಗಮಿಸಲು ಕೋರಿದೆ.


# ಭದ್ರಾ ಜಲಾಶಯ : 6 ದಿನದಲ್ಲಿ 12 ಅಡಿ ನೀರು



ಮಲೇಬೆನ್ನೂರು, ಜು.8- ಭದ್ರಾ ಜಲಾಶಯಕ್ಕೆ 6 ದಿನಗಳಲ್ಲಿ 12 ಅಡಿ ನೀರು ಹರಿದು ಬಂದಿರುವುದು ಅಚ್ಚುಕಟ್ಟಿನ ರೈತರಿಗೆ ಸಂತಸ ತಂದಿದೆ.

ಜುಲೈ 3 ರಂದು ಜಲಾಶಯದಲ್ಲಿ 154 ಅಡಿ ನೀರಿತ್ತು. ಅಲ್ಲಿಂದ ಇಲ್ಲಿಯವರೆಗೆ ಮಲೆನಾಡಿನಲ್ಲಿ ಸುರಿದ ಮಳೆಯಿಂದಾಗಿ ಜಲಾಶಯಕ್ಕೆ 12 ಅಡಿ ನೀರು ಸಂಗ್ರಹವಾಗಿದೆ. ಶುಕ್ರವಾರ ಜಲಾಶಯಕ್ಕೆ 30 ಸಾವಿರ ಕ್ಯೂಸೆಕ್ಸ್ ಒಳಹರಿವು ಇದ್ದು, ಜಲಾಶಯದ ನೀರಿನ ಮಟ್ಟ 166 ಅಡಿ 4 ಇಂಚು ಆಗಿದೆ. ಕಳೆದ ವರ್ಷ ಈ ದಿನ ಜಲಾಶಯದಲ್ಲಿ 155 ಅಡಿ 8 ಇಂಚು ನೀರಿತ್ತು.

# ಮೇಘಸ್ಫೋಟ : 13 ಯಾತ್ರಿಗಳ ಸಾವು

ಶ್ರೀನಗರ, ಜು. 8 – ದಕ್ಷಿಣ ಕಾಶ್ಮೀರದ ಅಮರನಾಥ ಪವಿತ್ರ ಗುಹೆಯ ಬಳಿ ಮೇಘಸ್ಫೋಟ ಸಂಭವಿಸಿ ಕನಿಷ್ಠ 13 ಜನ ಸಾವನ್ನಪ್ಪಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಶುಕ್ರವಾರ ಸಂಜೆ 5.30ರ ಸಂದರ್ಭದಲ್ಲಿ ಮೇಘಸ್ಫೋಟ ಉಂಟಾಗಿ, ಯಾತ್ರಿಗಳ ಶಿಬಿರಕ್ಕೆ ನೀರು ಅಪ್ಪಳಿಸಿದೆ. ಇದರಿಂದ (4ನೇ ಪುಟಕ್ಕೆ)

# ನಿವೃತ್ತ ನೌಕರರಿಗೆ ಆರೋಗ್ಯ ಯೋಜನೆ ವಿಸ್ತರಣೆ

ಬೆಂಗಳೂರು, ಜು. 8 - ನಿವೃತ್ತ ಸರ್ಕಾರಿ ನೌಕರರಿಗೆ ಆರೋಗ್ಯ ಯೋಜನೆಯನ್ನು ವಿಸ್ತರಣೆ ಮಾಡುವುದಾಗಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

ರಾಜ್ಯ ಸರ್ಕಾರಿ ನಿವೃತ್ತ ನೌಕರರ ಸಂಘದ ವತಿಯಿಂದ ಆಯೋಜಿಸಿದ್ದ ಸರ್ಕಾರಿ ನಿವೃತ್ತ ನೌಕರರ ಸಂಘದ ಸುವರ್ಣ ಮಹೋತ್ಸವ ಉದ್ಘಾಟಿಸಿ ಮಾತನಾಡಿದ ಅವರು, ಆರ್ಥಿಕ ಇಲಾಖೆ ಅಧಿಕಾರಿಗಳೊಂದಿಗೆ ಚರ್ಚಿಸಿ ಆದಷ್ಟು ಬೇಗನೆ ಈ ಬಗ್ಗೆ ಘೋಷಣೆ (3ನೇ ಪುಟಕ್ಕೆ)

# ಪಾಲಿಸ್ಟರ್, ಯಂತ್ರದಿಂದ ಮಾಡಿದ ರಾಷ್ಟ್ರಧ್ವಜಕ್ಕೂ ತೆರಿಗೆ ವಿನಾಯಿತಿ

ನವದೆಹಲಿ, ಜು. 8 – ಪಾಲಿಸ್ಟರ್ ಹಾಗೂ ಯಂತ್ರದಿಂದ ಉತ್ಪಾದಿಸಿರುವುದೂ ಸೇರಿದಂತೆ ಎಲ್ಲಾ ರೀತಿಯ ರಾಷ್ಟ್ರಧ್ವಜಗಳಿಗೆ ಜಿ.ಎಸ್.ಟಿ. ವಿನಾಯಿತಿ ನೀಡಲಾಗುವುದು ಎಂದು ಕೇಂದ್ರ ಹಣಕಾಸು ಸಚಿವಾಲಯ ತಿಳಿಸಿದೆ.

ಕೈಮಗ್ಗದಿಂದ ಉತ್ಪಾದಿಸಲಾಗುವ ಹತ್ತಿ, ರೇಷ್ಮೆ ಇಲ್ಲವೇ ಖಾದಿ ರಾಷ್ಟ್ರಧ್ವಜಕ್ಕೆ ಈಗಾಗಲೇ ತೆರಿಗೆ ವಿನಾಯಿತಿ ಇದೆ.


ಕಳೆದ ವರ್ಷ ಡಿಸೆಂಬರ್‌ನಲ್ಲಿ ಧ್ವಜ (4ನೇ ಪುಟಕ್ಕೆ)


## ಭಾವಪೂರ್ಣ ಶ್ರದ್ಧಾಂಜಲಿ



ಕಾವೇರಿ ಎಂಟರ್‌ಪ್ರೈಸಸ್‌ನಲ್ಲಿ
ಮ್ಯಾನೇಜರ್ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದ
**ಶ್ರೀ ಕೆ. ಕೃಷ್ಣಮೂರ್ತಿ**
ಅವರು, ದಿನಾಂಕ: 07.07.2022 ರಂದು ದೈವಾಧೀನರಾಗಿದ್ದು, ಅವರಿಗೆ
ನಮ್ಮೆಲ್ಲರ ಭಾವಪೂರ್ಣ ಶ್ರದ್ಧಾಂಜಲಿಗಳು...
ಮೃತರ ಆತ್ಮಕ್ಕೆ ಭಗವಂತನು ಚಿರಶಾಂತಿಯನ್ನು ಕರುಣಿಸಲಿ
ಹಾಗೂ ಕುಟುಂಬ ವರ್ಗದವರಿಗೆ ಅಗಲಿಕೆಯ ದುಃಖ ಭರಿಸುವ ಶಕ್ತಿಯನ್ನು
ನೀಡಲಿ ಎಂದು ಪ್ರಾರ್ಥಿಸುತ್ತೇವೆ.

ಶ್ರೀಮತಿ ಗೌರಮ್ಮ ಮೋತಿ ರಾಮರಾವ್
ಹಾಗೂ ಕುಟುಂಬದವರು
ಕಾವೇರಿ ಎಂಟರ್‌ಪ್ರೈಸಸ್ &
ಮೋತಿ ಸಮೂಹ ಸಂಸ್ಥೆಗಳ ಸಿಬ್ಬಂದಿ ವರ್ಗ

# ಜಯತೀರ್ಥರ ಮೂಲ ವೃಂದಾವನದ ಬಗ್ಗೆ ಅನಗತ್ಯ ಗೊಂದಲ ಸೃಷ್ಟಿ: ಪ್ರತಿಭಟನೆ



ರಾಣೇಬೆನ್ನೂರು, ಜು. 8- ಮಳಖೇಡದ ಶ್ರೀ ಜಯತೀರ್ಥರ ಮೂಲ ವೃಂದಾವನದ ಕುರಿತು ತಪ್ಪು ಪ್ರಚಾರ ಮಾಡುವ ಮೂಲಕ ಸಮಾಜದಲ್ಲಿ ಅನಗತ್ಯ ಗೊಂದಲ ಸೃಷ್ಟಿಸುತ್ತಿರುವುದನ್ನು ಖಂಡಿಸಿ ಗುರುವಾರ ವಿಪ್ರ ಸಮಾಜದ ಜನರು ನಗರದಲ್ಲಿ ಪ್ರತಿಭಟಿಸಿ, ಉಪ ತಹಸೀಲ್ದಾರ್ ಎಂ.ಎನ್.ಹಾದಿಮನಿ ಮೂಲಕ ಮುಖ್ಯಮಂತ್ರಿಗಳಿಗೆ ಮನವಿ ಸಲ್ಲಿಸಿದರು.

ಈ ಸಮಯದಲ್ಲಿ ಸಂಜೀವ ಶಿರಹಟ್ಟಿ ಮಾತನಾಡಿ, ಜಯತೀರ್ಥರ ಮೂಲ ವೃಂದಾವನ ಮಳಖೇಡದಲ್ಲಿರುವುದನ್ನು ರಾಯರ ಮಠ ಸೇರಿದಂತೆ ಎಲ್ಲರೂ ನಿರ್ವಿವಾದವಾಗಿ ಒಪ್ಪಿಕೊಂಡಿದ್ದಾರೆ. ಆದರೆ ಇತ್ತೀಚೆಗೆ ಕೆಲವರು ಇತಿಹಾಸ ತಿರುಚುವ ಕಾರ್ಯದಲ್ಲಿ ತೊಡಗಿ ನವ ವೃಂದಾವನದಲ್ಲಿರುವ ರಘುವರ್ಯರ ವೃಂದಾವನವೇ ಜಯತೀರ್ಥರ ಮೂಲ ವೃಂದಾವನ ಎಂದು ತಪ್ಪು ಅಭಿಪ್ರಾಯ ಮೂಡಿಸುತ್ತಿರುವುದು ಖಂಡನೀಯ ಎಂದರು.

ವಿಶ್ವ ಕಂಡ ಅಪರೂಪದ ತತ್ವಜ್ಞಾನಿಗಳಲ್ಲಿ ಒಬ್ಬರಾದ ಮಧ್ವಾಚಾರ್ಯರ ಪೀಠ ಪರಂಪರೆಯಲ್ಲಿ ಐದನೇಯವರಾದ ಜಯತೀರ್ಥರು ತತ್ವಜ್ಞಾನಕ್ಕೆ ಅಪಾರ ಕೊಡುಗೆ ನೀಡಿದ್ದಾರೆ. ಇವರು ದೇಶದುದ್ದಕ್ಕೂ ಸಂಚರಿಸಿ, ಧರ್ಮ ಮತ್ತು ತತ್ವಜ್ಞಾನಗಳ ಪ್ರಸಾರ ಮಾಡುತ್ತಾ, ಕಲಬುರ್ಗಿ ಜಿಲ್ಲೆ ಸೇಡಂ ತಾಲ್ಲೂಕಿನ ಮಳಖೇಡ ಗ್ರಾಮದ ಕಾಗೀನಿ ನದಿ ದಂಡೆಯ ಮೇಲೆ ಸಮಾಧಿಯಲ್ಲಿ ಮಗ್ನರಾಗಿ ಇಹಲೋಕ ಯಾತ್ರೆ ಮುಗಿಸಿ, ವೃಂದಾವನ ಪ್ರವೇಶ ಮಾಡಿದರು. ಅಂದಿನಿಂದ ಇಂದಿನವರೆಗೂ ಸುಮಾರು 600 ವರ್ಷಕ್ಕೂ ಮಿಗಿಲಾಗಿ ಸಮಸ್ತ ಆಸ್ತಿಕ ಸಮುದಾಯಕ್ಕೆ ಇದು ಶ್ರದ್ಧಾ ಕೇಂದ್ರವಾಗಿದೆ.

ಅನೇಕ ಯತಿಗಳು, ಹರಿದಾಸರು, ಸಂತರು ಇಲ್ಲಿಗೆ ಭೇಟಿ ನೀಡಿ ಜಯತೀರ್ಥರ ಕುರಿತು ಕೃತಿಗಳಲ್ಲಿ ಹಾಡಿ ಹೊಗಳಿದ್ದಲ್ಲದೆ ಅದನ್ನೆಲ್ಲಾ ತಮ್ಮ ಕೃತಿಗಳಲ್ಲಿ ದಾಖಲಿಸಿದ್ದಾರೆ. ಆದ್ದರಿಂದ ಈ ಎಲ್ಲಾ ಅಂಶಗಳನ್ನು ಪರಾಂಬರಿಸಿ ಜು.17ರಿಂದ 19ರ ವರೆಗೆ ನವ ವೃಂದಾವನದಲ್ಲಿ ಜಯತೀರ್ಥರ ಆರಾಧನೆ ಮಾಡಲು ಪ್ರಯತ್ನ ನಡೆಸಿರುವುದು ಅವರ ಭಕ್ತರಿಗೆ ನೋವು ಉಂಟು ಮಾಡಿದೆ. ಯಾರೇ ಆಗಲಿ ಜಯತೀರ್ಥರ ಆರಾಧನೆ, ಪೂಜೆ ಮಾಡದಂತೆ ಸರ್ಕಾರ ಕ್ರಮ ಕೈಗೊಳ್ಳಬೇಕೆಂದು ಆಗ್ರಹಿಸಿದರು.

ಉತ್ತರಾದಿಮಠದ ಅಧಿಕಾರಿ ರಂಗವಿಠಲಾಚಾರ್ ಚಂದಿ, ಮಧ್ವ ಸಂಘದ ಅಧ್ಯಕ್ಷ ಜಯತೀರ್ಥ ಪಾಂಡುರಂಗಿ, ವಿದ್ಯಾಧೀಶ ಮಠದ ಮಧ್ವಾಚಾರ್ಯ ಪಾಂಡುರಂಗಿ, ಪಿ.ವಿ.ಹಂಚಿನಮನಿ, ಕಾಂತೇಶ ಗಲಗಲಿ, ಗುರುರಾಜ ವರಾಹಮೂರ್ತಿ, ಸೇತುರಾಂ ಹಲಗೇರಿ, ಅನಂತಾಚಾರ್ಯ ಚಂದಿ ಹಾಗೂ ತುಳಸಿ ಭಜನಾ ಮಂಡಳಿ, ವೇದಾವತಿ ಮಹಿಳಾ ಮಂಡಳಿ ಸದಸ್ಯರು ಪ್ರತಿಭಟನೆಯಲ್ಲಿದ್ದರು.

# ನ್ಯಾಮತಿ : ಬೇಡ ಜಂಗಮ ಸಂಘಟನೆಗಳಿಂದ ಪ್ರತಿಭಟನೆ




ನ್ಯಾಮತಿ, ಜು.8- ಬೇಡ ಜಂಗಮ ಸಂಘಟನೆಗಳ ಒಕ್ಕೂಟದ ಅಧ್ಯಕ್ಷ ಬಿ.ಡಿ. ಹಿರೇಮಠ ಅವರನ್ನು ಪೊಲೀಸರು ಅಜ್ಞಾತ ಸ್ಥಳಕ್ಕೆ ಕರೆದೊಯ್ದಿದ್ದಾರೆ ಎಂದು ಆರೋಪಿಸಿ, ಅಖಿಲ ಕರ್ನಾಟಕ ಬೇಡ ಜಂಗಮ ಸಂಘಟನೆಗಳ ಒಕ್ಕೂಟದಿಂದ ಪಟ್ಟಣದಲ್ಲಿ ಪ್ರತಿಭಟನೆ ನಡೆಸಲಾಯಿತು.

ಮೆರವಣಿಗೆಯು ಕಿತ್ತೂರು ರಾಣಿ ಚನ್ನಮ್ಮ ವೃತ್ತದದಿಂದ ಹೊರಟು, ಸರ್ಕಾರದ ವಿರುದ್ಧ ಘೋಷಣೆ ಹಾಕುತ್ತಾ ತಹಶೀಲ್ದಾರ್ ಕಚೇರಿಯನ್ನು ತಲುಪಿ, ರಾಜ್ಯದ ಮುಖ್ಯಮಂತ್ರಿಗಳಿಗೆ ಬರೆದ ಮನವಿ ಪತ್ರವನ್ನು ತಹಶೀಲ್ದಾರ್ ಎಂ.ರೇಣುಕ ಅವರಿಗೆ ನೀಡಿತು.

ಕುಳಗಟ್ಟೆ ಪರಮೇಶ್ವರಯ್ಯ ಮಾತನಾಡಿ, ಬೇಡ ಜಂಗಮರ ಸಂವಿಧಾನಿಕ ಹಕ್ಕುಗಳಿಗೆ ಸಂಬಂಧಿಸಿದ ಹೋರಾಟಗಳನ್ನು ಕಾಲ ಕಾಲಕ್ಕೆ ನಿರಂತರವಾಗಿ ಸುಳ್ಳು ಆಶ್ವಾಸನೆಗಳ ಮೂಲಕ ವಂಚಿಸುತ್ತಾ ಬಂದಿರುವುದು ಹೊಸತೇನಲ್ಲ, ಈ ಬಾರಿ ಅರ್ಧ ರಸ್ತೆಯಲ್ಲಿಯೇ ಜನರನ್ನು ತಡೆದುದಲ್ಲದೆ, ಮಂತ್ರಿಯೋರ್ವರನ್ನು ಕಳುಹಿಸಿ ಸುಳ್ಳು ಆಶ್ವಾಸನೆ ನೀಡಿಸಿದ್ದು ಅದರ ಮುಂದುವರೆದ ಭಾಗವೆಂಬುದನ್ನು ಗಂಭೀರವಾಗಿ ಪರಿಗಣಿಸಬೇಕು ಎಂದರು.

ಬೈರನಹಳ್ಳಿ ಪಂಚಾಕ್ಷರಯ್ಯ ಮಾತನಾಡಿ, ಮಂಗಳವಾರ ಹಿರೇಮಠ ಹಾಗೂ ಸಮಾಜದ ಮುಖಂಡರು ಮುಖ್ಯಮಂತ್ರಿಗಳ ನಿವಾಸಕ್ಕೆ ಮನವಿ ಪತ್ರ ಸಲ್ಲಿಸಲು ಹೋಗುವ ಸಂದರ್ಭದಲ್ಲಿ ಪೊಲೀಸರು ತಡೆದು, ಅವರನ್ನು ಅಜ್ಞಾತ ಸ್ಥಳಕ್ಕೆ ಕರೆದೊಯ್ದಿದ್ದಾರೆ. ಇದನ್ನು ಸಮಾಜ ತೀವ್ರವಾಗಿ ಖಂಡಿಸುತ್ತದೆ. ಪ್ರಮುಖ ಬೇಡಿಕೆಯಾದ ಬೇಡ ಜಂಗಮರಿಗೆ ಎಸ್‌ಸಿ ಜಾತಿ ಪ್ರಮಾಣ ಪತ್ರ ವಿತರಿಸಲು ತಕ್ಷಣ ನಿರ್ದೇಶನ ನೀಡಬೇಕು, ಬೇಡ ಜಂಗಮ ಪ್ರಮಾಣಪತ್ರ ವಿತರಿಸಲು ಹಳೆಯ ಸುತ್ತೋಲೆಗಳನ್ನು ಮುಂದಿಟ್ಟುಕೊಂಡು ವಿಳಂಬ ಹಾಗೂ ಗೊಂದಲ ಸೃಷ್ಟಿಸುತ್ತಿರುವ ಅಧಿಕಾರಿ ವರ್ಗದವರನ್ನು ಅಮಾನತ್ತು ಮಾಡಬೇಕು ಎಂದು ಒತ್ತಾಯಿಸಿದರು.

ಹೊನ್ನಾಳಿ ಎಂ.ಎಸ್. ಶಾಸ್ತ್ರಿ ಹೊಳೆಮಠ್ ಮಾತನಾಡಿದರು.

ಹೊನ್ನಾಳಿ ಮತ್ತು ನ್ಯಾಮತಿ ಬೇಡ ಜಂಗಮ ಸಮಾಜದ ಮುಖಂಡರಾದ ಬೈರನಹಳ್ಳಿ ಪಂಚಾಕ್ಷರಯ್ಯ, ಕುಳಗಟ್ಟೆ ಪರಮೇಶ್ವರಯ್ಯ, ಕುಳಗಟ್ಟೆ ಬಸಯ್ಯ, ಬನ್ನಿಕೊಡು ಬಸಯ್ಯ, ಹೊನ್ನಾಳಿ ಎಂ.ಎಸ್. ಶಾಸ್ತ್ರಿ ಹೊಳೆಮಠ್, ಒಡೆಯರ ಹತ್ತೂರು ಬಸಯ್ಯ, ಚಿನ್ನಿಕಟ್ಟೆ ಮುರಿಗೇಶಯ್ಯ, ಬೆನಕನಹಳ್ಳಿ ಬೆನಕಯ್ಯ ಶಾಸ್ತ್ರಿ, ರೇಣುಕಯ್ಯ ಶಾಸ್ತ್ರಿ ಹೊಳೆಮಠ್, ನಾಗ ರಾಜಯ್ಯ ಶಾಸ್ತ್ರಿ ವಿ.ಎಂ., ದಯಾನಂದಸ್ವಾಮಿ, ನಾಗರಾಜಯ್ಯ ಸಿಂಗಟಗೆರೆ, ನೀಲಮ್ಮ ಸೇರಿದಂತೆ ಅವಳಿ ತಾಲ್ಲೂಕಿನ ನೂರಾರು ಮುಖಂಡರು ಭಾಗವಹಿಸಿದ್ದರು.

# ಜಪಾನ್ ಮಾಜಿ ಪ್ರಧಾನಿ ಶಿಂಜೊ ಅಬೆ ಹತ್ಯೆ

**(1ನೇ ಪುಟದಿಂದ)** ಪೊಲೀಸರ ಪ್ರಶ್ನೆಗಳಿಗೆ ಶಾಂತವಾಗಿ ಉತ್ತರಿಸಿರುವ ಯಮಗಾಮಿ, ಅಬೆ ಮೇಲೆ ದಾಳಿ ನಡೆಸಿದ್ದನ್ನು ಒಪ್ಪಿಕೊಂಡಿದ್ದಾನೆ. ಅಬೆ ಅವರು ನಿರ್ದಿಷ್ಟ ಸಂಘಟನೆಯೊಂದರ ಜೊತೆ ಸಂಪರ್ಕ ಹೊಂದಿದ ಕಾರಣಕ್ಕೆ ಹತ್ಯೆ ಮಾಡಿದ್ದಾಗಿ ಹೇಳಿದ್ದಾನೆ. ಈ ಸಂಘಟನೆಯನ್ನು ಪೊಲೀಸರು ಇನ್ನೂ ಗುರುತಿಸಿಲ್ಲ.

ಜಪಾನ್‌ನ ಅತಿ ದೀರ್ಘ ಕಾಲ ಪ್ರಧಾನ ಮಂತ್ರಿಯಾಗಿದ್ದ ಅಬೆ, 2020ರಲ್ಲಿ ಅಧಿಕಾರದಿಂದ ಕೆಳಗಿಳಿದಿದ್ದರು. 2006ರಲ್ಲಿ ಅವರು ಜಪಾನ್‌ನ ಪ್ರಧಾನಿಯಾಗಿದ್ದರು. 52ರ ವಯಸ್ಸಿನಲ್ಲಿ ಅವರು ಈ ಹುದ್ದೆಗೆ ಬಂದ ಅತ್ಯಂತ ಕಿರಿಯ ಪ್ರಧಾನಿಯಾಗಿದ್ದರು. ಆದರೆ, ಅನಾರೋಗ್ಯದ ಕಾರಣದಿಂದ ವರ್ಷದಲ್ಲೇ ಅವರು ರಾಜೀನಾಮೆ ನೀಡಿದ್ದರು.

2012ರಲ್ಲಿ ಅವರು ಮತ್ತೆ ಅಧಿಕಾರಕ್ಕೆ ಬಂದಿದ್ದರು. ಆರು ರಾಷ್ಟ್ರೀಯ ಚುನಾವಣೆಗಳಲ್ಲಿ ಗೆಲುವು ಸಾಧಿಸಿದ್ದ ಅವರು, ಜಪಾನ್‌ನ ರಕ್ಷಣೆ ಬಲಪಡಿಸಿದ್ದರು. ಅವರ ಅವಧಿಯಲ್ಲಿ ಅಮೆರಿಕದ ಜೊತೆಗಿನ ಸಂಬಂಧ ವೃದ್ಧಿಯಾಗಿತ್ತು. ರಾಷ್ಟ್ರವಾದಕ್ಕೆ ಅವರು ಒತ್ತು ನೀಡಿದ್ದು, ನೆರೆಯ ದಕ್ಷಿಣ ಕೊರಿಯ ಹಾಗೂ ಚೀನಾಗಳಲ್ಲಿ ಅಸಮಾಧಾನಕ್ಕೂ ಕಾರಣವಾಗಿತ್ತು.

ಅಬೆ ಅವರು ಪ್ರಧಾನ ಮಂತ್ರಿ ಸ್ಥಾನದಿಂದ ಹೊರಗಿದ್ದರೂ ಸಹ, ಸಾಕಷ್ಟು ಪ್ರಭಾವಿಯಾಗಿದ್ದಾರೆ. ಆಡಳಿತಾರೂಢ ಲಿಬರಲ್ ಡೆಮಾಕ್ರಟಿಕ್ ಪಾರ್ಟಿಯ ಅತಿ ದೊಡ್ಡ ಬಣವಾದ ಸೈವಾಕಾಯಿಗೆ ಅವರು ಮುಖ್ಯಸ್ಥರಾಗಿದ್ದಾರೆ.

## ಯುದ್ಧ ಬೇಡವೆನ್ನುವ ಸಂವಿಧಾನ ಬದಲಿಸಲು ಮುಂದಾಗಿದ್ದ ಅಬೆ

ತೀವ್ರ ರಾಷ್ಟ್ರೀಯವಾದಿ ನಾಯಕರಾಗಿದ್ದ ಶಿಂಜೊ ಅಬೆ, ಯುದ್ಧದಿಂದ ದೂರವಿರಬೇಕು ಎಂಬ ಜಪಾನ್ ದೇಶದ ಸಂವಿಧಾನ ಬದಲಿಸಲು ಯತ್ನಿಸಿದ್ದರು.

ಅವರ ತೀವ್ರ ರಾಷ್ಟ್ರೀಯವಾದಿ ನಿಲುವು ಕೊರಿಯಾ ಹಾಗೂ ಚೀನಾಗಳಲ್ಲಿ ಅಸಮಾಧಾನಕ್ಕೂ ಕಾರಣವಾಗಿತ್ತು. ಸಾಮಾನ್ಯಕ್ಕಿಂತ ಹೆಚ್ಚಿನ ರಕ್ಷಣಾ ಬಿರುಸು ಜಪಾನ್‌ನ ಒಂದು ವರ್ಗದಲ್ಲೂ ಅತೃಪ್ತಿ ತಂದಿತ್ತು. ಜಪಾನ್‌ಗಾಗಿ ಅಮೆರಿಕ ರೂಪಿಸಿದ್ದ ಶಾಂತಿಪರ ಸಂವಿಧಾನವನ್ನು ಬದಲಿಸುವ ಅವರ ಗುರಿ ಕೊನೆಗೂ ಈಡೇರಲಿಲ್ಲ.

ಬಂದೂಕು ನಿಯಂತ್ರಣಕ್ಕೆ ಹೆಸರಾಗಿರುವ ಜಪಾನ್‌ನಲ್ಲಿ ಈ ಘಟನೆ ನಡೆದಿರುವುದು ಆ ದೇಶದಲ್ಲಷ್ಟೇ ಅಲ್ಲದೇ ವಿಶ್ವದಾದ್ಯಂತ ಆಘಾತ ತಂದಿದೆ.

12.5 ಕೋಟಿ ಜನಸಂಖ್ಯೆಯ ಜಪಾನ್‌ನಲ್ಲಿ ಕಳೆದ ವರ್ಷ ಬಂದೂಕು ಸಂಬಂಧದ ಕೇವಲ 10 ಅಪರಾಧಗಳು ನಡೆದಿದ್ದವು. ಈ ಘಟನೆಗಳಲ್ಲಿ ಒಬ್ಬರು ಸಾವನ್ನಪ್ಪಿದ್ದರು ಹಾಗೂ ನಾಲ್ವರು ಗಾಯಗೊಂಡಿದ್ದರು.

# ಜಿ.ಟಿ. ಕಟ್ಟೆ ರಸ್ತೆ ಅಭಿವೃದ್ಧಿಗೆ ಗ್ರಾಮಸ್ಥರ ಆಗ್ರಹ



ಮಲೇಬೆನ್ನೂರು, ಜು. 8- ಕೊಕ್ಕನೂರು ಗ್ರಾಮ ಪಂಚಾಯತ್ ವ್ಯಾಪ್ತಿಯ ಗುಡ್ಡದ ತುಮ್ಮಿನಕಟ್ಟೆ ಗ್ರಾಮದಲ್ಲಿ ಹಾದು ಹೋಗಿರುವ ಪಾಳ್ಯ - ಮೂಗಿನಗೊಂದಿ ರಸ್ತೆ ಸಂಪೂರ್ಣವಾಗಿ ಹಾಳಾಗಿದ್ದು, ವಾಹನಗಳ ಸಂಚಾರಕ್ಕೆ ತೀವ್ರ ತೊಂದರೆ ಆಗಿದೆ ಎಂದು ಗ್ರಾಮಸ್ಥರು ದೂರಿದ್ದಾರೆ.

ಈ ರಸ್ತೆಯು ಎಸ್ ಎಂ ಕೃಷ್ಣ ಅವರ ಸರ್ಕಾರದಲ್ಲಿ ಶಾಸಕರಾಗಿದ್ದ ಡಾ. ನಾಗಪ್ಪನವರ ಅವಧಿಯಲ್ಲಿ ನಿರ್ಮಾಣವಾಗಿದ್ದು, ಇಲ್ಲಿಗೆ 22 ವರ್ಷಗಳಾಗಿವೆ. ತದನಂತರ 2009-10ರಲ್ಲಿ ಆದ ಮಹಾಮಳೆಗೆ ಈ ರಸ್ತೆಯು ತೀರಾ ಹಾಳಾಗಿದ್ದು, ನಂತರ ಚುನಾಯಿತರಾದ ಜನಪ್ರತಿನಿಧಿಗಳ ನಿರ್ಲಕ್ಷ್ಯಕ್ಕೆ ಒಳಗಾಗಿರುತ್ತದೆ.

ಗುಡ್ಡದ ತುಮ್ಮಿನಕಟ್ಟೆ ಗ್ರಾಮವು ಗಡಿ ಗ್ರಾಮವಾಗಿದ್ದು ಅರಣ್ಯ ಪ್ರದೇಶದಿಂದ ಸುತ್ತುವರೆದಿದೆ. ಹೊನ್ನಾಳಿ, ಹರಿಹರ, ದಾವಣಗೆರೆ ನಗರಗಳಿಗೆ ಹೋಗಲು ಇದೊಂದೇ ರಸ್ತೆ ಅವಲಂಬಿತವಾಗಿದೆ. ವಿದ್ಯಾರ್ಥಿಗಳಿಗೆ ಸರಿಯಾದ ಸಮಯದಲ್ಲಿ ಸಾರಿಗೆ ವ್ಯವಸ್ಥೆಯು ಇಲ್ಲದಿರುವುದು ಶೈಕ್ಷಣಿಕ ವ್ಯವಸ್ಥೆಗೆ ಹಿನ್ನಡೆಯಾಗಿದೆ.

ಕೃಷಿ, ಆರೋಗ್ಯ ಸಮಸ್ಯೆಗಳಿಗೆ ದಿನಂಪ್ರತಿ ಓಡಾಡುವ ಸಾರ್ವಜನಿಕರು ಜನಪ್ರತಿನಿಧಿಗಳಿಗೆ, ಅಧಿಕಾರಿಗಳಿಗೆ, ಸರ್ಕಾರಕ್ಕೆ ಹಿಡಿಶಾಪ ಹಾಕಿಕೊಂಡು ಓಡಾಡುವ ಪರಿಸ್ಥಿತಿ ನಿರ್ಮಾಣವಾಗಿದೆ. ಸಂಬಂಧಪಟ್ಟವರು ಈ ಕೂಡಲೇ ಗಮನಹರಿಸಿ, ರಸ್ತೆ ಅಭಿವೃದ್ಧಿ ಪಡಿಸಬೇಕು ಇಲ್ಲದೆ ಹೋದರೆ ಮುಂಬರುವ ಚುನಾವಣೆಗಳನ್ನು ಬಹಿಷ್ಕರಿಸುವುದಾಗಿ ಗ್ರಾಮಸ್ಥರು ಎಚ್ಚರಿಕೆ ನೀಡಿದ್ದಾರೆ.

# ಅಸ್ಸಾಂ ಪ್ರವಾಹ ಉಲ್ಬಣ : ಇದುವರೆಗೂ 190 ಸಾವು

ಗುವಾಹತಿ, ಜು. 8 – ಅಸ್ಸಾಂನಲ್ಲಿ ಪ್ರವಾಹ ಪರಿಸ್ಥಿತಿ ಉಲ್ಬಣಿಸಿದ್ದು, ಶುಕ್ರವಾರ ಮೂವರು ಸಾವನ್ನಪ್ಪಿದ್ದಾರೆ. ಮತ್ತಷ್ಟು ಪ್ರದೇಶಗಳು ಜಲಾವೃತವಾಗಿವೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಈ ವರ್ಷದ ಮುಂಗಾರಿನಲ್ಲಿ ಪ್ರವಾಹ ಹಾಗೂ ಭೂಕುಸಿತದಿಂದಾಗಿ ರಾಜ್ಯದಲ್ಲಿ 190 ಜನ ಸಾವನ್ನಪ್ಪಿದ್ದಾರೆ. ರಾಜ್ಯದ 14 ಜಿಲ್ಲೆಗಳು ಪ್ರವಾಹ ಪೀಡಿತವಾಗಿವೆ. 8.88 ಲಕ್ಷ ಜನ ಪ್ರವಾಹದಲ್ಲಿ ಸಿಲುಕಿದ್ದಾರೆ.

# ಹೊನ್ನಾಳಿ ಪೊಲೀಸ್ ಠಾಣೆಗೆ ಎಡಿಜಿಪಿ ಅಲೋಕ್‌ಕುಮಾರ್ ದಿಢೀರ್ ಭೇಟಿ



ಹೊನ್ನಾಳಿ, ಜು. 9- ರಾಜ್ಯ ಹೆಚ್ಚುವರಿ ಪೊಲೀಸ್ ಮಹಾ ನಿರ್ದೇಶಕ (ಕಾನೂನು, ಸುವ್ಯವಸ್ಥೆ) ಅಲೋಕ್ ಕುಮಾರ್ ಅವರು ಗುರುವಾರ ದಾವಣಗೆರೆಗೆ ಭೇಟಿ ನೀಡಿ ಸಭೆ ನಡೆಸಿದ್ದು, ದಾವಣಗೆರೆಯಿಂದ ಶಿವಮೊಗ್ಗಕ್ಕೆ ತೆರಳುವ ಮಾರ್ಗ ಮಧ್ಯೆ ಶುಕ್ರವಾರ ಬೆಳಗ್ಗೆ ಹೊನ್ನಾಳಿ ಪೊಲೀಸ್ ಠಾಣೆಗೆ ಭೇಟಿ ನೀಡಿದರು.

ಈ ಠಾಣೆಯ ಕೆಲವೊಂದು ದಾಖಲೆಗಳನ್ನು ಪರಿಶೀಲನೆ ನಡೆಸಿದ ಅವರು, ಚಾರ್ಜ್‌ಶೀಟ್, ದಾಖಲೆಗಳು ಸಮರ್ಪಕವಾಗಿಲ್ಲ ಹಾಗೂ ದಾಖಲೆ ಪುಸ್ತಕದಲ್ಲಿ ಕೆಲವಾರು ಮಾಹಿತಿ ಅಸ್ಪಷ್ಟ ಎಂದು ಅವರು ತಮ್ಮ ಅಸಮಾಧಾನ ವ್ಯಕ್ತಪಡಿಸಿದರು. ಈ ಸಂದರ್ಭದಲ್ಲಿ ಪೂರ್ವವಲಯ ಐಜಿಪಿ ತ್ಯಾಗರಾಜನ್, ಸಿಪಿಐ ದೇವರಾಜ್, ಪಿ.ಎಸ್.ಐ. ಬಸವರಾಜ್ ಬಿರಾದಾರ್ ಉಪಸ್ಥಿತರಿದ್ದರು. ನಂತರ ಅವರು ಹೊನ್ನಾಳಿಯಿಂದ ಶಿವಮೊಗ್ಗದ ಕಡೆಗೆ ಪ್ರಯಾಣ ಬೆಳೆಸಿದರು.

# ಕರಾವಳಿ, ಮಲೆನಾಡುಗಳು ಬಿರುಮಳೆಯಿಂದ ತತ್ತರ

## ಉತ್ತರದ ರಾಜ್ಯಗಳಲ್ಲಿ ಪ್ರವಾಹ ಭೀತಿ

ಬೆಂಗಳೂರು, ಜು. 8 – ಕರಾವಳಿ ಹಾಗೂ ಮಲೆನಾಡಿನಲ್ಲಿ ಧಾರಾಕಾರ ಮಳೆ ಮುಂದುವರೆದಿದ್ದು, ಸಾಮಾನ್ಯ ಜನಜೀವನ ಅಸ್ತವ್ಯಸ್ತವಾಗಿದೆ. ಮಹಾರಾಷ್ಟ್ರದಲ್ಲೂ ಭಾರೀ ಮಳೆ ಸುರಿಯುತ್ತಿರುವುದರಿಂದ, ಉತ್ತರ ಕರ್ನಾಟಕದ ಹಲವೆಡೆ ಪ್ರವಾಹ ಪರಿಸ್ಥಿತಿ ಉಂಟಾಗಿದೆ.

ಮಹಾರಾಷ್ಟ್ರದಲ್ಲಿ ಭಾರೀ ಮಳೆಯಾಗುತ್ತಿರುವುದರಿಂದ ಕೃಷ್ಣಾ ನದಿ ಹಾಗೂ ಅದರ ಉಪ ನದಿಗಳಿಗೆ ಸಾಕಷ್ಟು ಒಳಹರಿವು ಬರುತ್ತಿದೆ ಎಂದು ಜಲ ಸಂಪನ್ಮೂಲ ಸಚಿವ ಗೋವಿಂದ ಕಾರಜೋಳ ತಿಳಿಸಿದ್ದಾರೆ.

ಆಲಮಟ್ಟಿ ಜಲಾಶಯಕ್ಕೆ 75 ಸಾವಿರ ಕ್ಯೂಸೆಕ್ಸ್ ನೀರು ಹರಿದು ಬರುತ್ತಿದೆ ಎಂದವರು ತಿಳಿಸಿದ್ದಾರೆ.

ಬಾಗಲಕೋಟೆ ಹಾಗೂ ಬೆಳಗಾವಿಗಳಲ್ಲಿ ಮುನ್ನೆಚ್ಚರಿಕಾ ಕ್ರಮ ತೆಗೆದುಕೊಳ್ಳಲಾಗುತ್ತಿದೆ. ಎರಡೂ ಜಿಲ್ಲೆಗಳ ತಗ್ಗು ಪ್ರದೇಶಗಳಲ್ಲಿ ನೀರು ನುಗ್ಗಿದೆ. ಕೊಡಗು, ದಕ್ಷಿಣ ಕನ್ನಡ, ಉಡುಪಿ, ಉತ್ತರ ಕನ್ನಡ ಸೇರಿದಂತೆ ಹಲವಾರು ಕರಾವಳಿ ಹಾಗೂ ಮಲೆನಾಡು ಜಿಲ್ಲೆಗಳು ಬಿರು ಮಳೆಯಿಂದ ತತ್ತರಿಸಿವೆ. ಕೊಡಗು ಹಾಗೂ ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಹಲವೆಡೆ ಭೂಕುಸಿತ ಉಂಟಾಗಿದೆ. ಎರಡೂ ಜಿಲ್ಲೆಗಳಲ್ಲಿ ಮುನ್ನೆಚ್ಚರಿಕೆ ಕ್ರಮವಾಗಿ ಶಾಲಾ-ಕಾಲೇಜುಗಳಿಗೆ ರಜೆ ಘೋಷಿಸಲಾಗಿದೆ.

## ಮಗನ ಬಿಟ್ಟು ಮಗಳ ಪಕ್ಷಕ್ಕೆ ಸೇರಿದ ತೆಲಂಗಾಣ ಸಿಎಂ ತಾಯಿ


ಅಮರಾವತಿ, ಜು. 8 – ವೈ.ಎಸ್.ಆರ್. ಕಾಂಗ್ರೆಸ್ ಪಕ್ಷಕ್ಕೆ ರಾಜೀನಾಮೆ ನೀಡಿರುವ ಆಂಧ್ರ ಪ್ರದೇಶದ ಮುಖ್ಯಮಂತ್ರಿ ವೈ.ಎಸ್. ಜಗನ್ ಮೋಹನ್ ರೆಡ್ಡಿ ಅವರ ತಾಯಿ ವೈ.ಎಸ್. ವಿಜಯಮ್ಮ ತಮ್ಮ ಮಗಳು ಶರ್ಮಿಳ ಜೊತೆ ಕೈ ಜೋಡಿಸಿದ್ದಾರೆ. ಶರ್ಮಿಳ ಅವರು ನೆರೆಯ ತೆಲಂಗಾಣದಲ್ಲಿ ವೈ.ಎಸ್.ಆರ್. ತೆಲಂಗಾಣ ಪಕ್ಷದ ಅಧ್ಯಕ್ಷೆಯಾಗಿದ್ದಾರೆ.


ರಾಜೀನಾಮೆ ನಿರ್ಧಾರ ಘೋಷಿಸಿರುವ ವಿಜಯಮ್ಮ, ತಾಯಿಯಾಗಿ ತಾವು ಸಹ ಜಗನ್‌ಮೋಹನ್‌ರೆಡ್ಡಿ ನಿಕಟವಾಗಿರುವುದಾಗಿ ಹೇಳಿದ್ದಾರೆ.

ತೆಲಂಗಾಣದಲ್ಲಿ ಶರ್ಮಿಳ ತಮ್ಮ ತಂದೆಯ ವಿಚಾರಧಾರೆಯನ್ನು ಮುಂದುವರೆಸಲು ಏಕಾಂಗಿ ಹೋರಾಟ ನಡೆಸುತ್ತಿದ್ದಾರೆ. ನಾನು ಅವರಿಗೆ ಬೆಂಬಲ ನೀಡಲಿದ್ದೇನೆ ಎಂದು ವಿಜಯಮ್ಮ ಹೇಳಿದ್ದಾರೆ.

ಜಗನ್ ಹಾಗೂ ಸಹೋದರಿಯ ನಡುವೆ ಆಸ್ತಿ ಸಂಬಂಧ ವಿವಾದ ಉಂಟಾಗಿದೆ ಎಂಬ ವರದಿಗಳಿದ್ದವು. ಇತ್ತೀಚಿನ ದಿನಗಳಲ್ಲಿ ವಿಜಯಮ್ಮ ತಮ್ಮ ಮಗನಿಂದ ದೂರವಾಗಿದ್ದರು.

# ಹರಿಹರದಲ್ಲಿ ನಾಳೆಯಿಂದ ಶ್ರೀ ರಂಭಾಪುರಿ ಜಗದ್ಗುರುಗಳ ಇಷ್ಟಲಿಂಗ ಮಹಾಪೂಜೆ





ಹರಿಹರ, ಜು. 8 - ನಗರದ ದೇವಸ್ಥಾನ ರಸ್ತೆಯ ಶ್ರೀ ಜಗದ್ಗುರು ರೇಣುಕಾಚಾರ್ಯ ಮಂದಿರದಲ್ಲಿ ನಾಡಿದ್ದು ದಿನಾಂಕ 10 ರಿಂದ 12 ರವರೆಗೆ ಶ್ರೀ ರಂಭಾಪುರಿ ಜಗದ್ಗುರುಗಳವರ ಆಷಾಢ ಮಾಸದ ಇಷ್ಟಲಿಂಗ ಮಹಾಪೂಜೆ ಹಾಗೂ ಧರ್ಮ ಜಾಗೃತಿ ಸಮಾರಂಭವನ್ನು ಹಮ್ಮಿಕೊಳ್ಳಲಾಗಿದೆ ಎಂದು ಬಸವೇಶ್ವರ ದೇವಸ್ಥಾನ ಸಮಿತಿಯ ಮುಖಂಡರು ತಿಳಿಸಿದ್ದಾರೆ.

ನಗರದ ದೇವಸ್ಥಾನ ರಸ್ತೆಯ ಶ್ರೀ ಜಗದ್ಗುರು ರೇಣುಕಾಚಾರ್ಯ ಮತ್ತು ಬಸವೇಶ್ವರ ಮಂದಿರದಲ್ಲಿ ಪತ್ರಕರ್ತರೊಂದಿಗೆ ಅವರು ಮಾತನಾಡಿದರು.

ದಿನಾಂಕ 10 ರ ಭಾನುವಾರ ಸಂಜೆ 6-30 ಕ್ಕೆ ಶ್ರೀಮದ್ ರಂಭಾಪುರಿ ಜಗದ್ಗುರು ಪ್ರಸನ್ನ ರೇಣುಕಾ ಡಾ. ವೀರಸೋಮೇಶ್ವರ ಶಿವಾಚಾರ್ಯ ಮಹಾಸ್ವಾಮೀಜಿ, ಹಿಮವತ್ಕೇದಾರ ಜಗದ್ಗುರು ಭೀಮಾಶಂಕರಲಿಂಗ ಶಿವಾಚಾರ್ಯ ಮಹಾಸ್ವಾಮೀಜಿ ದಿವ್ಯ ಸಾನ್ನಿಧ್ಯದಲ್ಲಿ ಧರ್ಮ ಜಾಗೃತಿ ಸಮಾರಂಭವನ್ನು ಅಖಿಲ ಭಾರತ ವೀರಶೈವ ಮಹಾಸಭಾ ಅಧ್ಯಕ್ಷರೂ ಆದ ಶಾಸಕ ಶಾಮನೂರು ಶಿವಶಂಕರಪ್ಪ ಉದ್ಘಾಟನೆ ಮಾಡಲಿದ್ದಾರೆ.

ಉಪದೇಶಾಮೃತವನ್ನು ಕಣ್ವಕುಪ್ಪೆ ಮಠದ ಶ್ರೀ ನಾಲ್ವಡಿ ಶಾಂತಲಿಂಗ ಶಿವಾಚಾರ್ಯ ಸ್ವಾಮೀಜಿ, ಕೋಡಿಯಾಲ ಹೊಸಪೇಟೆ ಗ್ರಾಮದ ಪುಣ್ಯಕೋಟಿ ಮಠದ ಶ್ರೀ ಜಗದೀಶ್ವರ ಸ್ವಾಮೀಜಿ ನೀಡಲಿದ್ದಾರೆ. ಮುಖ್ಯ ಅತಿಥಿಗಳಾಗಿ ಸಂಸದ ಜಿ. ಎಂ. ಸಿದ್ದೇಶ್ವರ, ಶಾಸಕ ಎಸ್. ರಾಮಪ್ಪ, ಮಾಜಿ ಶಾಸಕ ಬಿ.ಪಿ. ಹರೀಶ್, ಮಲೇಬೆನ್ನೂರು ಬಿ.ಎಂ. ನಂಜಯ್ಯ ಗುರುರಕ್ಷೆ ಮತ್ತು ಸನ್ಮಾನ ದೂಡಾ ಅಧ್ಯಕ್ಷ ಕೆ.ಎಂ. ಸುರೇಶ್, ತಪೋವನ ಚೇರ್ಮನ್ ಶಶಿಕುಮಾರ್ ಮೆಹರ್ವಾಡೆ ಹಾಗೂ ಇತರೆ ಗಣ್ಯ ವ್ಯಕ್ತಿಗಳಿಗೆ ಗುರುರಕ್ಷೆ ಕಾರ್ಯಕ್ರಮ ನಡೆಯಲಿದೆ.

ಇದೇ ದಿನಾಂಕ 11 ರಂದು ಸೋಮವಾರ ಸಂಜೆ 6-30 ಕ್ಕೆ ರಂಭಾಪುರಿ ಜಗದ್ಗುರು ಪ್ರಸನ್ನ ರೇಣುಕಾ ಡಾ ವೀರಸೋಮೇಶ್ವರ ಶಿವಾಚಾರ್ಯ ಮಹಾಸ್ವಾಮಿಗಳ ದಿವ್ಯ ಸಾನ್ನಿಧ್ಯದಲ್ಲಿ ಧರ್ಮ ಜಾಗೃತಿ ಸಮಾರಂಭ ನಡೆಯಲಿದೆ.

ನಾಂದಿ ನುಡಿ ಮಳಲಿ ಸಂಸ್ಥಾನ ಮಠದ ಡಾ. ನಾಗಭೂಷಣ ಶಿವಾಚಾರ್ಯ ಸ್ವಾಮೀಜಿ, ಹರಪನಹಳ್ಳಿ ತೆಗ್ಗಿನಮಠದ ಶ್ರೀ ವರಸದ್ಯೋಜಾತ ಶಿವಾಚಾರ್ಯ ಸ್ವಾಮೀಜಿ ಉಪದೇಶಾಮೃತ ನೀಡಲಿದ್ದಾರೆ.

ಮುಖ್ಯ ಅತಿಥಿಗಳಾಗಿ ರಾಣೇಬೆನ್ನೂರು ಶಾಸಕ ಅರುಣ್ ಕುಮಾರ್ ಪೂಜಾರ್, ಮಾಜಿ ಶಾಸಕ ಹೆಚ್. ಎಸ್. ಶಿವಶಂಕರ್, ಜಿಲ್ಲಾ ಜೆಡಿಎಸ್ ಅಧ್ಯಕ್ಷ ಬಿ. ಚಿದಾನಂದಪ್ಪ, ಜುಂಜಪ್ಪ ಹೆಗ್ಗಪ್ಪ, ದಾವಣಗೆರೆ-ಹರಿಹರ ಅರ್ಬನ್ ಬ್ಯಾಂಕ್ ಅಧ್ಯಕ್ಷ ಎನ್.ಎ. ಮುರುಗೇಶ್ ಉಪಸ್ಥಿತರಿರಲಿದ್ದಾರೆ.

# ನದಿ ನೀರು ಹೆಚ್ಚಳ ಎದುರಿಸಲು ಸನ್ನದ್ಧರಾಗಿ



**(1ನೇ ಪುಟದಿಂದ)** ಎಂದು ಹೇಳಿದರು.

ತಹಶೀಲ್ದಾರ್ ಎಂ.ಬಿ. ಅಶ್ವತ್ಥ್ ಮಾತನಾಡಿ, ಕಾಳಜಿ ಕೇಂದ್ರಗಳನ್ನು ತೆರೆದು ಸಂತ್ರಸ್ತರಿಗೆ ಊಟ, ಆರೋಗ್ಯ ತಪಾಸಣೆ, ಔಷಧಿ ವಿತರಣೆ ಸೇರಿದಂತೆ ವಿವಿಧ ಸೌಲಭ್ಯಗಳನ್ನು ಒದಗಿಸಲು ವ್ಯವಸ್ಥೆ ಮಾಡಲಾಗಿದೆ ಎಂದು ಹೇಳಿದರು.

ನಗರದ ಎಪಿಎಂಸಿ ಆವರಣದಲ್ಲಿ ಕಾಳಜಿ ಕೇಂದ್ರವನ್ನು ತೆರೆಯಲು ಸೂಚನೆ ನೀಡಲಾಗಿದೆ. ತಾಲ್ಲೂಕಿನ ಎಲ್ಲಾ ಗ್ರಾಮ ಪಂಚಾಯತಿ ವಿ.ಎ. ಹಾಗೂ ಪಿಡಿಓ ರವರು ಕಾರ್ಯಸ್ಥಾನದಲ್ಲೇ ಇದ್ದು ಸಾರ್ವಜನಿಕರಿಗೆ ತೊಂದರೆ ಆಗದಂತೆ ನೋಡಿಕೊಳ್ಳಬೇಕು ಮತ್ತು ಗ್ರಾಮ ಗಳಲ್ಲಿ ಮುಂಜಾಗ್ರತಾ ಕ್ರಮಗಳ ಬಗ್ಗೆ ಟಾಂ ಟಾಂ ಹೊರ ಡಿಸಲು ಸೂಚನೆ ನೀಡಲಾಗಿದೆ ಎಂದವರು ತಿಳಿಸಿದರು.

ಉಕ್ಕಡಗಾತ್ರಿ ಗ್ರಾಮಕ್ಕೆ ಬದಲಿ ಮಾರ್ಗದಲ್ಲಿ ಸಂಚರಿಸುವ ವ್ಯವಸ್ಥೆ ಮಾಡಲಾಗಿದೆ ಮತ್ತು ನಗರ ಸೇರಿದಂತೆ ಗ್ರಾಮೀಣ ಪ್ರದೇಶಗಳಲ್ಲಿ ನದಿಯ ದಂಡೆಯ ಮೇಲೆ ಸಾರ್ವಜನಿಕರು ಓಡಾಡದಂತೆ ಅವರನ್ನು ತಡೆಯಲು ಮತ್ತು ಉಕ್ಕಡಗಾತ್ರಿ ಸ್ನಾನ ಗೃಹದ ಬಳಿ ಪೊಲೀಸ್ ಸಿಬ್ಬಂದಿಗಳನ್ನು ನೇಮಕ ಮಾಡಲಾಗಿದೆ ಎಂದೂ ಅವರು ಹೇಳಿದರು.

ನೀರಿನ ಪ್ರಮಾಣ ಹೆಚ್ಚಾದರೆ ಸಾರಥಿ ಮತ್ತು ಪಾಮೇನಹಳ್ಳಿ ಗ್ರಾಮಗಳಲ್ಲಿ ಸೇತುವೆಯ ಮೇಲೆ ಓಡಾಡಲು ತೊಂದರೆಯಾಗುತ್ತದೆ. ಆ ಗ್ರಾಮಕ್ಕೆ ಬೋಟಿಂಗ್ ವ್ಯವಸ್ಥೆ ಕಲ್ಪಿಸಲು ಸಿದ್ಧತೆ ನಡೆಸಲಾಗಿದೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಕೃಷಿ ಸಹಾಯಕ ನಿರ್ದೇಶಕ ನಾರನಗೌಡ, ತೋಟಗಾರಿಕೆ ಇಲಾಖೆಯ ಅಧಿಕಾರಿ ರೇಖಾ, ಪಿಎಸ್‌ಐ ಸುರೇಶ್, ನಗರಸಭೆ ಪೌರಾಯುಕ್ತ ಐಗೂರು ಬಸವರಾಜ್ ಮುಂಜಾಗ್ರತಾ ಕ್ರಮಗಳ ಮಾಹಿತಿ ಒದಗಿಸಿದರು.

ಈ ಸಂದರ್ಭದಲ್ಲಿ ಪಶುಸಂಗೋಪನಾ ಇಲಾಖೆಯ ಟಿ. ಕೆ. ಸಿದ್ದೇಶ್, ತಾಲ್ಲೂಕು ಪಂಚಾಯ್ತಿಯ ಸುನಿಲ್ ಕುಮಾರ್, ಅಗ್ನಿಶಾಮಕ ದಳದ ಅಧಿಕಾರಿ ಸುಹಾಸ್, ಆಹಾರ ಇಲಾಖೆಯ ರಮೇಶ್, ನಗರಸಭೆ ಎಇಇ ಬಿರಾದಾರ ಸಮಾಜ ಕಲ್ಯಾಣ ಇಲಾಖೆಯ ನಜೀರ್ ಹುಸೇನ್ ಮತ್ತಿತರರು ಉಪಸ್ಥಿತರಿದ್ದರು.

# ಆಮ್ನೆಸ್ಟಿ, ಮಾಜಿ ಅಧ್ಯಕ್ಷನಿಗೆ 61 ಕೋಟಿ ರೂ.ಗಳ ದಂಡ

ನವದೆಹಲಿ, ಜು. 8 – ವಿದೇಶಿ ವಿನಿಮಯ ಕಾಯ್ದೆ ಉಲ್ಲಂಘಿಸಿದ್ದಕ್ಕಾಗಿ ಆಮ್ನೆಸ್ಟಿ ಇಂಡಿಯಾ ಹಾಗೂ ಅದರ ಮಾಜಿ ಅಧ್ಯಕ್ಷ ಆಕಾರ್ ಪಟೇಲ್‌ಗೆ ಜಾರಿ ನಿರ್ದೇಶ ನಾಲಯ (ಇ.ಡಿ.) 61.72 ಕೋಟಿ ರೂ.ಗಳ ದಂಡ ವಿಧಿಸಿದೆ. ಜಾರಿ ನಿರ್ದೇಶನಾಲಯದ ಕ್ರಮವನ್ನು ನ್ಯಾಯಾಲಯದಲ್ಲಿ ಪ್ರಶ್ನಿಸುವುದಾಗಿ ಪಟೇಲ್ ಹೇಳಿದ್ದಾರೆ.

ಪಟೇಲ್‌ಗೆ ವಿಧಿಸಿರುವ ದಂಡ 10 ಕೋಟಿ ರೂ. ಹಾಗೂ ಆಮ್ನೆಸ್ಟಿಗೆ ವಿಧಿಸಿರುವ ದಂಡ 51.72 ಕೋಟಿ ರೂ. ಆಗಿದೆ.

ಜಾರಿ ನಿರ್ದೇಶನಾಲಯದ ವಿಶೇಷ ನಿರ್ದೇಶಕ ಹಂತದ ಅಧಿಕಾರಿಯೊಬ್ಬರು ತನಿಖೆ ನಡೆಸಿದ ನಂತರ ಈ ದಂಡ ವಿಧಿಸಲಾಗಿದೆ.

2013ರಿಂದ 2018ರ ನಡುವೆ ಲಂಡನ್ ಮೂಲಕ ಆಮ್ನೆಸ್ಟಿ ಇಂಟರ್‌ನ್ಯಾಷನಲ್ ಸಂಸ್ಥೆಯು ಭಾರತದ ಸಂಸ್ಥೆಗಳಿಗೆ ಭಾರೀ ಹಣ ನೀಡಿದೆ. ಎಫ್.ಸಿ.ಆರ್.ಎ. ಪರಿಶೀಲನೆಯಿಂದ ನುಣುಚಿಕೊಳ್ಳಲು, ಔದ್ಯಮಿಕ ಚಟುವಟಿಕೆಯ ಸೋಗಿನಲ್ಲಿ ಈ ಹಣ ನೀಡಲಾಗಿತ್ತು ಎಂದು ಜಾರಿ ನಿರ್ದೇಶನಾಲಯ ತಿಳಿಸಿದೆ.

# ಬಹುಮತವಿದ್ದರೂ ಅಧಿಕಾರ ಹಿಡಿಯುವಲ್ಲಿ ವಿಫಲ : ಪಕ್ಷಕ್ಕೆ ದ್ರೋಹ ಬಗೆದವರ ವಿರುದ್ಧ ಕ್ರಮ

## ಹರಪನಹಳ್ಳಿಯಲ್ಲಿ ಕೆಪಿಸಿಸಿ ವೀಕ್ಷಕಿ ಕವಿತಾ ರೆಡ್ಡಿ



ಹರಪನಹಳ್ಳಿ, ಜು.8- ಪುರಸಭಾ ಅಧ್ಯಕ್ಷರ ಚುನಾವಣೆಯಲ್ಲಿ ಬಹುಮತವಿದ್ದರೂ ಅಧಿಕಾರ ಹಿಡಿಯುವಲ್ಲಿ ಕಾಂಗ್ರೆಸ್‌ಗೆ ಹಿನ್ನಡೆಯಾಗಿ ಸೋಲು ಕಾಣುವಂತಾಗಿದ್ದು, ಕಾಂಗ್ರೆಸ್ ಪಕ್ಷಕ್ಕೆ ದ್ರೋಹ ಬಗೆದವರ ವಿರುದ್ಧ ಕ್ರಮ ಕೈಗೊಳ್ಳಲಾಗುವುದು ಎಂದು ಕೆಪಿಸಿಸಿ ವೀಕ್ಷಕರಾದ ಕವಿತಾ ರೆಡ್ಡಿ ತಿಳಿಸಿದ್ದಾರೆ.

ಇಂದಿಲ್ಲಿ ಪುರಸಭಾ ಅಧ್ಯಕ್ಷರ ಚುನಾವಣೆ ಮುಗಿದ ನಂತರ ಕಾಂಗ್ರೆಸ್ ಕಛೇರಿಯಲ್ಲಿ ಜರುಗಿದ ಸುದ್ದಿಗೋಷ್ಠಿಯನ್ನು ಉದ್ದೇಶಿಸಿ ಮಾತನಾಡಿದ ಅವರು, ಪುರಸಭಾ ಅಧ್ಯಕ್ಷ ಸ್ಥಾನಕ್ಕೆ ಕಾಂಗ್ರೆಸ್ ಪಕ್ಷದಿಂದ ಡಿ. ಅಬ್ದುಲ್ ರೆಹಮಾನ್ ಅವರನ್ನು ಅಭ್ಯರ್ಥಿಯನ್ನಾಗಿ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರೇ ಆಯ್ಕೆ ಮಾಡಿ ಘೋಷಣೆ ಮಾಡಿದ್ದರು ಎಂದು ಹೇಳಿದರು.

ಕೆಪಿಸಿಸಿಗೆ ಜಾಕೀರ್, ಭರತೇಶ, ಡಿ. ಅಬ್ದುಲ್ ರೆಹಮಾನ್ ಹೀಗೆ ಒಟ್ಟು ಮೂರು ಜನ ಅಭ್ಯರ್ಥಿಗಳ ಹೆಸರುಗಳು ಹೋಗಿದ್ದವು. ಹಡಗಲಿ ಶಾಸಕ ಪಿ.ಟಿ. ಪರಮೇಶ್ವರನಾಯ್ಕ ಸೇರಿದಂತೆ, ಇಲ್ಲಿನ ಎಲ್ಲಾ ಮುಖಂಡರನ್ನು, ಕಾರ್ಯಕರ್ತರನ್ನು ವಿಶ್ವಾಸಕ್ಕೆ ತೆಗೆದುಕೊಂಡೇ ಅಭ್ಯರ್ಥಿ ಡಿ. ಅಬ್ದುಲ್ ರೆಹಮಾನ್ ಅವರನ್ನು ಕೆಪಿಸಿಸಿ ಅಧ್ಯಕ್ಷರು ಅಭ್ಯರ್ಥಿ ಎಂದು ಘೋಷಣೆ ಮಾಡಿದ್ದರು ಎಂದು ಹೇಳಿದರು.

ವಿಪ್ ಉಲ್ಲಂಘಿಸಿ ಪಕ್ಷಕ್ಕೆ ದ್ರೋಹ ಮಾಡಿ 8 ಜನ ಸದಸ್ಯರು ಗೈರಾಗಿದ್ದಾರೆ. ಕಾಂಗ್ರೆಸ್ ಪಕ್ಷದ ಚಿಹ್ನೆ ನೋಡಿ ಇವರುಗಳಿಗೆ ಜನರು ಮತ ಹಾಕಿದ್ದಾರೆ, ವಿಪ್ ಉಲ್ಲಂಘಿಸಿದ್ದಾರೆ. ಈ ಬಾರಿ ಖಂಡಿತಾ ಕ್ರಮ ಆಗುತ್ತದೆ ಎಂದು ಹೇಳಿದರು.

ಗೈರಾದ 8 ಜನ ಕಾಂಗ್ರೆಸ್ ಸದಸ್ಯರು ಹಾಗೂ ಅವರುಗಳಿಗೆ ಬೆಂಬಲ ಕೊಟ್ಟವರ ವಿರುದ್ಧ ಕ್ರಮಕ್ಕೆ ನಾನು ಕೆಪಿಸಿಸಿಗೆ ಶಿಫಾರಸ್ಸು ಮಾಡುತ್ತೇನೆ ಎಂದು ಕವಿತಾ ರೆಡ್ಡಿ ವಿವರಿಸಿದರು.

ಪುರಸಭೆ ಸದಸ್ಯರು ಹಾಗೂ ಪಿ.ಟಿ. ಪರಮೇಶ್ವರನಾಯ್ಕ ಇತರೆ ಮುಖಂಡರನ್ನು ಒಳಗೊಂಡು ಚುನಾವಣೆ ಪೂರ್ವದಲ್ಲಿ ನಡೆಸಿದ ಸಭೆಯಲ್ಲಿ ಎಲ್ಲಾ ಸದಸ್ಯರು ಹೈಕಮಾಂಡ್ ಸೂಚಿಸಿದ ಅಭ್ಯರ್ಥಿಗೆ ಮತ ಚಲಾಯಿಸುವುದಾಗಿ ಭರವಸೆ ನೀಡಿದರು. ವಿಪ್ ಅನ್ನು ಎಲ್ಲರ ಮನೆಗಳಿಗೆ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರು ನೀಡಿದ್ದರೂ ಸಹ ಚುನಾವಣೆಯಿಂದ ದೂರ ಸರಿದಿರುವುದು ಬೇಸರದ ಸಂಗತಿಯಾಗಿದೆ ಎಂದರು.

ನಮ್ಮ ಅಭ್ಯರ್ಥಿ ಅಬ್ದುಲ್ ರೆಹಮಾನ್ ಅವರು ಈ ಹಿಂದೆ ಪುರಸಭಾ ವಾರ್ಡ್ ಚುನಾವಣೆಯಲ್ಲಿ ಪಕ್ಷೇತರ ಅಭ್ಯರ್ಥಿಯಾಗಿ ಜಯ ಗಳಿಸಿದ್ದರೂ ಕಾಂಗ್ರೆಸ್ ಪಕ್ಷದಲ್ಲಿಯೇ ಗುರುತಿಸಿಕೊಂಡಿದ್ದರು ಎಂದರು. ಸ್ಥಳೀಯವಾಗಿ ಕಾಂಗ್ರೆಸ್ ಪಕ್ಷದಲ್ಲಿ ಕೆಲವೊಂದು ಸಮಸ್ಯೆಗಳಿವೆ. ಸಮಗ್ರ ವರದಿಯನ್ನು ಕೆಪಿಸಿಸಿಗೆ ಸಲ್ಲಿಸುತ್ತೇನೆ ಎಂದು ಹೇಳಿದರು.

ಹರಪನಹಳ್ಳಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಬೇಲೂರು ಅಂಜಪ್ಪ, ಚಿಗಟೇರಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಪ್ರೇಮಕುಮಾರ, ಕೆಪಿಸಿಸಿ ಮಾಧ್ಯಮ ವಿಶ್ಲೇಷಕಿ ಎಂ.ಪಿ. ವೀಣಾ ಮಹಾಂತೇಶ್, ಪ್ರಚಾರ ಸಮಿತಿ ಅಧ್ಯಕ್ಷ ಎಂ.ಟಿ. ಶುಭಾಶ್ಚಂದ್ರ, ಕಾನಹಳ್ಳಿ ರುದ್ರಪ್ಪ, ಎಲ್. ಮಂಜಾನಾಯ್ಕ, ಇರ್ಫಾನ್ ಮುದುಗಲ್, ಪ್ರಸಾದ್ ಕಾವಡಿ, ತೆಲಿಗಿ ಟಿ.ಮಂಜುನಾಥ, ಟಿ. ಉಮಾಕಾಂತ, ಬಿ. ಅಂಜಿನಪ್ಪ, ಚಿಕ್ಕೇರಿ ಬಸಪ್ಪ, ನೀಲಗುಂದ ಮಂಜುನಾಥ, ಎಂ.ವಿ. ಅಂಜಿನಪ್ಪ, ಟಿ. ವೆಂಕಟೇಶ, ಗೊಂಗಡಿ ನಾಗರಾಜ, ಲಾಟಿ ದಾದಾಪೀರ್, ಮುಖಂಡ ಬಿ.ಷೇಕ್ ಷಾವಲಿ ಸೇರಿದಂತೆ ಪುರಸಭಾ ಸದಸ್ಯರು ಸುದ್ದಿಗೋಷ್ಠಿಯಲ್ಲಿ ಹಾಜರಿದ್ದರು.

# ಗುರು - ಹೆತ್ತವರ ಋಣ ತೀರಿಸಲು ಸಾಧ್ಯವಿಲ್ಲ



**ಶ್ರೀ ಅನ್ನದಾನೀಶ್ವರ ಶಾಖಾ ಮಠದಲ್ಲಿನ ಶಿವಾನುಭವ ಸಂಪದ ಕಾರ್ಯಕ್ರಮದಲ್ಲಿ ಆವರಗೊಳ್ಳದ ಶ್ರೀ ಓಂಕಾರ ಶಿವಾಚಾರ್ಯ ಸ್ವಾಮೀಜಿ**

ದಾವಣಗೆರೆ, ಜು. 8- ಮನುಷ್ಯ ಎಷ್ಟೇ ಶ್ರೀಮಂತರಾಗಿ ಆಸ್ತಿ, ಅಂತಸ್ತು, ಹಣಕಾಸು ಹೊಂದಿದ್ದರೂ ಸಹಾ ಗುರು, ತಂದೆ, ತಾಯಿ ಹಾಗೂ ಭೂಮಿ ಈ ಮೂರು ಋಣಗಳನ್ನು ತೀರಿಸಲು ಸಾಧ್ಯವಿಲ್ಲ ಎಂದು ಆವರಗೊಳ್ಳ ಪುರವರ್ಗ ಹಿರೇಮಠದ ಶ್ರೀ ಓಂಕಾರ ಶಿವಾಚಾರ್ಯ ಸ್ವಾಮೀಜಿ ಹೇಳಿದರು.

ನಗರದ ಹಾಲಕೆರೆ ಶ್ರೀ ಅನ್ನದಾನೀಶ್ವರ ಶಾಖಾ ಮಠದಲ್ಲಿ ಹಮ್ಮಿಕೊಂಡಿದ್ದ 247ನೇ ಶಿವಾನುಭವ ಸಂಪದ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿದ ಶ್ರೀಗಳು, ಈ ಮೂರು ಋಣಗಳಿಂದ ಮುಕ್ತರಾಗಬೇಕೆಂದರೆ ಅವರ ಸ್ಮರಣೆ ಸದಾ ಇರಬೇಕು, ಇದರಿಂದ ಮನುಷ್ಯ ಎತ್ತರಕ್ಕೆ ಬೆಳೆಯುವುದರ ಜೊತೆಗೆ ಆರೋಗ್ಯವಂತನಾಗಿರುತ್ತಾನೆ ಎಂದರು.

ದಾವಣಗೆರೆ-ಹರಿಹರ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಕೆ.ಎಂ.ಸುರೇಶ್ ಮಾತನಾಡಿ, ಇಂತಹ ಅಧ್ಯಾತ್ಮ ಕಾರ್ಯಕ್ರಮಗಳಲ್ಲಿ ಭಾಗವಹಿಸುವುದರಿಂದ ಮನಸ್ಸು ಹಗುರವಾಗುತ್ತದೆ. ಎಷ್ಟೇ ಒತ್ತಡಗಳು ಇದ್ದರೂ ಇದರಿಂದ ಶಾಂತಿ, ನೆಮ್ಮದಿ ಸಿಗುತ್ತದೆ ಎಂದರು.

ಹರಿಹರ ತಾಪಂ ಮಾಜಿ ಅಧ್ಯಕ್ಷ ಟಿ.ಜೆ. ಮುರುಗೇಶಪ್ಪ ಮಾತನಾಡಿ, ಮಕ್ಕಳನ್ನು ಸಂಸ್ಕಾರವಂತರನ್ನಾಗಿ ಬೆಳೆಸಬೇಕು. ತಂದೆ-ತಾಯಿ ಸ್ಮರಣೆಯ ಜೊತೆಗೆ ಹಸಿದವರಿಗೆ ಅನ್ನ ನೀಡಿದರೆ ಪುಣ್ಯ ಬರುತ್ತದೆ. ಪ್ರತಿಯೊಬ್ಬರೂ ಕೂಡಾ ಸೇವಾ ಮನೋಭಾವ ಬೆಳೆಸಿಕೊಳ್ಳಿ ಎಂದರು.

ಸರ್ಕಾರಿ ಹುದ್ದೆಯಲ್ಲಿ ಪ್ರಾಮಾಣಿಕತೆಯಿಂದ ಸೇವೆ ಸಲ್ಲಿಸಿ, ನಿವೃತ್ತಿ ಹೊಂದಿದ ಕಾರ್ಯನಿರ್ವಾಹಕ ಅಭಿಯಂತರ ಟಿ.ಎಂ.ಚಂದ್ರಶೇಖರಪ್ಪನವರಿಗೆ ಶ್ರೀಮಠದಿಂದ 'ಅಭಿಯಂತ ಶ್ರೇಷ್ಠ' ಪ್ರಶಸ್ತಿ ಪ್ರದಾನ ಮಾಡಲಾಯಿತು.

ಟ್ರಸ್ಟ್‌ನ ಉಪಾಧ್ಯಕ್ಷ ಅಮರಯ್ಯ ಗುರುವಿನ ಮಠ ಅಧ್ಯಕ್ಷತೆಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಟ್ರಸ್ಟ್ ಕಾರ್ಯದರ್ಶಿ ಎನ್.ಅಡಿವೆಪ್ಪ, ನಾಗರಾಜ ಯರಗಲ್, ಟಿ.ಜೆ.ಬಕ್ಕೇಶಪ್ಪ, ತಿಪ್ಪಣ್ಣ ಇತರರು ಇದ್ದರು. ಆರಂಭದಲ್ಲಿ ಟಿಎಚ್‌ಎಂ ಶಿವಕುಮಾರಸ್ವಾಮಿ ಪ್ರಾರ್ಥಿಸಿದರೆ, ಇಂದಿನ ಸುದ್ದಿ ಸಂಪಾದಕ ವೀರಪ್ಪ ಎಂ.ಬಾವಿ ಸ್ವಾಗತಿಸಿದರು. ಟಿ.ಜೆ.ಸುರೇಶ್ ವಂದಿಸಿದರು. ಶಿಕ್ಷಕಿ ಸುಜಾತ ಕಾರ್ಯಕ್ರಮ ನಿರೂಪಿಸಿದರು.

ಈ ಸಂದರ್ಭದಲ್ಲಿ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಉಪಾಧ್ಯಕ್ಷ ಆರ್.ಎಸ್. ತಿಪ್ಪೇಸ್ವಾಮಿ, ಕಾರ್ಯಕಾರಿ ಸಮಿತಿ ಸದಸ್ಯ ಮುದ್ದಪ್ಪ ಅವರನ್ನು ಸನ್ಮಾನಿಸಲಾಯಿತು.

ಲಿಂಗೈಕ್ಯ ಶ್ರೀಮತಿ ತಿಪ್ಪಮ್ಮ, ಲಿಂ.ಯಜಮಾನ್ ಟಿ. ಜಯದೇವಪ್ಪ ಅವರ ಸ್ಮರಣಾರ್ಥ ಅವರ ಮಕ್ಕಳು ಭಕ್ತಿ ಸೇವೆಯನ್ನು ವಹಿಸಿಕೊಂಡಿದ್ದರು.

# ಕಾಂಗ್ರೆಸ್ ಒಳ ಜಗಳದಲ್ಲಿ ಅರಳಿದ ಕಮಲ

## ಹರಪನಹಳ್ಳಿ ಪುರಸಭೆ ಅಧ್ಯಕ್ಷರಾಗಿ ಬಿಜೆಪಿಯ ಹೆಚ್.ಎಂ. ಅಶೋಕ



ಹರಪನಹಳ್ಳಿ, ಜು.8- ತೀವ್ರ ಕುತೂಹಲ ಕೆರಳಿಸಿದ್ದ ಸ್ಥಳೀಯ ಪುರಸಭೆ ಕಾಂಗ್ರೆಸ್ ಒಳಜಗಳದಿಂದ ಎರಡನೇ ಅವಧಿಗೂ ಕೂಡ ಬಿಜೆಪಿ ವಶವಾಗಿದ್ದು, ಅಧ್ಯಕ್ಷರಾಗಿ ಪಟ್ಟಣದ 5ನೇ ವಾರ್ಡ್‌ನ ಬಿಜೆಪಿ ಸದಸ್ಯ ಹೆಚ್.ಎಂ. ಅಶೋಕ ಶುಕ್ರವಾರ ನಡೆದ ಚುನಾವಣೆಯಲ್ಲಿ ಆಯ್ಕೆಯಾಗಿದ್ದಾರೆ.

ಪಟ್ಟಣದ ಪುರಸಭೆ ಕಚೇರಿಯಲ್ಲಿ ಅಧ್ಯಕ್ಷರ ಚುನಾವಣೆ ಶುಕ್ರವಾರ ನಡೆದಿದ್ದು, ಅಧ್ಯಕ್ಷ ಸ್ಥಾನ ಬಯಸಿ ಬಿಜೆಪಿ ಅಭ್ಯರ್ಥಿ ಹೆಚ್.ಎಂ. ಅಶೋಕ ನಾಮಪತ್ರ ಸಲ್ಲಿಸಿದ್ದರೆ, ಕಾಂಗ್ರೆಸ್ ಬೆಂಬಲಿತ ಅಭ್ಯರ್ಥಿ ಡಿ. ಅಬ್ದುಲ್ ರೆಹಮಾನ್ ಸಾಬ್ ನಾಮಪತ್ರ ಸಲ್ಲಿಸಿದ್ದರು.

ಒಟ್ಟು 27 ಸದಸ್ಯರ ಪೈಕಿ 18 ಸದಸ್ಯರು ಹಾಜರಾಗಿದ್ದು, ಈ ಪೈಕಿ ಬಿಜೆಪಿ ಸಂಸದ ಹಾಗೂ ಶಾಸಕರು ಸೇರಿ ಒಟ್ಟು 11 ಜನರಿದ್ದು, ಕಾಂಗ್ರೆಸ್‌ನ ಪಕ್ಷೇತರ ಅಭ್ಯರ್ಥಿ ಸೇರಿ ಒಟ್ಟು 9 ಜನರಿದ್ದು, ಕಾಂಗ್ರೆಸ್‌ನ 8 ಜನ, ಬಿಜೆಪಿ 1 ಗೈರಾಗಿದ್ದರು. ಹಾಜರಿದ್ದ 18 ಸದಸ್ಯರಲ್ಲಿ 11 ಮತಗಳನ್ನು ಪಡೆಯುವ ಮೂಲಕ ಬಿಜೆಪಿ ಮತ್ತೆ 2ನೇ ಬಾರಿ ಅಧಿಕಾರದ ಚುಕ್ಕಾಣಿ ಹಿಡಿಯಲು ಯಶಸ್ವಿಯಾಯಿತು.

ಅಧ್ಯಕ್ಷ ಸ್ಥಾನಕ್ಕೆ ಕಾಂಗ್ರೆಸ್ ಬಹುಮತದ ಸಂಖ್ಯಾ ಬಲವನ್ನು ಹೊಂದಿದ್ದರೂ ಸಹ ಪಕ್ಷದಲ್ಲಿನ ಭಿನ್ನಾಭಿಪ್ರಾಯದಿಂದ ಬಿಜೆಪಿ ಅಧಿಕಾರಕ್ಕೆ ಬರಲು ಕಾರಣವಾಯಿತು.

ಶಾಸಕ ಜಿ. ಕರುಣಾಕರ ರೆಡ್ಡಿ ಮಾತನಾಡಿ, ಚುನಾವಣೆಯಲ್ಲಿ ಬಹುಮತ ಮುಖ್ಯ. ಈ ಚುನಾವಣೆಯಲ್ಲಿ ನಮಗೆ ಸದಸ್ಯರ ಬಹುಮತವಿತ್ತು. ಆದ್ದರಿಂದ ಬಿಜೆಪಿಗೆ ಸುಲಭ ಜಯವಾಗಿದೆ ಎಂದರು. ತಮ್ಮ ಪಕ್ಷದ ಹಾಲಿ ಪುರಸಭೆ ಉಪಾಧ್ಯಕ್ಷರು ಗೈರಾಗಿದ್ದಾರೆ? ಎಂಬ ಪ್ರಶ್ನೆಗೆ ಉತ್ತರಿಸಿದ ಅವರು, ಅದು ನಮಗೆ ಮಾಹಿತಿ ಇಲ್ಲ ಎನ್ನುವ ಮೂಲಕ ಜಾಣ ನಡೆ ತೋರಿದರು. ಇರುವ ಅವಧಿಯೊಳಗೆ ಪಟ್ಟಣದ ಅಭಿವೃದ್ಧಿಗೆ ಉತ್ತಮ ಆಡಳಿತ ನೀಡಲು ಸಂಸದರು, ನಾನು ಬೆಂಬಲ ನೀಡುವುದಾಗಿ ಹೇಳಿದರು.

ಸಂಸದ ಜಿ.ಎಂ. ಸಿದ್ದೇಶ್ವರ ಚುನಾವಣೆಯಲ್ಲಿ ಭಾಗವಹಿಸಿ ನಂತರ ಮಾತನಾಡಿ, ಕಾಂಗ್ರೆಸ್ ವೈಫಲ್ಯವೋ, ವಿಫಲವೋ ಗೊತ್ತಿಲ್ಲ, ನಮ್ಮ ಪಕ್ಷ ಮತ್ತೆ ಅಧಿಕಾರ ಹಿಡಿದಿದ್ದು ನೀರು, ಚರಂಡಿ, ವಿದ್ಯುತ್ ಸೇರಿದಂತೆ ಉತ್ತಮ ಆಡಳಿತ ನೀಡಲಿದೆ ಎಂದರು.

ನೂತನ ಪುರಸಭೆ ಅಧ್ಯಕ್ಷ ಹಾರಳು ಅಶೋಕ ಮಾತನಾಡಿ, ನಾನು ಸಂಸದ, ಶಾಸಕರ ಮಾರ್ಗದರ್ಶನದಲ್ಲಿ ಪುರಸಭೆ ಸದಸ್ಯರ ಸಹಕಾರದಿಂದ ಅಧ್ಯಕ್ಷರಾಗಿದ್ದು, ಪಟ್ಟಣವನ್ನು ಸೌಂದರ್ಯೀಕರಣ ಗೊಳಿಸುವುದು ಹಾಗೂ ವಿದ್ಯುತ್, ಚರಂಡಿ, ರಸ್ತೆಗಳ ಅಭಿವೃದ್ಧಿ ಸೇರಿದಂತೆ ಮೂಲ ಸೌಕರ್ಯಗಳಿಗೆ ಆದ್ಯತೆ ನೀಡುವುದಾಗಿ ಹೇಳಿದರು.

ಚುನಾವಣಾಧಿಕಾರಿ ತಹಶೀಲ್ದಾರ್ ಡಾ. ಶಿವಕುಮಾರ ಬಿರಾದಾರ, ಮುಖ್ಯಾಧಿಕಾರಿ ಶಿವಕುಮಾರ ಎರಗುಡಿ, ಚುನಾವಣಾ ಸಹಾಯಕ ಅಧಿಕಾರಿ ಅರವಿಂದ, ಡಿವೈಎಸ್‌ಪಿ ವಿ.ಎಸ್. ಹಾಲಮೂರ್ತಿ, ಸಿಪಿಐ ನಾಗರಾಜ ಕಮ್ಮಾರ, ಪಿಎಸ್‌ಐ ಸತೀಶ್ ಸೇರಿದಂತೆ ಪೊಲೀಸ್ ಸಿಬ್ಬಂದಿ ಇದ್ದರು.

# ಪಾಲಿಕೆಯ ಮುಖ್ಯ ದ್ವಾರಕ್ಕೆ ಬೀಗ ಹಾಕಲು ಯತ್ನ

## ಆಡಳಿತ ಪಕ್ಷದ ವಿರುದ್ಧ ಕಾಂಗ್ರೆಸ್ ವಿಪಕ್ಷ ಸದಸ್ಯರ ಅಸಮಾಧಾನ- ಪ್ರತಿಭಟನೆ




ದಾವಣಗೆರೆ, ಜು.8- ಪಾಲಿಕೆಯಲ್ಲಿ ಆಡಳಿತ ನಡೆಸುವ ಬಿಜೆಪಿ ಪಕ್ಷದ ಪಾಲಿಕೆಯ ಆಡಳಿತ ಸಂಪೂರ್ಣ ದಿವಾಳಿಯಾಗಿದ್ದು, ಈ ಕೂಡಲೇ ಸೂಕ್ತ ಕ್ರಮ ಕೈಗೊಳ್ಳುವಂತೆ ಸರ್ಕಾರಕ್ಕೆ ಆಗ್ರಹಿಸಿ ಕಾಂಗ್ರೆಸ್ ನ ವಿಪಕ್ಷ ಸದಸ್ಯರು ಇಲ್ಲಿನ ನಗರ ಪಾಲಿಕೆಯ ಮುಖ್ಯ ದ್ವಾರಕ್ಕೆ ಬೀಗ ಹಾಕಲು ಯತ್ನಿಸಿದರು.

ಕಾಂಗ್ರೆಸ್ ಮುಖಂಡರು, ಕಾರ್ಯಕರ್ತರು ಪಾಲಿಕೆ ಆವರಣದಲ್ಲಿ ಪ್ರತಿಭಟಿಸಿ, ಮುಖ್ಯದ್ವಾರಕ್ಕೆ ಬೀಗ ಹಾಕಲು ಮುಂದಾದರು. ಈ ವೇಳೆ ಅಲ್ಲಿಯೇ ಇದ್ದ ಪೊಲೀಸರು ಪ್ರತಿಭಟನಾಕಾರರನ್ನು ತಡೆದು, ಕೇವಲ ಪ್ರತಿಭಟನೆಗೆ ಅವಕಾಶ ಮಾಡಿಕೊಟ್ಟರು.

> **ಸಾರ್ವಜನಿಕರ ಸಮಸ್ಯೆಗಳನ್ನು ಕೇಳದ ಮೇಯರ್ ಸೇರಿದಂತೆ, ಪಾಲಿಕೆ ಅಧಿಕಾರಿಗಳು.**
>
> **- ಮಂಜುನಾಥ್ ಗಡಿಗುಡಾಳ್**, ವಿಪಕ್ಷ ನಾಯಕರು, ನಗರ ಪಾಲಿಕೆ

5 ತಿಂಗಳಾದರೂ ಸಹ ಪಾಲಿಕೆಯಲ್ಲಿ ಸಾಮಾನ್ಯ ಸಭೆ ಕರೆದಿಲ್ಲ. ಇದರಿಂದಾಗಿ ನಗರದಾದ್ಯಂತ ಸಮಸ್ಯೆಗಳು ಉದ್ಭವಿಸುತ್ತಿವೆ. ಈ ಬಗ್ಗೆಯೂ ಆಡಳಿತ ಪಕ್ಷ ಗಮನಹರಿಸಿಲ್ಲ ಎಂದು ವಿರೋಧ ಪಕ್ಷದ ನಾಯಕ ಜಿ.ಎಸ್. ಮಂಜುನಾಥ್ ಗಡಿಗುಡಾಳ್ ದೂರಿದರು.

ಸಾರ್ವಜನಿಕರ ಸಮಸ್ಯೆಗಳನ್ನು ಕೇಳದ ಮೇಯರ್ ಸೇರಿದಂತೆ, ಪಾಲಿಕೆ ಅಧಿಕಾರಿಗಳು ಯಾವುದೇ ಸಮಸ್ಯೆಗೆ ಸ್ಪಂದಿಸುತ್ತಿಲ್ಲ. ಆಡಳಿತ ನಡೆಸುತ್ತಿರುವ ಬಿಜೆಪಿ ಈ ಕೂಡಲೇ ತೊಲಗಬೇಕು. ಕೇವಲ ತಮ್ಮ ಪಕ್ಷದ ಜನಪ್ರತಿನಿಧಿಗಳ ಹುಟ್ಟುಹಬ್ಬಗಳನ್ನು ಆಚರಿಸಿ ಕೊಳ್ಳುವಲ್ಲಿ ಮಗ್ನರಾಗಿರುವ ಮೇಯರ್ ಹಾಗೂ ಆಡಳಿತ ಪಕ್ಷ ಯಾವುದೇ ಸಾರ್ವಜನಿಕ ಸಮಸ್ಯೆಗಳ ಬಗ್ಗೆ ಗಮನಹರಿಸುತ್ತಿಲ್ಲ ಎಂದು ಪಾಲಿಕೆ ಸದಸ್ಯ ಎ. ನಾಗರಾಜ್ ಅಸಮಾಧಾನ ವ್ಯಕ್ತಪಡಿಸಿದರು.

ನಗರ ಪಾಲಿಕೆಯ 45 ವಾರ್ಡ್‌ಗಳಲ್ಲಿ ಸಮಸ್ಯೆ ಹೇಳತೀರದಾಗಿದೆ. ಈ ಕುರಿತಂತೆ ಅಧಿಕಾರಿಗಳಿಗೆ ಕರೆ ಮಾಡದರೆ ಯಾರೂ ಫೋನ್ ತೆಗೆದುಕೊಳ್ಳುವುದಿಲ್ಲ. ಇದರಿಂದಾಗಿ ವಾರ್ಡ್ ಗಳಲ್ಲಿ ಜನರು ನಮ್ಮನ್ನು ದೂರುತ್ತಿದ್ದಾರೆ ಎಂದು ಪಾಲಿಕೆ ಸದಸ್ಯ ಅಬ್ದುಲ್ ಲತೀಫ್ ಆಪಾದಿಸಿದರು.

ಒಂದು ವಾರ ಗಡುವು ನೀಡಲಾಗುವುದು. ಅಷ್ಟರಲ್ಲಿ ಪಾಲಿಕೆ ವ್ಯಾಪ್ತಿಯ ಸಮಸ್ಯೆಗಳನ್ನು ಬಗೆಹರಿಸಲು ಪಾಲಿಕೆ ಆಡಳಿತ ಮುಂದಾಗಬೇಕು.


ಅಲ್ಲದೇ ಸಮಸ್ಯೆಗಳ ಚರ್ಚೆಗೆ ಶೀಘ್ರವೇ ಸಾಮಾನ್ಯ ಸಭೆ ಕರೆಯಬೇಕು. ಇಲ್ಲವಾದಲ್ಲಿ ಪಾಲಿಕೆಗೆ ಬೀಗ ಹಾಕಲಾಗುವುದು ಎಂದು ಎಚ್ಚರಿಕೆ ನೀಡಿದರು.

ಮೇಯರ್ ಅವರಿಗೆ ಕಾಂಗ್ರೆಸ್ ನಿಂದಲೇ ಮೊಬೈಲ್ ಕೊಡಿಸಲಾಗುವುದು. ಮಳೆ ಆಗುತ್ತಿದೆ. ಮೇಯರ್ ಅವರು ಯಾವುದೇ ವಾರ್ಡ್ ಗೆ ಭೇಟಿ ನೀಡುತ್ತಿಲ್ಲ. ಆಯುಕ್ತರೂ ಸಹ ಭೇಟಿ ನೀಡಿ ಜನರ ಸಮಸ್ಯೆಗಳನ್ನು ಆಲಿಸುತ್ತಿಲ್ಲ. ನಗರ ಪಾಲಿಕೆ ಅಕ್ಷರಶಃ ಆರ್ಥಿಕವಾಗಿ ದಿವಾಳಿ ಆಗಿದೆ. ಅನುದಾನ ಇಲ್ಲದೇ ಅನೇಕ ಕೆಲಸಗಳು ಪೆಂಡಿಂಗ್ ಇವೆ.

ಮುಖ್ಯ ಅಧೀಕ್ಷಕರ ಮುಂದೆ 50 ಕಡತಗಳು ಬಾಕಿ ಇವೆ. ಮಂಜೂರು ನೀಡದ ಕಾರಣದಿಂದ ಯಾವುದೇ ಕೆಲಸ ಮಾಡಲಾಗುತ್ತಿಲ್ಲ ಎಂದು ಹಣಕಾಸು ವಿಭಾಗದವರು ಹೇಳುತ್ತಿದ್ದಾರೆ ಎಂದು ಆಕ್ಷೇಪಿಸಿದರು.

ಪ್ರತಿಭಟನೆಯಲ್ಲಿ ಕಾಂಗ್ರೆಸ್ ಮುಖಂಡರಾದ ಎ.ಬಿ. ರಹೀಂಸಾಬ್, ಪಿ.ಕೆ. ಲಿಂಗರಾಜ್, ಸೈಯದ್ ಚಾರ್ಲಿ, ಪಾಮೇನಹಳ್ಳಿ ನಾಗರಾಜ್, ಕಲ್ಲಹಳ್ಳಿ ನಾಗರಾಜ್, ಎಸ್. ಮಲ್ಲಿಕಾರ್ಜುನ, ಕೊಟ್ರಬಸಯ್ಯ, ಉಮೇಶ್ ಸೇರಿದಂತೆ ಇತರರು ಭಾಗವಹಿಸಿದ್ದರು.

# ಹನುಮ ಜನ್ಮಸ್ಥಳ ಅಂಜನಾದ್ರಿ ಬೆಟ್ಟದ ಮೂಲ ಸೌಲಭ್ಯಕ್ಕೆ 240 ಕೋಟಿ ರೂ.



ಬೆಂಗಳೂರು, ಜು. 8 - ಭಾರೀ ಚರ್ಚೆಗೆ ಕಾರಣವಾಗಿರುವ ಹನುಮ ಜನ್ಮಸ್ಥಳ ಅಂಜನಾದ್ರಿ ಬೆಟ್ಟಕ್ಕೆ ರಸ್ತೆ, ಮೂಲಭೂತ ಸೌಕರ್ಯ ಕಲ್ಪಿಸಲು 240 ಕೋಟಿ ರೂಪಾಯಿಗಳನ್ನು ರಾಜ್ಯ ಸರ್ಕಾರ ಒದಗಿಸಿದೆ.

ಆಂಜನೇಯ ಜನ್ಮಸ್ಥಳ ಎಂದೇ ಬಿಂಬಿತಗೊಂಡಿರುವ ಅಂಜನಾದ್ರಿ ಬೆಟ್ಟದಿಂದ ರಾಮನ ಜನ್ಮ ಸ್ಥಳವಾದ ಅಯೋಧ್ಯೆಗೆ ಸಂಪರ್ಕ ಕಲ್ಪಿಸಲು ಕೇಂದ್ರ ಸರ್ಕಾರವೇ ಆಸಕ್ತಿ ತೋರಿದೆ. ಕೇಂದ್ರದ ಸೂಚನೆ ಮೇರೆಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಕಳೆದ ಎರಡು ದಿನಗಳ ಹಿಂದೆಯಷ್ಟೇ ಅಂಜನಾದ್ರಿ ಬೆಟ್ಟದ ಅಭಿವೃದ್ಧಿಗೆ ಸಂಬಂಧಿಸಿದಂತೆ ಉನ್ನತ ಮಟ್ಟದ ಸಭೆ ನಡೆಸಿ, 240 ಕೋಟಿ ರೂ. ಬಿಡುಗಡೆಗೆ ಆದೇಶ ಮಾಡಿದ್ದಾರೆ.

ಸರ್ಕಾರದ ಈ ನಿರ್ಧಾರವನ್ನು ಸುದ್ದಿಗಾರರಿಗೆ ತಿಳಿಸಿದ ಪ್ರವಾಸೋದ್ಯಮ ಸಚಿವ ಆನಂದ್ ಸಿಂಗ್, ರಾಷ್ಟ್ರೀಯ ಹೆದ್ದಾರಿ-13 ರಿಂದ ಅಂಜನಾದ್ರಿ ಬೆಟ್ಟಕ್ಕೆ 4 ಪಥದ ರಸ್ತೆ ನಿರ್ಮಾಣ ಮಾಡಲು 140 ಕೋಟಿ ರೂ. ವೆಚ್ಚ ಮಾಡಲಾಗುವುದು ಎಂದರು.

ಬೆಟ್ಟದ ತಪ್ಪಲಿನ ಪರಿಸರಕ್ಕೆ ಎಲ್ಲಿಯೂ ಹಾನಿಯಾಗದಂತೆ ರಸ್ತೆ ಹಾಗೂ ಮೂಲ ಸೌಕರ್ಯವನ್ನು ಕಲ್ಪಿಸಲು ಕೇಂದ್ರದ ಸಂಸ್ಥೆಯೊಂದಕ್ಕೆ ನೀಲ ನಕ್ಷೆ ಸಿದ್ಧತೆ ಹಾಗೂ ಕಾಮಗಾರಿ ಉಸ್ತುವಾರಿಯನ್ನು ವಹಿಸಲಾಗುತ್ತಿದೆ ಎಂದರು.

ಇದೇ ರೀತಿ ಹನುಮ ಜನ್ಮ ಸ್ಥಳ ಇರುವುದು ನಮ್ಮಲ್ಲಿ ಎಂದು ಕೆಲವರು ವಿವಾದ ಮಾಡುತ್ತಿದ್ದಾರೆ. ಹೀಗಾಗಿ ಪ್ರಾಚ್ಯ ವಸ್ತು ಇಲಾಖೆಗೆ ಸೂಚನೆ ನೀಡಿ, ಅಂಜನಾದ್ರಿ ಬೆಟ್ಟ ಹನುಮ ಜನ್ಮಸ್ಥಳ ಎಂಬ ಬಗ್ಗೆ ಇರುವ ದಾಖಲೆಯನ್ನು ಅಂಜನಾದ್ರಿ ಬೆಟ್ಟದಲ್ಲಿ ಪ್ರದರ್ಶಿಸಲು ಸೂಚನೆ ಕೊಡಲಾಗಿದೆ ಎಂದರು.

ಸುಮಾರು ಅರವತ್ತು ಎಕರೆ ಪ್ರದೇಶದಲ್ಲಿ ಅಂಜನಾದ್ರಿ ಬೆಟ್ಟವನ್ನು ಅಭಿವೃದ್ಧಿ ಪಡಿಸುತ್ತಿದ್ದು, ಭೂಮಿ ಒದಗಿಸಲು ಮುಂದೆ ಬಂದಿರುವ ರೈತರು ತಮಗೆ ಹೆಚ್ಚಿನ ಪರಿಹಾರ ಒದಗಿಸಬೇಕು ಮತ್ತು ಬೆಟ್ಟದಲ್ಲಿ ನಡೆಯುವ ಆರ್ಥಿಕ ಚಟುವಟಿಕೆಗಳಲ್ಲಿ ಭಾಗಿದಾರರಾಗಲು ಅವಕಾಶ ಮಾಡಿಕೊಡಬೇಕು ಎಂದಿದ್ದಾರೆ. ಸರ್ಕಾರ ಅದನ್ನು ಪರಿಶೀಲಿಸುತ್ತಿದೆ ಎಂದರು.

ಹಂಪಿ, ಪಟ್ಟದಕಲ್ಲು ಸೇರಿದಂತೆ ರೂಪಿಸಲಾ ಗುತ್ತಿರುವ ಪ್ರವಾಸೋದ್ಯಮದ ಕ್ಲಸ್ಟರ್‌ನಲ್ಲಿ ಅಂಜನಾದ್ರಿ ಬೆಟ್ಟವನ್ನು ಸೇರಿಸಲಾಗುವುದು ಎಂದು ಇದೇ ಸಂದರ್ಭದಲ್ಲಿ ಅವರು ಹೇಳಿದರು.

ರಾಜ್ಯದಲ್ಲಿ ಪ್ರವಾಸೋದ್ಯಮವನ್ನು ಅಭಿವೃದ್ಧಿ ಪಡಿಸಲು ಸರ್ಕಾರದಿಂದ ಮಾತ್ರ ಸಾಧ್ಯವಿಲ್ಲ. ಹೀಗಾಗಿ ಎಲ್ಲ ಪ್ರವಾಸೋದ್ಯಮ ಸ್ಥಳಗಳಲ್ಲಿ ಖಾಸಗಿಯವರ ಸಹಭಾಗಿತ್ವವನ್ನು ಉತ್ತೇಜಿಸಲು ತೀರ್ಮಾನಿಸಲಾಗಿದೆ ಎಂದ ಅವರು, ರಸ್ತೆಯಂತಹ ಮೂಲ ಸೌಕರ್ಯವನ್ನು ಸರ್ಕಾರ ಮಾಡಿ ಕೊಡುತ್ತದೆ. ಉಳಿದಂತೆ ಹೋಟೆಲ್ ಮತ್ತಿತರೆ ಸೌಲಭ್ಯಗಳನ್ನು ಖಾಸಗಿಯವರು ಅಭಿವೃದ್ಧಿಪಡಿಸಲಿದ್ದಾರೆ ಎಂದರು.

# ಅ.29 ರಿಂದ ಶ್ರೀಶೈಲ ಪಾದಯಾತ್ರೆ

**(1ನೇ ಪುಟದಿಂದ)** ನವೆಂಬರ್ 30ರ ವರೆಗೆ ಶ್ರೀಕ್ಷೇತ್ರ ಯಡೂರಿನಿಂದ ಶ್ರೀಶೈಲದ ವರೆಗೆ ಪಾದಯಾತ್ರೆ ಹಮ್ಮಿ ಕೊಳ್ಳಲಾಗುವುದು. ಪಾದಯಾತ್ರೆ ಉದ್ದಕ್ಕೂ 20 ಸಾವಿರ ಜನರಿಗೆ ಲಿಂಗದೀಕ್ಷೆ ನೀಡಲಾಗುವುದು. ಇದೇ ವೇಳೆ ದುಶ್ಚಟಗಳನ್ನು ಬಿಡುವಂತೆ ದುಶ್ಚಟಗಳ ಭಿಕ್ಷೆ ಕೇಳಲಾಗುವುದು ಎಂದು ಶ್ರೀಗಳು ಹೇಳಿದರು.

ಈ ಮಾರ್ಗದ ಉದ್ದಕ್ಕೂ ಸಸಿಗಳನ್ನು ನೆಡುವ ಕಾರ್ಯಕ್ಕೆ ಈಗಾಗಲೇ ಚಾಲನೆ ನೀಡಲಾಗಿದೆ. ಅರಣ್ಯ ಇಲಾಖೆ ಜೊತೆಗೂಡಿ ಈ ಕಾರ್ಯ ನಿರ್ವಹಿಸಲಾಗುತ್ತಿದೆ. ಈ ಸಸಿಗಳು ಮುಂದಿನ ದಿನಗಳಲ್ಲಿ ಪಾದಯಾತ್ರಿಗಳಿಗೆ ನೆರಳು ನೀಡಲಿವೆ ಎಂದರು.

### ಶ್ರೀಶೈಲದಲ್ಲಿ ಅಭಿವೃದ್ಧಿ ಯೋಜನೆ

ಆಂಧ್ರಪ್ರದೇಶ ಸರ್ಕಾರ ಇತ್ತೀಚೆಗೆ ಶ್ರೀಶೈಲ ಪೀಠಕ್ಕೆ 10 ಎಕರೆ ಜಾಗ ಮಂಜೂರು ಮಾಡಿದೆ. ಈ ಪೈಕಿ 5 ಎಕರೆ ಜಾಗದಲ್ಲಿ ಕಂಬಿ ಮಂಟಪ, ಯಾತ್ರಿ ವಾಸ, ಆಸ್ಪತ್ರೆ ಹಾಗೂ ಗುರುಕುಲ ಮಾದರಿ ವಸತಿ ಶಾಲೆ ನಿರ್ಮಿಸಲಾಗುವುದು ಎಂದು ಶ್ರೀಶೈಲ ಜಗದ್ಗುರು ಡಾ. ಚನ್ನಸಿದ್ಧರಾಮ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ತಿಳಿಸಿದ್ದಾರೆ.

500 ಕೊಠಡಿಗಳ ಯಾತ್ರಿ ನಿವಾಸ, 100 ಬೆಡ್‌ಗಳ ಆಸ್ಪತ್ರೆಗಳನ್ನು ನಿರ್ಮಿಸಲಾಗುವುದು ಎಂದು ಶ್ರೀಗಳು ಹೇಳಿದರು.

ಎರಡನೇ ಹಂತದಲ್ಲಿ ಡಿಸೆಂಬರ್ ಮೊದಲ ವಾರದಿಂದ 2023ರ ಜನವರಿ 10ರವರೆಗೆ 41 ದಿನಗಳ ಕಾಲ ಶ್ರೀಶೈಲ ಕ್ಷೇತ್ರದಲ್ಲಿರುವ ಶ್ರೀ ಜಗದ್ಗುರು ಪಂಡಿತಾರಾಧ್ಯರ ಲಿಂಗೋದ್ಭವ ಮೂರ್ತಿಗೆ ರುದ್ರಾಭಿಷೇಕ, ಬಿಲ್ವಾರ್ಚನೆ, ಇಷ್ಟಲಿಂಗ ಮಹಾಪೂಜೆ, ತುಲಾಭಾರ, ರುದ್ರಹೋಮ ಹಾಗೂ ಅನ್ನದಾನಗಳು ನೆರವೇರಲಿವೆ.

ಮೂರನೇ ಹಂತದಲ್ಲಿ 2023ರ ಜನವರಿ 10ರಿಂದ 14ರವರೆಗೆ ಅಖಿಲ ಭಾರತ ವೀರಶೈವ ಮಹಾಸಭೆಯ ಮಹಾ ಅಧಿವೇಶನ, ರಾಷ್ಟ್ರೀಯ ವೇದಾಂತ ಸಮ್ಮೇಳನ, ರಾಷ್ಟ್ರೀಯ ವಚನ ಸಮ್ಮೇಳನ, ರಾಷ್ಟ್ರೀಯ ವೀರಶೈವಾಗಮ ಸಮಾವೇಶ, ಉಚಿತ ಸಾಮೂಹಿಕ ವಿವಾಹ ಮತ್ತು ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಸಂಯೋಜಿಸಲಾಗುವುದು ಎಂದು ಶ್ರೀಗಳು ತಿಳಿಸಿದರು.

ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲು ಕರ್ನಾಟಕ, ಆಂಧ್ರ ಪ್ರದೇಶ, ತೆಲಂಗಾಣ ಹಾಗೂ ಮಹಾರಾಷ್ಟ್ರಗಳ ಮುಖ್ಯಮಂತ್ರಿಗಳಿಗೆ ಆಹ್ವಾನ ನೀಡಲಾಗುವುದು. ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರಿಗೂ ಆಹ್ವಾನ ನೀಡಲಾಗುವುದು. ಇವರೆಲ್ಲರೂ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವ ನಿರೀಕ್ಷೆ ಇದೆ ಎಂದವರು ಹೇಳಿದರು.

ಪತ್ರಿಕಾಗೋಷ್ಠಿಯಲ್ಲಿ ಶಾಸಕ ಹಾಗೂ ಅಖಿಲ ಭಾರತ ವೀರಶೈವ ಮಹಾಸಭಾ ಅಧ್ಯಕ್ಷ ಶಾಮನೂರು ಶಿವಶಂಕರಪ್ಪ, ಆವರಗೊಳ್ಳದ ಶ್ರೀ ಓಂಕಾರ ಶಿವಾಚಾರ್ಯ ಸ್ವಾಮೀಜಿ, ಜಮಖಂಡಿಯ ಶ್ರೀ ಗೌರಿಶಂಕರ ಶಿವಾಚಾರ್ಯ ಸ್ವಾಮೀಜಿ, ಮಹಾಸಭಾ ಉಪಾಧ್ಯಕ್ಷ ಅಥಣಿ ವೀರಣ್ಣ, ಜಿಲ್ಲಾ ಅಧ್ಯಕ್ಷ ದೇವರಮನಿ ಶಿವಕುಮಾರ್, ದಾವಣಗೆರೆ-ಹರಿಹರ ಅರ್ಬನ್ ಬ್ಯಾಂಕ್ ಅಧ್ಯಕ್ಷ ಎನ್.ಎ. ಮುರುಗೇಶ್, ಮುಖಂಡರಾದ ಡಿ.ಎಂ. ಹಾಲಸ್ವಾಮಿ, ಅಶೋಕ್ ಗೋಪನಾಳ್, ಬನ್ನಯ್ಯ ಸ್ವಾಮಿ, ಆರ್.ಟಿ. ಪ್ರಶಾಂತ್, ತ್ಯಾವಣಿಗೆ ಮಲ್ಲಿಕಾರ್ಜುನ್, ಶ್ರೀನಿವಾಸ ದಾಸಕರಿಯಪ್ಪ ಮತ್ತಿತರರು ಉಪಸ್ಥಿತರಿದ್ದರು.

# ಇಂದು ವಿಶ್ವಕರ್ಮ ಜನಜಾಗೃತಿ ಬೈಕ್ ರ್‍ಯಾಲಿ

ದಾವಣಗೆರೆ, ಜು.8- ಅಖಿಲ ಭಾರತ ವಿಶ್ವಕರ್ಮ ಪರಿಷತ್ ವತಿಯಿಂದ ಇಲ್ಲಿನ ಬಾಪೂಜಿ ಬ್ಯಾಂಕ್ ಸಮುದಾಯ ಭವನದಲ್ಲಿ ಇದೇ ದಿನಾಂಕ 11ರಂದು ನಡೆಯುವ ವಿಶ್ವಕರ್ಮ ಜನಜಾಗೃತಿ ಸಮಾವೇಶ ಹಾಗೂ ಪ್ರಶಸ್ತಿ ಪ್ರದಾನ ಸಮಾರಂಭದ ಪ್ರಯುಕ್ತ ನಾಳೆ ದಿನಾಂಕ 9ರ ಶನಿವಾರ ಬೈಕ್ ರ್‍ಯಾಲಿ ಹಮ್ಮಿಕೊಳ್ಳಲಾಗಿದೆ.

ಈ ಕುರಿತು ಪರಿಷತ್ ಜಿಲ್ಲಾಧ್ಯಕ್ಷ ಎಂ.ಇ. ಮೌನೇಶ್ವರಾಚಾರಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಇದೇ ದಿನಾಂಕ 11ರಂದು ಅಖಿಲ ಕರ್ನಾಟಕ ವಿಶ್ವ ಬ್ರಾಹ್ಮಣ ಪೀಠಾಧಿಪತಿಗಳ ಮತ್ತು ಮಠಾಧಿಪತಿಗಳ ಒಕ್ಕೂಟದ ಸಮ್ಮಿಲನ ಮತ್ತು ವಿಶ್ವಕರ್ಮ ಜನಜಾಗೃತಿ ಸಮಾವೇಶದ ಪ್ರಯುಕ್ತ ಜನಜಾಗೃತಿಗೊಳಿಸಲು ನಾಳೆ ಶನಿವಾರ ಬೆಳಿಗ್ಗೆ 10.30ಕ್ಕೆ ನಗರದ ಶ್ರೀ ಕಾಳಿಕಾದೇವಿ ದೇವಸ್ಥಾನದಿಂದ ಯುವಕರ ಪಡೆ ಬೈಕ್ ರ್‍ಯಾಲಿ ನಡೆಸುತ್ತಿದೆ ಎಂದರು.

ಬೈಕ್ ರ್‍ಯಾಲಿಯು ಶ್ರೀ ಕಾಳಿಕಾದೇವಿ ದೇವಸ್ಥಾನದಿಂದ ಆರಂಭಗೊಳ್ಳಲಿದೆ. ಸುದ್ದಿಗೋಷ್ಠಿಯಲ್ಲಿ ಪದಾಧಿಕಾರಿಗಳಾದ ಜಿ. ಕಾಳಾಚಾರ್ ಕಾಡಜ್ಜಿ, ವಿ. ಆಂಜನೇಯಚಾರಿ, ವಿಶ್ವನಾಥಚಾರಿ, ಎನ್. ಶಿವಾಚಾರಿ ಆರ್, ಬಸವರಾಜಚಾರ್, ಅಜಯ್ ಆಚಾರ್ ಉಪಸ್ಥಿತರಿದ್ದರು.

# ನಿವೃತ್ತ ನೌಕರರಿಗೆ ಆರೋಗ್ಯ ಯೋಜನೆ ವಿಸ್ತರಣೆ

**(1ನೇ ಪುಟದಿಂದ)** ಮಾಡಲಾಗುವುದು ಎಂದರು.

ಮಾನವೀಯತೆ ಇರುವ ನೌಕರರಿದ್ದರೆ ಬಡವರ ಕಷ್ಟ ಕಾರ್ಪಣ್ಯ ದೂರ ಮಾಡಲು ಸಾಧ್ಯ. ಇದರ ತಳಹದಿಯ ಮೇಲೆ ಆಡಳಿತ ನಡೆಯಬೇಕು. ಮತ್ತೊಬ್ಬರ ಬಗ್ಗೆ ಪ್ರೀತಿ, ವಿಶ್ವಾಸ, ಅನುಕಂಪವಿದ್ದಾಗ ನ್ಯಾಯ ಕೊಡಲು ಸಾಧ್ಯ.

6 ಕೋಟಿಗಿಂತ ಹೆಚ್ಚು ಜನಸಂಖ್ಯೆ ನಮ್ಮ ಕೈಗೆ ಜವಾಬ್ದಾರಿ ಕೊಟ್ಟಿದೆ. 6 ಲಕ್ಷಕ್ಕೂ ಹೆಚ್ಚಿರುವ ಸರ್ಕಾರಿ ನೌಕರರು ಹಾಗೂ ಆಡಳಿತ ಮಾಡುವ ಜನಪ್ರತಿನಿಧಿಗಳ ಕೈಯಲ್ಲಿ ಜವಾಬ್ದಾರಿ ಇದೆ. ನಾವೆಲ್ಲ ಜನರ ವಿಶ್ವಾಸದ ಟ್ರಸ್ಟಿಗಳು. ನಮ್ಮ ಮೇಲಿರುವ ವಿಶ್ವಾಸಕ್ಕೆ ಅರ್ಹರಾಗಿ ನಾವು ನಡೆದುಕೊಳ್ಳಬೇಕು. ಆಗ ನಾವು ಈ ಸ್ಥಾನದಲ್ಲಿ ಕುಳಿತಿದ್ದಕ್ಕೆ ಸಾರ್ಥಕವಾಗುತ್ತದೆ. ಈ ಮನೋಭಾವ ಸರ್ಕಾರಿ ನೌಕರರಿಗೆ ಬಂದರೆ ಕರ್ನಾಟಕ ವಿಶ್ವದಲ್ಲಿಯೇ ನಂಬರ್ ಒನ್ ಆಗಲು ಸಾಧ್ಯ ಎಂದರು.

# ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯ ಪ್ರವೇಶಕ್ಕೆ ಅವಧಿ ವಿಸ್ತರಣೆ

ದಾವಣಗೆರೆ, ಜು.8- 2022-23ನೇ ಸಾಲಿನ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳಲ್ಲಿ ಹೊಸದಾಗಿ ಪ್ರವೇಶ ಬಯಸುವ ಪಿಯುಸಿ ಮತ್ತು ಪಿಯುಸಿ ಸಮಾನಂತರ ಕೋರ್ಸ್‌ಗಳ ವಿದ್ಯಾರ್ಥಿಗಳಿಗೆ ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳಲ್ಲಿ ಪ್ರವೇಶಾತಿ ಕಲ್ಪಿಸಲು ಆನ್‌ಲೈನ್ ಅರ್ಜಿಗಳನ್ನು ಸಲ್ಲಿಸಲು ಇದೇ ದಿನಾಂಕ 15 ರವರೆಗೆ ಅವಧಿ ವಿಸ್ತರಿಸಲಾಗಿದೆ ಎಂದು ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿ ತಿಳಿಸಿದ್ದಾರೆ.

**TWO FLOOR BUILDING**



**FOR SALE**

**Suitable for Appartment, School College or Hostel**

*Location :*

#1299/56, 57, 58, 3rd Cross, Vijaya Nagar Badavane, Near RTO Office, Kondajji Road, Davangere.

*Contact :*

**98456 98181, 98456 44100**

**ಹಾರ್ದಿಕ ಅಭಿನಂದನೆಗಳು**







ರೋಟರಿ ಕ್ಲಬ್ ದಾವಣಗೆರೆ ದಕ್ಷಿಣ ಇದರ ನೂತನ ಅಧ್ಯಕ್ಷರಾಗಿ ಇಂದು ಅಧಿಕಾರ ಸ್ವೀಕರಿಸುತ್ತಿರುವ ಯುವ ಉದ್ಯಮಿ, ಸಮಾಜಮುಖಿ ಸಹೃದಯಿ **ರೋ॥ ಪಿಹೆಚ್‌ಎಫ್. ರಂಗಪ್ಪ ಸಿ.ಕೆ.** ಹಾಗು ಕಾರ್ಯದರ್ಶಿಯಾಗಿ ಅಧಿಕಾರ ಸ್ವೀಕರಿಸುತ್ತಿರುವ **ರೋ॥ ಪುಟ್ಟೇಶಿ ಎಂ.ಆರ್.** ಇವರಿಗೆ **ಹಾರ್ದಿಕ ಅಭಿನಂದನೆಗಳು.**

ಇವರ ಕಾರ್ಯಾವಧಿಯಲ್ಲಿ ಉತ್ತಮ ಕಾರ್ಯಗಳಾಗಲಿ ಎಂದು ಹಾರೈಸುತ್ತೇವೆ .

**ಶುಭ ಕೋರುವವರು :**

- ರೋ॥ ಡಾ॥ ಸುಜಿತ್ ಕುಮಾರ್ ಎಸ್.ಹೆಚ್.
- ರೋ॥ ಪವನ್ ಎ. ಪಡಗಲ್
- ರೋ॥ ಬ್ರಿಜೇಶ್ ಪಿ.ವಿ.
- ರೋ॥ ಸಿದ್ದಲಿಂಗೇಶ್ ಡಿ.ಜಿ.
- ರೋ॥ ವಿಶ್ವಜಿತ್ ಕೆ. ಜಾಧವ್
- ರೋ॥ ಕೊಟ್ರೇಶ್ ಕೆ.ಬಿ.
- ರೋ॥ ವೀರೇಶ್ ಹಿರೇಮಠ್
- ರೋ॥ ಉಮೇಶ್ ಶೆಟ್ಟಿ ಬಿ.
- ರೋ॥ ಡಾ॥ ಹಾಲಸ್ವಾಮಿ ಕೆ.
- ರೋ॥ ನಾಗರಾಜ್ ಕೆ. ಜಾಧವ್
- ರೋ॥ ಪ್ರದೀಪ್ ಇ.ಎಸ್.
- ರೋ॥ ಬದ್ರಿನಾಥ್ ಆರ್.ಜಿ.
- ರೋ॥ ಅಮೀರಬಾನು
- ರೋ॥ ಮಲ್ಲರಸಾ ಆರ್. ಕಾಟ್ವೆ
- ರೋ॥ ವಿಶಾಲ್ ಆರ್. ಸಾಂಘ್ವಿ
- ರೋ॥ ಗಜಾನನ ಬಿ.
- ರೋ॥ ಈಶ್ವರ್‌ಸಿಂಗ್ ಕವಿತಾಲ್
- ರೋ॥ ಪ್ರದೀಪ್ ಡಿ.ಎಸ್.
- ರೋ॥ ಬಸವರಾಜ್ ಹೆಚ್.ಜಿ.
- ಶ್ರೀ ಸಂಗಪ್ಪಯ್ಯ ಪಾಟೀಲ್

**ಹಾಗೂ ಚನ್ನಗಿರಿ ಕುಟುಂಬ ವರ್ಗದವರು**

# ಕೊಂಡಜ್ಜಿ ಸ್ಕೌಟ್ ಗೈಡ್ ತರಬೇತಿ ಕೇಂದ್ರದಲ್ಲಿ ರಾಜ್ಯ ಪುರಸ್ಕಾರ ತರಬೇತಿ



ದಾವಣಗೆರೆ,ಜು.8- ಕೊಂಡಜ್ಜಿಯ ಕೊಂಡಜ್ಜಿ ಬಸಪ್ಪ ರಾಜ್ಯ ಸ್ಕೌಟ್ ಗೈಡ್ ತರಬೇತಿ ಕೇಂದ್ರದಲ್ಲಿ ರಾಜ್ಯ ಪುರಸ್ಕಾರ ಪೂರ್ವಭಾವಿ ತರಬೇತಿ ಶಿಬಿರವು ಈಚೆಗೆ ನಡೆಯಿತು. ಈ ಶಿಬಿರದಲ್ಲಿ 94 ಸ್ಕೌಟ್ಸ್ ಮತ್ತು 92 ಗೈಡ್ಸ್‌ಗಳು ಭಾಗವಹಿಸಿದ್ದರು.

ಸ್ಕೌಟ್ ವಿಭಾಗದ ನಾಯಕರಾಗಿ ಜಿಲ್ಲಾ ತರಬೇತಿ ಆಯುಕ್ತ ಡಿ.ಹಾಲಪ್ಪ, ಸ್ಕೌಟ್ ಹಾಗೂ ಗೈಡ್ ವಿಭಾಗದ ನಾಯಕರಾಗಿ ಜಿಲ್ಲಾ ಕಾರ್ಯದರ್ಶಿ ಎಂ.ರತ್ನ ಕಾರ್ಯನಿರ್ವಹಿಸಿದರು. ಇವರಿಗೆ ಸಹಾಯಕರುಗಳಾಗಿ ಸುವರ್ಣಮ್ಮ, ಗೀತಾ ಟಿ.ಕೆ.ಪಿ, ತಾಸಿನ್ ತಾಜ್, ಮಂಜುಳ, ಜೆ.ಎಸ್.ವಿಜಯ್, ಗಂಗಾಧರ್ ಸ್ವಾಮಿ, ಆರೋಗ್ಯಮ್ಮ, ಕೊಟ್ರಯ್ಯ, ಸಾಮ್ಯ ನಾಯಕ್, ಮಹಾಂತೇಶ್ ಕಾರ್ಯನಿರ್ವಹಿಸಿದರು.

ಶಿಬಿರಕ್ಕೆ ಜಿಲ್ಲಾ ಮುಖ್ಯ ಆಯುಕ್ತ ಮುರುಘರಾಜೇಂದ್ರ, ಜೆ.ಚಿಗಟೇರಿ, ಜಿಲ್ಲಾ ಸ್ಕೌಟ್ ಆಯುಕ್ತ ಎ.ಪಿ.ಷಡಾಕ್ಷರಪ್ಪ, ಜಿಲ್ಲಾ ಸಹಾಯಕ ಆಯುಕ್ತ ಹಾಲಪ್ಪ ಭೇಟಿ ನೀಡಿ ಮಕ್ಕಳನ್ನು ಪ್ರೋತ್ಸಾಹಿಸಿದರು.

ಅರಣ್ಯಾಧಿಕಾರಿ ಖಾಲಿದ್ ಶಿಬಿರಕ್ಕೆ ಭೇಟಿ ನೀಡಿ ಪರಿಸರ ರಕ್ಷಣೆ ಮತ್ತು ಕಾಡುಗಳನ್ನು ಬೆಳೆಸುವ ಹಾಗೂ ಬೀಜದುಂಡೆ ತಯಾರಿಕೆ ಬಗ್ಗೆ ಮಕ್ಕಳಿಗೆ ಮಾಹಿತಿ ನೀಡಿದರು. ಕ್ವಾಡರ್ ಮಾಸ್ಟರ್ ಆಗಿ ಜಿಲ್ಲಾ ಜಂಟಿ ಕಾರ್ಯದರ್ಶಿಗಳಾದ ಸಿ.ಆರ್.ಮರುಳಪ್ಪ ಮತ್ತು ಸುಖವಾಣಿ ಕಾರ್ಯನಿರ್ವಹಿಸಿದರು. ಅಶ್ವಿನಿ.ಜೆ ಎಸ್. ಜಿ.ವಿ ಶಿಬಿರವನ್ನು ಸಂಘಟಿಸಿದ್ದರು.

# ಕಲ್ಯಾಣ ಮಂಡಳಿಯಲ್ಲಿನ ಭ್ರಷ್ಟಾಚಾರದ ತನಿಖೆಗೆ ಕಟ್ಟಡ ನಿರ್ಮಾಣ ಕಾರ್ಮಿಕರ ಆಗ್ರಹ

ದಾವಣಗೆರೆ, ಜು.8- ರಾಜ್ಯದ ಕಟ್ಟಡ ನಿರ್ಮಾಣ ಕಾರ್ಮಿಕ ಕಲ್ಯಾಣ ಮಂಡಳಿಯಲ್ಲಿ ನಡೆಯುತ್ತಿರುವ ಭ್ರಷ್ಟಾಚಾರದ ಕುರಿತು ನ್ಯಾಯಾಂಗ ತನಿಖೆಗೆ ಒಳಪಡಿಸುವಂತೆ ಆಗ್ರಹಿಸಿ ಕರ್ನಾಟಕ ರಾಜ್ಯ ಕಟ್ಟಡ ಕಟ್ಟುವ ಮತ್ತು ಕಲ್ಲು ಒಡೆಯುವ ಕ್ವಾರಿ ಕಾರ್ಮಿಕರ ಸಂಘದ ಜಿಲ್ಲಾ ಸಮಿತಿ ನೇತೃತ್ವದಲ್ಲಿ ಕಟ್ಟಡ ನಿರ್ಮಾಣ ಕಾರ್ಮಿಕರು ನಗರದಲ್ಲಿ ಪ್ರತಿಭಟನೆ ನಡೆಸಿದರು.

ಉಪ ವಿಭಾಗಾಧಿಕಾರಿ ಕಚೇರಿಗೆ ತೆರಳಿದ ಕಟ್ಟಡ ಕಾರ್ಮಿಕರು, ಆರೋಗ್ಯ ತಪಾಸಣೆ ಖರ್ಚು, ಕೊರೊನಾ ಪರಿಹಾರದ ನೆಪದಲ್ಲಿ ನೂರಾರು ಕೋಟಿ ಖರ್ಚು ಮಾಡಿ ಕಳಪೆ ಆಹಾರ ಸಾಮಗ್ರಿಗಳನ್ನು ಖರೀದಿಸಿ ಕಟ್ಟಡ ನಿರ್ಮಾಣ ಕಾರ್ಮಿಕರಿಗೆ ವಂಚನೆ ಮಾಡಿರುವ ಕೆಲ ಭ್ರಷ್ಟ ಅಧಿಕಾರಿಗಳು, ಇವರಿಗೆ ಸಾಥ್ ನೀಡಿರುವ ಭ್ರಷ್ಟ ರಾಜಕಾರಣಿಗಳ ಮೇಲೆ ನ್ಯಾಯಾಂಗ ತನಿಖೆ ಮಾಡಿ ತಪ್ಪಿತಸ್ಥರ ವಿರುದ್ಧ ಕಾನೂನಿನ ರೀತಿ ಮೊಕದ್ದಮೆ ದಾಖಲು ಮಾಡಿ ಕಲ್ಯಾಣ ಮಂಡಳಿಯಲ್ಲಿ ಆಗಿರುವ ನಷ್ಟವನ್ನು ವಾಪಸ್ ವಸೂಲಿ ಮಾಡಲು ಕ್ರಮಕೈಗೊಳ್ಳಬೇಕೆಂದು ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ಕಟ್ಟಡ ನಿರ್ಮಾಣ ಕಾರ್ಮಿಕರ ಸಂಘದ ಜಿಲ್ಲಾ ಸಮಿತಿಯ ಅಧ್ಯಕ್ಷ ವಿ.ಲಕ್ಷ್ಮಣ, ಕಾರ್ಯಾಧ್ಯಕ್ಷ ಪಿ.ಕೆ.ಲಿಂಗರಾಜ್, ಶಿವಕುಮಾರ್ ಡಿ. ಶೆಟ್ಟರ್, ಡಿ.ಷಣ್ಮುಗಂ, ಮುರುಗೇಶ್, ಹಾಲೇಕಲ್ಲು ಸಿದ್ದೇಶ್, ಸುರೇಶ್ ಯರಗುಂಟೆ, ಐರಣಿ ಚಂದ್ರು, ಹೆಚ್. ಕೆ.ಆರ್. ಸುರೇಶ್, ಆವರಗೆರೆ ತಿಪ್ಪೇಶ್, ಪಾಲಿಷ್ ನಾಗರಾಜ್, ವೆಂಕಟೇಶ, ನಾಗಮ್ಮ, ರಫೀಕ್ ಸೇರಿದಂತೆ, ಇತರರು ಭಾಗವಹಿಸಿದ್ದರು.

## ಜೈನ್ ಸಿವಿಲ್ ಇಂಜಿನಿಯರಿಂಗ್ ವಿದ್ಯಾರ್ಥಿಗಳಿಗೆ ಬೀಳ್ಕೊಡುಗೆ



ದಾವಣಗೆರೆ, ಜು. 8- ನಗರದ ಜೈನ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯ ಸಿವಿಲ್ ಇಂಜಿನಿಯರಿಂಗ್ ವಿಭಾಗದ ಪ್ರಸಕ್ತ ಶೈಕ್ಷಣಿಕ ಅಂತಿಮ ವರ್ಷದ ವಿದ್ಯಾರ್ಥಿಗಳಿಗೆ ಬೀಳ್ಕೊಡುಗೆ ಕಾರ್ಯಕ್ರಮವು ಜೆಪಿಎಸ್ ಸಭಾಂಗಣದಲ್ಲಿ ಇಂದು ನಡೆಯಿತು. ಪ್ರಾಂಶುಪಾಲ ಡಾ. ಡಿ.ಬಿ. ಗಣೇಶ್, ಸಿವಿಲ್ ವಿಭಾಗದ ಮುಖ್ಯಸ್ಥ ಡಾ. ರಾಹುಲ್ ಪಾಟೀಲ್, ದಾವಣಗೆರೆ ಸ್ಮಾರ್ಟ್ ಸಿಟಿ ಲಿಮಿಟೆಡ್‌ನ ಮುಖ್ಯ ಅಭಿಯಂತರರಾದ ಎಂ. ಸತೀಶ್ ಅವರು ಕಾರ್ಯಕ್ರಮವನ್ನು ಉದ್ಘಾಟಿಸಿದರು. ಕಾಲೇಜಿನ ಪ್ರಾಧ್ಯಾಪಕ, ಸಂಯೋಜಕ ಜಿ.ಎಂ. ರಘು ಮತ್ತು ಹೆಚ್.ಎಂ. ಭರತ್ ಮತ್ತು ಇತರರು ಉಪಸ್ಥಿತರಿದ್ದರು.

## ಮೇಘಸ್ಫೋಟ : 13 ಯಾತ್ರಿಗಳ ಸಾವು

**(1ನೇ ಪುಟದಿಂದ)** 25 ಟೆಂಟ್‌ಗಳಿಗೆ ಹಾಗೂ ಮೂರು ಸಮುದಾಯ ಅಡುಗೆ ಮನೆಗಳಿಗೆ ಹಾನಿಯಾಗಿದೆ.

ಪೊಲೀಸ್, ಸೈನ್ಯ ಹಾಗೂ ಎನ್.ಡಿ.ಆರ್.ಎಫ್. ಸಿಬ್ಬಂದಿ ನೆರವಿಗಾಗಿ ಕಾರ್ಯಾಚರಣೆ ಆರಂಭಿಸಿವೆ. ಅಗತ್ಯವಾದಲ್ಲಿ ಬಳಸಿಕೊಳ್ಳಲು ಸೈನ್ಯದ ಹೆಲಿಕಾಪ್ಟರ್ ಹಾಗೂ ಸಿಬ್ಬಂದಿಯನ್ನು ಸನ್ನದ್ಧವಾಗಿರಿಸಲಾಗಿದೆ. ಮಳೆ ಈಗಲೂ ಸುರಿಯುತ್ತಿದ್ದು, ಅಪಾಯ ಹೆಚ್ಚಾಗಿರುವುದರಿಂದ ಅಮರನಾಥ ಯಾತ್ರೆಯನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಗಿದೆ.

# ತೋಟಗಾರಿಕೆ ಬೆಳೆಗಳಲ್ಲಿ ಮುನ್ನೆಚ್ಚರಿಕೆ ಸಲಹೆಗಳು

ದಾವಣಗೆರೆ, ಜು. 8 - ಜಿಲ್ಲೆಯಾದ್ಯಂತ ಕಳೆದ ಒಂದು ವಾರದಿಂದ ಉತ್ತಮ ಮಳೆಯಾಗುತ್ತಿದ್ದು ತೋಟಗಾರಿಕೆ ಬೆಳೆಗಳಲ್ಲಿ ಮುನ್ನೆಚ್ಚರಿಕೆಯ ಕ್ರಮಗಳನ್ನು ಐಸಿಎಆರ್-ತರಳಬಾಳು ಕೃಷಿ ವಿಜ್ಞಾನ ಕೇಂದ್ರದ ತೋಟಗಾರಿಕೆ ತಜ್ಞರಾದ ಎಂ.ಜಿ. ಬಸವನಗೌಡ ತಿಳಿಸಿದ್ದಾರೆ.

ಅಡಿಕೆ ತೋಟಗಳಲ್ಲಿ ಅತಿಯಾದ ತೇವಾಂಶದಿಂದ ಹರಳು ಕಟ್ಟಿರುವ ದೊಡ್ಡ ಕಾಯಿಗಳು ಉದುರುತ್ತಿರುವುದು ಕಂಡು ಬಂದಿದೆ. ಅಂತಹ ತೋಟಗಳಲ್ಲಿ ತಾತ್ಕಾಲಿಕವಾಗಿ ಬಸಿಗಾಲುವೆಗಳನ್ನು ತೆಗೆದು ನೀರನ್ನು ಹೊರಗೆ ಹಾಕಬೇಕು. ಸಮಸ್ಯೆ ತೀವ್ರವಾಗಿದ್ದರೆ ಮಳೆ ಕಡಿಮೆಯಾದ ಮೇಲೆ ಹೆಕ್ಸಾಕೊನೋಜೋಲ್ 1 ಮಿ.ಲೀ., ಲಘು ಪೋಷಕಾಂಶದ ಮಿಶ್ರಣ 5 ಮಿಲೀ. ಪ್ರತೀ ಲೀಟರ್ ನೀರಿನಲ್ಲಿ ಬೆರೆಸಿ ಸಿಂಪಡಿಸಿ, ಸಣ್ಣ ಗಿಡಗಳಲ್ಲಿ ಕೊಳೆ ರೋಗದ ಬಾಧೆ ಹೆಚ್ಚಾಗುವ ಸಂಭವವಿದ್ದು, ಮುನ್ನೆಚ್ಚರಿಕೆಯಾಗಿ ಕಾಪರ್ ಆಕ್ಸಿಕ್ಲೋರೈಡ್ 3 ಗ್ರಾಂ ಪ್ರತೀ ಲೀಟರ್ ನೀರಿಗೆ ಬೆರೆಸಿ ಸಿಂಪಡಿಸಬೇಕು.

ಜಿಲ್ಲೆಯ ನ್ಯಾಮತಿ ಮತ್ತು ಜಗಳೂರು ತಾಲ್ಲೂಕಿನಲ್ಲಿ ಸುಮಾರು 1750 ಹೆ. ಪ್ರದೇಶದಲ್ಲಿ ಈರುಳ್ಳಿ ಬಿತ್ತನೆಯಾಗಿದ್ದು, ಬೆಳೆ 30-45 ದಿವಸಗಳ ಹಂತದಲ್ಲಿದೆ.

ಈ ಸಂದರ್ಭದಲ್ಲಿ ತೇವಾಂಶ ಹೆಚ್ಚಾದರೆ ನೇರಳೆ ಎಲೆ ಮಚ್ಚೆ ರೋಗ ಬರುವ ಸಂಭವವಿರುವುದರಿಂದ ಪ್ರೋಪಿಕೊನೊಜೋಲ್ 1 ಮಿಲೀ, ಕ್ಯಾಲ್ಸಿಯಂ ನೈಟ್ರೇಟ್ 2 ಗ್ರಾಂ. ಲಘು ಪೋಷಕಾಂಶ 4 ಮಿಲೀ. ಪತ್ರಿ ಲೀಟರ್‌ಗೆ ಬೆರೆಸಿ ಸಿಂಪಡಿಸಿ.

ಬಾಳೆ ಬೆಳೆಯಲ್ಲಿ ಪನಾಮ ಸೊರಗು ರೋಗದ ನಿಯಂತ್ರಣಕ್ಕೆ ಕಾರ್ಬಂಡೈಜಿಮ್ 2 ಗ್ರಾಂ, 19:19:19 @ 5 ಗ್ರಾಂ. ಪ್ರತಿ ಲೀಟರ್ ನೀರಿಗೆ ಬೆರೆಸಿ ಪ್ರತೀ ಗಿಡದ ಬುಡಕ್ಕೆ 2 ಲೀಟರ್ ದ್ರಾವಣ ಹಾಕಬೇಕು.

ಹೆಚ್ಚಿನ ಮಾಹಿತಿಗೆ ಐಸಿಎಆರ್-ತರಳಬಾಳು ಕೃಷಿ ವಿಜ್ಞಾನ ಕೇಂದ್ರ, ಸಮೀಪದ ತೋಟಗಾರಿಕೆ ಇಲಾಖೆಯನ್ನು ಸಂಪರ್ಕಿಸಲು ಕೇಂದ್ರದ ಮುಖ್ಯಸ್ಥರಾದ ಟಿ.ಎನ್. ದೇವರಾಜ ತಿಳಿಸಿದ್ದಾರೆ.

## ಅಡುಗೆ ಅನಿಲ ಬೆಲೆ ಏರಿಕೆ ಖಂಡಿಸಿ ಎಸ್.ಯು.ಸಿ.ಐ (ಸಿ) ಪ್ರತಿಭಟನೆ

ದಾವಣಗೆರೆ, ಜು.8- ಅಡುಗೆ ಅನಿಲ ಬೆಲೆ 50 ರೂ. ಹೆಚ್ಚಿಸಿರುವುದನ್ನು ಖಂಡಿಸಿ, ನಗರದ ಗಾಂಧಿ ವೃತ್ತದಲ್ಲಿ ನಿನ್ನೆ ಸೋಷಲಿಸ್ಟ್ ಯೂನಿಟಿ ಸೆಂಟರ್ ಆಫ್ ಇಂಡಿಯಾ (ಕಮ್ಯುನಿಸ್ಟ್) ಜಿಲ್ಲಾ ಸಮಿತಿಯಿಂದ ಪ್ರತಿಭಟನೆ ನಡೆಸಲಾಯಿತು.

ಎಸ್.ಯು.ಸಿ.ಐ (ಸಿ) ಜಿಲ್ಲಾ ಸಂಘಟನಾ ಸಮಿತಿ ಕಾರ್ಯದರ್ಶಿ ಕೈದಾಳೆ ಮಂಜುನಾಥ್ ಮಾತನಾಡಿ, ಕೇಂದ್ರದ ಮೋದಿ ಸರ್ಕಾರ ಗೃಹ ಬಳಕೆಯ ಗ್ಯಾಸ್ ಸಿಲಿಂಡರ್ ಬೆಲೆಯನ್ನು ಮತ್ತೊಮ್ಮೆ 50ರಷ್ಟು ಹೆಚ್ಚಳ ಮಾಡಿದೆ. ಇತ್ತೀಚೆಗಷ್ಟೆ ಮಾರ್ಚ್ ತಿಂಗಳಲ್ಲಿ 50 ರೂ. ಹೆಚ್ಚಳ ಮಾಡಿತ್ತು. ಮೇ ತಿಂಗಳಲ್ಲಿ 50 ರೂ. ಗಳನ್ನು ಹೆಚ್ಚು ಮಾಡಿತ್ತು. ಈಗ ಗೃಹ ಬಳಕೆಯ ಗ್ಯಾಸ್ ಸಿಲಿಂಡರ್ ಬೆಲೆ 1050 ದಾಟಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ವಾಣಿಜ್ಯ ಬಳಕೆಯ ಸಿಲಿಂಡರ್ ಬೆಲೆಯನ್ನು ಸಹ ಕ್ರಮವಾಗಿ 250, 102ರಷ್ಟು ಇತ್ತೀಚೆಗಷ್ಟೆ ಹೆಚ್ಚಳ ಮಾಡಿತ್ತು. ಈಗಾಗಲೇ ಅಗತ್ಯ ವಸ್ತುಗಳ ಬೆಲೆ ಏರಿಕೆಯಿಂದ ತತ್ತರಿಸುತ್ತಿರುವ ಜನರಿಗೆ ಮೋದಿ ಸರ್ಕಾರ ಮೇಲಿಂದ ಮೇಲೆ ಬರೆ ಹಾಕುತ್ತಲೇ ಇದೆ. ಕೋವಿಡ್‌ನಿಂದ ಬದುಕು ಕಳೆದುಕೊಂಡ ಸಾಮಾನ್ಯ ಜನರನ್ನು ಬೀದಿಗೆ ಬರುವಂತೆ ಮಾಡಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಜಿಲ್ಲಾ ಸಂಘಟನಾ ಸಮಿತಿಯ ಸದಸ್ಯ ಡಾ. ಸುನೀತ್ ಕುಮಾರ್ ಮಾತನಾಡಿ, ಕೇಂದ್ರ ಬಿಜೆಪಿ ಸರ್ಕಾರ ಕಾರ್ಪೊರೇಟ್ ಮಾಲೀಕರ 10.7 ಲಕ್ಷ, ಕೋಟಿ ಸಾಲ ಮನ್ನಾ ಮಾಡಿದೆ. ಶೇ.೩೩ರಷ್ಟಿದ್ದ ಕಾರ್ಪೊರೇಟ್ ತೆರಿಗೆಯನ್ನು ಶೇ.22ಕ್ಕೆ ಇಳಿಸಿದೆ. ಕೋವಿಡ್‌ನಿಂದಾಗಿ ಜನ ತತ್ತರಿಸುತ್ತಿರುವಾಗ ಅಂಬಾನಿ ಆಸ್ತಿ 3-4 ಪಟ್ಟು ಹೆಚ್ಚಾಗಿದೆ. ಮೋದಿ ಸರ್ಕಾರ ಸಂಪೂರ್ಣವಾಗಿ ಜನ ವಿರೋಧಿ ಹಾಗೂ ಕಾರ್ಪೋರೇಟ್ ಮಾಲೀಕರ ಪರವಾಗಿದೆ. ಕಾಂಗ್ರೆಸ್ ನೇತೃತ್ವದ ಯುಪಿಎ ಸರ್ಕಾರದ ಬಂಡವಾಳಶಾಹಿ ಪರ ನೀತಿಗಳನ್ನೇ ಬಿಜೆಪಿ ಸರ್ಕಾರ ಮುಂದುವರೆಸುತ್ತಿದೆ ಎಂದರು.

ಪ್ರತಿಭಟನೆಯಲ್ಲಿ ಸ್ಮಿತಾ, ಅಭಿ, ಪೂಜಾ ನಂದಿಹಳ್ಳಿ, ಪರಶುರಾಮ್, ತಿಪ್ಪೇಸ್ವಾಮಿ ಅಣಬೇರು ಸೇರಿದಂತೆ ಪಕ್ಷದ ಬೆಂಬಲಿಗರು, ನಾಗರಿಕರು ಪಾಲ್ಗೊಂಡಿದ್ದರು.

# ಅಗ್ನಿಪಥ್ ವಿರುದ್ಧ ಕಾಂಗ್ರೆಸ್ ಕಹಳೆ




ಮಾಯಕೊಂಡ

ದಾವಣಗೆರೆ, ಜು.8- ಕೇಂದ್ರ ಸರ್ಕಾರದ ಅಗ್ನಿಪಥ್ ಯೋಜನೆ ಜಾರಿಗೊಳಿಸದಂತೆ ಆಗ್ರಹಿಸಿ ಮಾಯಕೊಂಡ ಮತ್ತು ಬಸವಾಪಟ್ಟಣ ಬ್ಲಾಕ್ ಕಾಂಗ್ರೆಸ್ ಕಾರ್ಯಕರ್ತರು ಮಾಯಕೊಂಡದಲ್ಲಿ ಸೋಮವಾರ ಪ್ರತಿಭಟನೆ ನಡೆಸಿದರು.

ಕೆಪಿಸಿಸಿ ಸದಸ್ಯ ಡಾ. ವೈ. ರಾಮಪ್ಪ ಮಾತನಾಡಿ, ಅಗ್ನಿಪಥ್ ದೇಶದ ಯುವಕರ ದಿಕ್ಕುತಪ್ಪಿಸುವ ಯೋಜನೆ ಎಂದರು.

ಜಿಲ್ಲಾ ಪಂಚಾಯತ್ ಸದಸ್ಯ ಕೆ. ಎಸ್. ಬಸವಂತಪ್ಪ ಮಾತನಾಡಿ, ಯೋಧರಿಗೆ ಜಮೀನು, ಉದ್ಯೋಗ ನೀಡಲಾರದ ಇವರ ಕೈಯಲ್ಲಿ ಅರೆಕಾಲಿಕ ಯೋಧರ ಗತಿಯೇನು? ನಾಲ್ಕು ವರ್ಷ ದುಡಿದ ಮೇಲೆ ಕೆಲಸ ಕೊಡುತ್ತೇವೆ ಎಂದು ಹೇಳುವುದು ಚುನಾವಣಾ ತಂತ್ರವಷ್ಟೇ. ರೈತರ ಬೆಳೆಗೆ ಬೆಲೆ ಇಲ್ಲ. ಗೊಬ್ಬರದ ಬೆಲೆ ಗಗನ ಮುಟ್ಟಿದೆ. ಬಿಜೆಪಿಯಿಂದ ರಾಜ್ಯವೇ ದಿವಾಳಿಯಾಗಿದೆ ಎಂದರು.

ಕೆಪಿಸಿಸಿ ಸದಸ್ಯ ಡಿ. ಬಸವರಾಜ್ ಮಾತನಾಡಿ, ವಿಶ್ವದ ಶ್ರೇಷ್ಠ ಭಾರತದ ಮಿಲಿಟರಿಗೆ ಸೈನಿಕರನ್ನು ಗ್ರಾಮ ಪಂಚಾಯತಿಯ ನೀರುಗಂಟಿಗಳಂತೆ ಅಗ್ನಿವೀರರು ಎಂದು ನೇಮಕ ಮಾಡಲಾಗುತ್ತಿದೆ ಎಂದು ಆರೋಪಿಸಿದರು.

ಮುಖಂಡ ಆನಂದಪ್ಪ ಅಗ್ನಿಪಥ್ ಅವೈಜ್ಞಾನಿಕ. ಇದು ತಪ್ಪು. ಹಿಂತೆಗೆಯದಿದ್ದರೆ ಉಗ್ರ ಹೋರಾಟ ಮಾಡುತ್ತೇವೆ ಎಂದರು.

ಎಪಿಎಂಸಿ ಮಾಜಿ ಅಧ್ಯಕ್ಷ ಚಂದ್ರಶೇಖರ್, ಅಗ್ನಿಪಥ್ ಯುವಕರನ್ನು ನಂಬಿಸಿ, ವಂಚಿಸಿ ಚುನಾವಣೆಯಲ್ಲಿ ಗೆಲುವು ಸಾಧಿಸುವ ಸಂಚಾಗಿದೆ ಎಂದರು.

ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಬಿ.ಟಿ. ಹನುಮಂತಪ್ಪ, ಹೂವಿನಮಡು ಚನ್ನಬಸಪ್ಪ, ಎಪಿಎಂಸಿ ಮಾಜಿ ಸದಸ್ಯ ಶರಣಪ್ಪ, ಮೆಳ್ಳೇಕಟ್ಟೆ ಹನುಮಂತಪ್ಪ ಮಾತನಾಡಿದರು. ಆನಗೋಡು ಗ್ರಾಮ ಪಂಚಾಯತ್ ಅಧ್ಯಕ್ಷ ನಸರುಲ್ಲಾ, ಮುಖಂಡರಾದ ಕರಿಬಸಪ್ಪ, ಬಸವರಾಜಪ್ಪ, ಮಾಯಕೊಂಡ ಎಸ್. ಜಿ. ರುದ್ರೇಶ್, ಅಣಬೇರು ಜಾಫರ್ ಷರೀಫ್, ಗುಮ್ಮನೂರು ಶಂಭಣ್ಣ, ಜಯಪ್ರಕಾಶ್, ಕಂದಗಲ್ ರೇವಣ್ಣ, ತಬ್ರೇಜ್, ಅತ್ತಿಗೆರೆ ರೇವಣಸಿದ್ದಪ್ಪ, ಬೀರಪ್ಪ, ಭರತ್ ಮತ್ತಿತರರಿದ್ದರು.

# ರಾಷ್ಟ್ರಮಟ್ಟದ ಕರಾಟೆ ಸ್ಪರ್ಧೆಯಲ್ಲಿ ದ್ವಿತೀಯ ಸ್ಥಾನ






ದಾವಣಗೆರೆ, ಜು. 8- ಹೈದರಾಬಾದ್‌ಯಲ್ಲಿ ಈಚೆಗೆ ನಡೆದ ರಾಷ್ಟ್ರಮಟ್ಟದ ಕರಾಟೆ ಸ್ಪರ್ಧೆಯಲ್ಲಿ ದಾವಣಗೆರೆ ಇಂಡಿಯನ್ ಮಾರ್ಷಲ್ ಆರ್ಟ್ಸ್ ಸೆಲ್ಫ್ ಡಿಫೆನ್ಸ್ ಆರ್ಗನೈಷನ್ ಕರಾಟೆ ಪಟುಗಳು ಭಾಗವಹಿಸಿ ದ್ವಿತೀಯ ಬಹುಮಾನ ಪಡೆದಿದ್ದಾರೆ.

ಸಿದ್ಧಗಂಗಾ ಕಾಲೇಜಿನ ಹೆಚ್. ರಕ್ಷಿತಾ, ಶಿವಮೊಗ್ಗ ಯೂನಿವರ್ಸಿಟಿ ಕಾಲೇಜಿನ ಪಿ.ಎಂ. ರಮ್ಯ, ರಾಕೇಶ್ ದ್ವಿತೀಯ ಸ್ಥಾನ. ಎಸ್.ವಿ.ಎಸ್ ಶಾಲೆಯ ಟಿ. ದರ್ಶನ್, ಪಿ. ಪಿ.ಆರ್.ಎಸ್. ಶಾಲೆಯ ರಾಘವಿ, ಸಿದ್ದಗಂಗಾ ಶಾಲೆಯ ನಮ್ರತಾ, ರಾಷ್ಟ್ರೋತ್ಥಾನ ಶಾಲೆಯ ಆರ್. ಸ್ಫೂರ್ತಿ ಹಾಗೂ ಲಯನ್ಸ್ ಕ್ಲಬ್ ಶಾಲೆಯ ಸೈಯದ್ ಅಯಾನ್ ತೃತೀಯ ಸ್ಥಾನ ಪಡೆದಿದ್ದಾರೆ.

ಇದೇ ಸಂದರ್ಭದಲ್ಲಿ ತೆಲಗು ಖ್ಯಾತ ನಟರಾದ ಡಾ. ಸುಮಂತ್ ತಲವಾರ್ ಮುಖ್ಯ ಅತಿಥಿಗಳಾಗಿ ಆಗಮಿಸಿ ಕರ್ನಾಟಕ ರಾಜ್ಯ ಕರಾಟೆ ಶಿಕ್ಷಕರಿಗೆ ಸನ್ಮಾನಿಸಿ, ದ್ವಿತೀಯ ಸ್ಥಾನ ಪಡೆದ ಕರ್ನಾಟಕಕ್ಕೆ ಪ್ರಶಸ್ತಿ ನೀಡಿ ಗೌರವಿಸಿದರು ಎಂದು ತರಬೇತುದಾರ ಸನ್‌ಶೈನ್ ನಜೀರ್ ತಿಳಿಸಿದ್ದಾರೆ.

# ಆರ್.ಜಿ. ಕಾಲೇಜಿನಲ್ಲಿ ಇಂದು ಕಾರ್ಯಾಗಾರ

ಆರ್.ಜಿ. ಇನ್‌ಸ್ಟಿಟ್ಯೂಟ್ ಆಫ್ ಕಾಮರ್ಸ್ ಅಂಡ್ ಮ್ಯಾನೇಜ್ಮೆಂಟ್ ಮತ್ತು ದಾವಣಗೆರೆ ವಿಶ್ವ ವಿದ್ಯಾನಿಲಯದ ವಾಣಿಜ್ಯ ಮತ್ತು ನಿರ್ವಹಣಾಶಾಸ್ತ್ರ ಅಧ್ಯಾಪಕರ ವೇದಿಕೆ ಇವರ ಸಂಯುಕ್ತಾಶ್ರಯದಲ್ಲಿ ಆರ್‌ಜಿ ಕಾಲೇಜಿನಲ್ಲಿ ಇಂದು ಬೆಳಿಗ್ಗೆ 9.30ಕ್ಕೆ ವಾಣಿಜ್ಯ ಮತ್ತು ನಿರ್ವಹಣಾಶಾಸ್ತ್ರ ಅಧ್ಯಾಪಕರಿಗೆ ಕಾರ್ಯಾಗಾರ ಹಮ್ಮಿಕೊಳ್ಳಲಾಗಿದೆ.

ಕಾಲೇಜು ಶಿಕ್ಷಣ ಇಲಾಖೆಯ ಪ್ರಾದೇಶಿಕ ಜಂಟಿ ನಿರ್ದೇಶಕರ ಶಿವಮೊಗ್ಗ ಕಚೇರಿ ಜಂಟಿ ನಿರ್ದೇಶಕ ಪ್ರೊ. ಸಿ. ರಾಜಶೇಖರ್ ಹೆಬ್ಬಾರ್ ಕಾರ್ಯಕ್ರಮ ಉದ್ಘಾಟಿಸಲಿದ್ದು, ವಿವಿ ಕುಲಸಚಿವರಾದ ಪ್ರೊ. ಹೆಚ್.ಎಸ್. ಅನಿತಾ ರಾಷ್ಟ್ರೀಯ ಶಿಕ್ಷಣ ನೀತಿ ಕುರಿತು ಮಾತನಾಡಲಿದ್ದಾರೆ. ಕಾಲೇಜಿನ ಶೈಕ್ಷಣಿಕ ನಿರ್ದೇಶಕ ಪ್ರೊ. ಶಿವಪ್ರಕಾಶ್ ಪಿ. ಎಸ್, ವೇದಿಕೆ ಅಧ್ಯಕ್ಷ ಪ್ರೊ. ಟಿ. ಕರಿಬಸಪ್ಪ, ಕಾರ್ಯದರ್ಶಿ ಎಸ್. ವೆಂಕಟೇಶ್ ಬಾಬು ಮುಖ್ಯಅತಿಥಿಗಳಾಗಿ ಪಾಲ್ಗೊಳ್ಳಲಿದ್ದು, ಆರ್.ಜಿ. ಕಾಲೇಜಿನ ಅಧ್ಯಕ್ಷರಾದ ಶ್ವೇತಾ ಆರ್. ಗಾಂಧಿ ಅಧ್ಯಕ್ಷತೆ ವಹಿಸಿಕೊಳ್ಳಲಿದ್ದಾರೆ.

ಕಾರ್ಯಕ್ರಮದಲ್ಲಿ ಎರಡು ತಾಂತ್ರಿಕ ಗೋಷ್ಠಿಗಳಲ್ಲಿ ಪ್ರೊ. ಜಿ.ಎಸ್. ನೀಲಾಂಬಿಕಾ, ಪ್ರೊ. ಕೆ.ಎ. ಬಾಬು, ಪ್ರೊ. ಹೆಚ್.ಕೆ. ಶಿವಪ್ಪ, ಪ್ರೊ.ಲಕ್ಷ್ಮೀರಂಗನಾಥ, ಡಾ. ಜಿ.ಎಲ್. ರಾಜಶೇಖರಪ್ಪ ಮತ್ತು ಪ್ರೊ. ಕೆ.ಬಿ. ಸುನಿತ ಭಾಗವಹಿಸುವರು. ನಿವೃತ್ತ ಪ್ರಾಧ್ಯಾಪಕರಾದ ಪ್ರೊ. ಜಿ.ಎಂ. ಮಹೇಂದ್ರ ಸಮಾರೋಪ ನುಡಿಗಳನ್ನಾಡುವರು.

## ಪಾಲಿಸ್ಟರ್, ಯಂತ್ರದಿಂದ ಮಾಡಿದ ರಾಷ್ಟ್ರಧ್ವಜಕ್ಕೂ ತೆರಿಗೆ ವಿನಾಯಿತಿ

**(1ನೇ ಪುಟದಿಂದ)** ಸಂಹಿತೆಗೆ ತರಲಾದ ತಿದ್ದುಪಡಿ ಅನ್ವಯ, ಯಂತ್ರದಿಂದ ಉತ್ಪಾದಿಸಲಾದ ಹಾಗೂ ಪಾಲಿಸ್ಟರ್‌ನಿಂದ ಉತ್ಪಾದಿಸಲಾದ ರಾಷ್ಟ್ರ ಧ್ವಜಕ್ಕೂ ತೆರಿಗೆ ವಿನಾಯಿತಿ ಇದೆ ಎಂದು ಕೇಂದ್ರ ಕಂದಾಯ ಇಲಾಖೆ ಸ್ಪಷ್ಟನೆ ನೀಡಿದೆ.

**ಮನೆ ಕೆಲಸಕ್ಕೆ ಬೇಕಾಗಿದ್ದಾರೆ**
ವಿದ್ಯಾನಗರದ ಮನೆಯಲ್ಲಿ ಅಡುಗೆ ಮತ್ತು ಮನೆ ಕೆಲಸ ಮಾಡುವ ಲಿಂಗಾಯತ ಹೆಣ್ಣು ಮಗಳು ಬೇಕಾಗಿದ್ದಾರೆ.
ಸಂಪರ್ಕಿಸಿ : 72089 61824

**ಬಾಡಿಗೆಗೆ ಇದೆ**
ದಾವಣಗೆರೆ ಹದಡಿ ಮುಖ್ಯರಸ್ತೆ, ಟಿ.ವಿ.ಎಸ್. ಶೋ ರೂಂ ಪಕ್ಕ, ಉದಯ ಮಾರ್ಟ್ (ವಾಣಿ ರೈಸ್ ಮಿಲ್) ಎದುರು, ಶಿವಕುಮಾರಸ್ವಾಮಿ ಬಡಾವಣೆಯಲ್ಲಿ ಸುಸಜ್ಜಿತವಾದ ಮಳಿಗೆ 1ನೇ ಮಹಡಿ ಎಲ್ಲಾ ರೀತಿಯ ವ್ಯಾಪಾರಗಳಿಗೆ ಯೋಗ್ಯವಾದ 1104 ಅಡಿಗಳು ಹಾಗೂ 3250 ಅಡಿ ಸೆಲ್ಲರ್ ಬಾಡಿಗೆಗೆ ಇದೆ. ಮತ್ತು 4508 ಮೇಲ್ಛಾವಣಿ ಖಾಲಿ ಜಾಗ ಬಾಡಿಗೆಗೆ ಇದೆ.
96205 95579, 87924 53686

**ಸೈಟ್‌ಗಳು ಮಾರಾಟಕ್ಕಿವೆ**
ವಿನಾಯಕ ಬಡಾವಣೆಯಲ್ಲಿ 45x90 ಉತ್ತರ, 30x40 ದಕ್ಷಿಣ ಡಾಲರ್ಸ್ ಕಾಲೋನಿಯಲ್ಲಿ 30x50 ಉತ್ತರ ಶಿವ-ಪಾರ್ವತಿ ಬಡಾವಣೆಯಲ್ಲಿ 30x60 ಪೂರ್ವ, ಬನಶಂಕರಿ ಬಡಾವಣೆಯಲ್ಲಿ 30x50 ಪಶ್ಚಿಮ
ಸ್ವಾಮಿ ಏಜೆಂಟ್ ವಿದ್ಯಾನಗರ
97421 44715

**ಹೋಟೆಲ್ ಮಾರಾಟಕ್ಕಿದೆ**
ಕೆ.ಎಸ್.ಆರ್.ಟಿ.ಸಿ. ಬಸ್‌ಸ್ಟ್ಯಾಂಡ್ ಹಿಂಭಾಗ, ನಿಟುವಳ್ಳಿ ಮೇನ್ ರೋಡ್‌ಗೆ ಇರುವ **ತೃಪ್ತಿ ಹೋಟೆಲ್**
(ತಂದೂರಿ ಡ್ರಮ್, ಗೋಬಿ ಗಾಡಿ ಸೇರಿ) ಮಾರಾಟಕ್ಕಿದೆ. ಸಂಪರ್ಕಿಸಿ :
99024 61583

**Translation Classes**
PSI ಇತರೆ Examsಗಾಗಿ
ಸಂಪರ್ಕಿಸಿ : 88925 59549

**WANTED**
Boys required for computer billing work at Food Mart Supermarket.
Quli : B.Com
Mob : 98864 63531

**ಬೇಕಾಗಿದ್ದಾರೆ**
ದಾವಣಗೆರೆಯ ಶ್ರೀ ವಿನಾಯಕ ನಗರ ಸಾರಿಗೆ ಬಸ್ಸಿನಲ್ಲಿ ಕೆಲಸ ಮಾಡಲು ಡ್ರೈವರ್‌ಗಳು ಮತ್ತು ಪುರುಷ ಹಾಗೂ ಮಹಿಳಾ ಕಂಡಕ್ಟರ್‌ಗಳು ಬೇಕಾಗಿದ್ದಾರೆ.
ಸಂಪರ್ಕಿಸಿ : 63647 83999

**ತಕ್ಷಣ ಕೆಲಸಕ್ಕೆ ಬೇಕಾಗಿದ್ದಾರೆ**
ಪೆಟ್ರೋಲ್ ಬಂಕ್‌ನಲ್ಲಿ ಕೆಲಸ ಮಾಡಲು ಅನುಭವವುಳ್ಳವರು ಪುರುಷರು ಮತ್ತು ಮಹಿಳೆಯರು (Shift : Day & Night) ಕೆಲಸಕ್ಕೆ ಬೇಕಾಗಿದ್ದಾರೆ. ಸಂಪರ್ಕಿಸಿ :
94821 09492, 94807 77338

**ಮನೆ ಲೀಸ್‌ಗೆ ಇದೆ**
4ನೇ ಮೇನ್ 1ನೇ ಕ್ರಾಸ್ ರಾಯಲ್ ಚೌಟ್ರಿ ಹತ್ತಿರ, ವಿನೋಬನಗರ 2ನೇ ಮಹಡಿ ಸಿಂಗಲ್ ಬೆಡ್ ರೂಂ ಮನೆ ಲೀಸ್‌ಗೆ ಇದೆ.
78929 90632, 97389 34555,

**PART TIME WORK**
ಬಿಡುವಿನ ವೇಳೆಯಲ್ಲಿ ನೀವು ಕುಳಿತ ಸ್ಥಳದಲ್ಲಿಯೇ ಕೆಲಸ / JOB
ವಾರದ ಸಂಬಳ : 3000 ರಿಂದ 5000 ಮೇಲ್ಪಟ್ಟು. ಕೊರಿಯರ್ ಸೌಲಭ್ಯವಿದೆ.
91084 18233, 97432 17566

**ಮನೆಗಳು ಬಾಡಿಗೆಗೆ ಇವೆ**
ಪಿ.ಜೆ ಬಡಾವಣೆ ಚರ್ಚ್ ಹಿಂಭಾಗ (ಲೂರ್ಡ್ಸ್ ಬಾಯ್ಸ್ ಸ್ಕೂಲ್ ಹತ್ತಿರ) ಮುದ್ದಳ್ಳಿ ತೋಟದಲ್ಲಿ 1BHK ಮನೆಗಳು ಬಾಡಿಗೆಗೆ ಇವೆ. ವಿಚಾರಿಸಿ
94811 82670

**ಬೇಕಾಗಿದ್ದಾರೆ**
ಬೆಳಿಗ್ಗೆ ಮತ್ತು ಸಂಜೆ ಮನೆ ಮನೆಗೆ ಹಾಲು ವಿತರಿಸಲು ಉತ್ಸಾಹಿ ಯುವಕರು ಬೇಕಾಗಿದ್ದಾರೆ.
ಸಂಪರ್ಕಿಸಿ
83174 62483
88920 07725

**ಮನೆ ಬಾಡಿಗೆಗೆ ಇದೆ**
ಎಂಸಿಸಿ ಬಿ ಬ್ಲಾಕ್ ಕುವೆಂಪು ನಗರದಲ್ಲಿರುವ ಶಂಕರ ಲೀಲಾ ಅಪಾರ್ಟ್‌ಮೆಂಟ್ (ಹಳೇ ಶಂಕರ ಲೀಲಾ ಕಲ್ಯಾಣ ಮಂಟಪ) ನಲ್ಲಿ 2BHK ಮನೆ ಬಾಡಿಗೆಗೆ ಇದೆ.
ಸಂಪರ್ಕಿಸಿ
99164 54770

**ಶಿಕ್ಷಕರು ಬೇಕಾಗಿದ್ದಾರೆ**
ವಿದ್ಯಾರ್ಹತೆ : D.Ed., B.Ed
ಶ್ರೀ ಮಾನಸ ಗಂಗೋತ್ರಿ ಕಾನ್ವೆಂಟ್
ಆಲೂರು ಹಟ್ಟಿ, ದಾವಣಗೆರೆ ತಾ।। ಜಿ।।
94481 86238
96630 69188

**FOR SALE**
Plywood And Glass Racks Suitable For Shops For Sale.
Contact No
98440 12137

**ಮನೆ ಬಾಡಿಗೆಗೆ /ಲೀಸ್‌ಗೆ**
ಡಬಲ್ ಬೆಡ್ ರೂಂ ಮನೆ ಎಂಸಿಸಿ ಬಿ ಬ್ಲಾಕ್, ಶಂಕರ್ ಲೀಲಾ ಗ್ಯಾಸ್ ಹಿಂಭಾಗ, ಎಬಿಸಿಡಿ ಡ್ಯಾನ್ಸ್ ಕ್ಲಾಸ್ ಎದುರು ಬಾಡಿಗೆಗೆ / ಲೀಸ್ ಗಿದೆ.
ಸಸ್ಯಹಾರಿಗಳು ಮಾತ್ರ ಸಂಪರ್ಕಿಸಿ
99800 15686, 78926 60533

**ಬೇಕಾಗಿದ್ದಾರೆ**
DRONA EDU
ದಾವಣಗೆರೆ ಜಿಲ್ಲೆಗೆ ತಾಲ್ಲೂಕು ಮ್ಯಾನೇಜರ್ ಬೇಕಾಗಿದ್ದಾರೆ. Marketing Experence ಉಳ್ಳವರು ಮತ್ತು ಸೇಲ್ಸ್ Expeience ಉಳ್ಳವರು
ವಿದ್ಯಾರ್ಹತೆ: SSLC & PUC Any Degree
ಸಂಬಳ: 20,000 to 22,000 PM + Incentive
96111 54051, 79005 30053

**ಈಶ್ವರಿ ತರಬೇತಿ ಕೇಂದ್ರ**
ಫ್ಯಾಷನ್ ಡಿಸೈನಿಂಗ್ & ಟೈಲರಿಂಗ್ ಕೋರ್ಸ್
ಸಮಯ : ಬೆಳಿಗ್ಗೆ 10ರಿಂದ 5ರ ವರೆಗೆ ಅನುಭವಿ ತರಬೇತುದಾರರಿಂದ ಕೋರ್ಸ್ ನಡೆಸಲಾಗುವುದು.
ಸಂಪರ್ಕಿಸಿ : ವಿಳಾಸ : ಶ್ರೀ ಜಗದ್ಗುರು ರೇಣುಕಾ ಕೃಪಾ #2798 ಜಿ. ಕ್ರಾಸ್, 3ನೇ ಮೇನ್, 'ಬಿ'ಬ್ಲಾಕ್ , ಎಸ್.ಎಸ್. ಲೇಔಟ್.
97316 50435, 95358 15543

**WANTED**
Office staff -05 posts, Team Leaders-03 posts.
Quali : B.Com ,BCA, B.Sc, MBA, M.Com,
Walk In Interview
July 9Th And 10Th Saturday & Sunday \ Empire Trading MSM Plaza, DCMCircle, DCM Township Davanagere-04
Contact : 08192 466181
76760 63979, 99866 65474

**ನೀರಿನ ಲೀಕೇಜ್**
(ವಾಟರ್ ಪ್ರೂಫಿಂಗ್)
ನಿಮ್ಮ ಮನೆ ಮತ್ತಿತರೆ ಕಟ್ಟಡಗಳ ಬಾತ್‌ರೂಂ, ಬಾಲ್ಕನಿ, ಟೆರೇಸ್, ನೀರಿನ ತೊಟ್ಟಿ, ಗೋಡೆ ಬಿರುಕು, ನೀರಿನ ಟ್ಯಾಂಕ್, ಎಲ್ಲಾ ರೀತಿಯ ನೀರಿನ ಲೀಕೇಜ್‌ಗಳಿಗೆ ಸಂಪರ್ಕಿಸಿ:
ಮೊ. 9538777582
ಕೆಲಸ 100% ಗ್ಯಾರಂಟಿ.

**WANTED TEACHERS**
Qualification :
D.Ed., B.Ed.
Sri Manasa Gangotri Convent
Aluru hatti, Davanagere (T), (D)
Contact Number
94481 86238, 96630 69188

**ಮನೆ ಬಾಡಿಗೆಗೆ**
ಸಸ್ಯಹಾರಿಗಳಿಗೆ 1BHK,2BHK/Room ಶಾಮನೂರು, ಜರೀಕಟ್ಟೆ ರಸ್ತೆ, ಡಾಲರ್ಸ್ ಕಾಲೋನಿ ಎದುರು, ತಿರುಮಲ ಬಾರ್ ಹತ್ತಿರ, ಶಾಮನೂರು.
93424 01115

**ಬೇಕಾಗಿದ್ದಾರೆ**
ತಕ್ಷಣ ಸೇಲ್ಸ್‌ಗರ್ಲ್ಸ್, ಸೇಲ್ಸ್ ಬಾಯ್ಸ್ ಹಾಗೂ ಹೆಲ್ಪರ್ ಬೇಕಾಗಿದ್ದಾರೆ.
ಸಂಪರ್ಕಿಸಿ :
ಗಂಗಾವತಿ ಸಿಲ್ಕ್ ಸ್ಯಾರಿ ಸೆಂಟರ್
ಬಿನ್ನಿ ಕಂಪನಿ ರೋಡ್, ದಾವಣಗೆರೆ.-1

**ಸೈಟುಗಳು, ಮನೆಗಳು (ಮಾರಾಟ)**
ಸರ್ಕಾರಿ ನೌಕರರ ಬಡಾವಣೆ 'ಬಿ' ಬ್ಲಾಕ್ ಉತ್ತರ-ಪೂರ್ವ ಕಾರ್ನರ್ 25x40, ಉತ್ತರ ದಿಕ್ಕು 25x40, ಬನಶಂಕರಿ ಬಡಾವಣೆ 30x57 - 2 ಸೈಟುಗಳು. ಪೂರ್ವ ದಿಕ್ಕು ಶಿವಪಾರ್ವತಿ ಬಡಾವಣೆ 30x52 ಪೂರ್ವ ದಿಕ್ಕು ಡುಪ್ಲೆಕ್ಸ್ ಮನೆ ಮಾರಾಟಕ್ಕಿದೆ.
ಸಂಪರ್ಕಿಸಿ : ಸುರೇಶ್
84314 00907

**ಬಾಂಡ್ ಕಳೆದಿದೆ**
ಬಸವರಾಜ್ G.M ಆದ ನಾನು ತಿಳಿಸುವುದೇನೆಂದರೆ ದಿ 10/05/22 ರಂದು ಅರ್ಜಿದಾರರ ಬಾಬ್ತು ಸಿ.ನಂ: 8556 ಡಿ.ಪಿ ಐಡಿ ಕ್ಲೈಂಟ್ ಐ.ಡಿ, ಎಫ್.ಡಿ. ಐಡಿ ನಂ:ಡಿ.ಎಸ್.ಬಿ 1099 ನೇ ಸಕ್ಕರೆ ಕಂಪನಿಯ ಬಾಂಡ್ ಮನೆಯಲ್ಲಿ ಆಕಸ್ಮಿಕವಾಗಿ ಕಳೆದು ಹೋಗಿರುತ್ತದೆ. ಯಾರಿಗಾದರೂ ಸಿಕ್ಕಿದ್ದಲ್ಲಿ ಸಂಪರ್ಕಿಸಿ
96636 23871

**ಸೆಕ್ಯೂರಿಟಿ ಗಾರ್ಡ್ ಬೇಕಾಗಿದ್ದಾರೆ**
Salary : 8000 to 12000
91130 53483, 97437 56647,
88678 53961
ವಿನೋಬ ನಗರ ಬಸ್‌ಸ್ಟಾಪ್, ಪಿ.ಬಿ. ರೋಡ್, ದಾವಣಗೆರೆ.

**ತಕ್ಷಣ ಬೇಕಾಗಿದ್ದಾರೆ**
DTDC ಕೋರಿಯರ್ ಆಫೀಸ್‌ನಲ್ಲಿ ಕೆಲಸ ಮಾಡಲು ಕಂಪ್ಯೂಟರ್ ಜ್ಞಾನವಿರುವ ಹುಡುಗರು ಬೇಕಾಗಿದ್ದಾರೆ.
ವಯಸ್ಸು : 20 ರಿಂದ 28 ವರ್ಷ
ಮೊ. : 97385 23711

**ಸೊಳ್ಳೆ ಮೆಶ್ ಹಾಕಲಾಗುವುದು**
ನಮ್ಮಲ್ಲಿ ಎಲ್ಲಾ ತರಹದ ಕುಷನ್ ವರ್ಕ್ಸ್, ಸೋಫಾ ಸೆಟ್, Duroflex Bed, ಕಿಟಕಿಗೆ ಅಲ್ಯೂಮಿನಿಯಂ ಡೋರ್, ಸೊಳ್ಳೆ ಮೆಶ್ ಹಾಕಲಾಗುವುದು
Swapna Cushion Work
Behind Vittal Temple, Maharaj Pet, Davanagere
98445 81966

**ಬೇಕಾಗಿದ್ದಾರೆ**
ದಾವಣಗೆರೆ-ಹರಿಹರ ಮತ್ತು ರಾಣೇಬೆನ್ನೂರು ಸುತ್ತ-ಮುತ್ತ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ. ESI, PF ಸೌಲಭ್ಯ ಇದೆ.
ಹೈ ಅಲರ್ಟ್ ಸೆಕ್ಯೂರಿಟಿ ಸರ್ವಿಸ್.
ಮುಸ್ಲಿಂ ಹಾಸ್ಟೆಲ್, ದಾವಣಗೆರೆ
78990 15677, 96113 94063

**ಮನೆಯಲ್ಲಿ ಪಾಠ ಮಾಡಲು ಶಿಕ್ಷಕರು ಬೇಕಾಗಿದ್ದಾರೆ**
9ನೇ ತರಗತಿ CBSEಗೆ ಮನೆಯಲ್ಲಿ ಪಾಠ ಮಾಡಲು ಶಿಕ್ಷಕರು ಬೇಕಾಗಿದ್ದಾರೆ. ಸಂಪರ್ಕಿಸಿ :
88845 64642

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ಧಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

**SPECIAL COACHING**
PUC Failed Students | 100% Result
K-CET, NEET
Long Term Coaching
Hostel Facility Available
SINCHAN COACHING CENTER
Near SBI ATM, Ram & Co Circle, Davangere
8861445913, 9019580600

**WANTED**
Banking sector tele caller (Female Only)
Qualification - Any degree / PUC
No. 2257/5 2nd Floor, MCC `A' Block Beside Togataveera Kalyana Mantapa
96869 56142
Interview time : 11 AM

**ನೇರ ಪರೀಕ್ಷೆಗಳು**
ಉನ್ನತ ಶಿಕ್ಷಣಕ್ಕೆ ಮತ್ತು ಸರ್ಕಾರಿ ಕೆಲಸಕ್ಕೆ ಉಪಯೋಗ SSLC, PUC Degree, Pharmacy & BHMS (Government & Private Collage)
ಶ್ರೀ ಸಾಯಿ ಕರೆಸ್ಪಾಂಡೆನ್ಸ್ ಕಾಲೇಜ್
ಸೋಮು ಮೆಡಿಕಲ್ಸ್ ಮೇಲೆ, ಗಣೇಶ ದೇವಸ್ಥಾನದ ಹಿಂಭಾಗ, ರಾಂ ಅಂಡ್ ಕೋ ಸರ್ಕಲ್, ದಾವಣಗೆರೆ.
87620 58369, 90080 67049

**ಸಾಲಗಳಿಗಾಗಿ ಸಂಪರ್ಕಿಸಿ**
ಕಡಿಮೆ ಬಡ್ಡಿ ದರದಲ್ಲಿ ಮನೆ ಕಟ್ಟಲು, ಮನೆ ತೆಗೆದುಕೊಳ್ಳಲು, ಸೈಟ್ ಖರೀದಿ, ಮನೆ ಅಡಮಾನ ಬೇರೆ ಬ್ಯಾಂಕಿನ ಸಾಲ ವರ್ಗಾವಣೆ ಮತ್ತು ಅಧಿಕ ಸಾಲ ಪರ್ಸನಲ್ ಲೋನ್ ಮತ್ತು ವ್ಯವಹಾರ ಸಾಲಗಳಿಗಾಗಿ ಸಂಪರ್ಕಿಸಿ :
99455 22287

**2BHK ಫ್ಲಾಟ್ ಮಾರಾಟಕ್ಕಿದೆ**
2 BHK ಫ್ಲಾಟ್ ಮಾರಾಟಕ್ಕಿದೆ. ಎಂಸಿಸಿ ಬಿ ಬ್ಲಾಕ್, ದಾವಣಗೆರೆ.
96863 96992
99001 18054

**ಸಸಿಗಳು ದೊರೆಯುತ್ತವೆ**
ನಮ್ಮಲ್ಲಿ ಅಡಿಕೆ ತೆಂಗು , ಮಾವು ಸಪೋಟ, ಶ್ರೀಗಂಧ, ಹೆಬ್ಬೇವು, ಮಹಾಘನಿ, ನಿಂಬೆ, ದಾಳಿಂಬೆ, ಗುಲಾಬಿ ಇನ್ನಿತರೆ ಗಿಡಗಳು ಹಾಗೂ ಸಾವಯವ ಗೊಬ್ಬರ ದೊರೆಯುತ್ತದೆ. ಸಂಪರ್ಕಿಸಿ.
94484 39639

**WANTED**
1. Lab Technician - Dip. in Lab technician
2. Receptionist - Any degree holder can Apply
Shilpa Diagnostics,
MCC B Block, Near Swimming Pool, Davangere.
98440 65638

**ಬೇಕಾಗಿದ್ದಾರೆ**
ಬ್ರಾಂಡೆಡ್ ಬಟ್ಟೆ ಅಂಗಡಿಯಲ್ಲಿ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ.
Ph :98867 57688

**LEWA**
Proffessional Makeup Artist Course & Beauty Courses Conducting here
Contact No :
81971 79414, 78924 68118

**WANTED**
SALES EXECUTIVE
(Davangere, Vijayapura, Hubli)
Quali : Any Degree, 2 wheeler must
Micro Labs (Veterinary)
97384 73773
mail : pravi.b080@gmail.com

**ನೀರಿನ ಲೀಕೇಜ್**
(ವಾಟರ್ ಪ್ರೂಫಿಂಗ್)
ನಿಮ್ಮ ಮನೆ, ಮತ್ತಿತರ ಕಟ್ಟಡಗಳ ಬಾತ್‌ರೂಂ, ಟೆರೇಸ್, ಬಾಲ್ಕನಿ, ಸಂಪು, ಗೋಡೆ ಬಿರುಕು, ನೀರಿನ ಟ್ಯಾಂಕ್ ಎಲ್ಲಾ ರೀತಿಯ ನೀರಿನ ಲೀಕೇಜ್‌ಗಳಿಗೆ ಸಂಪರ್ಕಿಸಿರಿ :
80955 09025
ಕೆಲಸ : 100% ಗ್ಯಾರಂಟಿ

**WANTED TEACHERS**
SKP Vidyapeeta (R), Davangere
For English medium school to teach English subject
Qualification : D.Ed, or BA, B.Ed
SRI VASAVI ENGLISH MEDIUM HIGHER PRIMARY SCHOOL
Devaraj urs layout 'C' block 5th cross, Davanagere-6. Contact immediately.
98447 45888

**ಪ್ರವೇಶ ಪ್ರಕಟಣೆ**
ಡಿಪ್ಲೋಮಾ ಇನ್ ಪೇಷೆಂಟ್ ಕೇರ್ ನರ್ಸಿಂಗ್ - 2ವರ್ಷ
ವಿದ್ಯಾರ್ಹತೆ: SSLC/PUC/ITI ಪಾಸ್/ಫೇಲ್ ಖಾಸಗಿ ಆಸ್ಪತ್ರೆ, ನರ್ಸಿಂಗ್ ಹೋಂಗಳಲ್ಲಿ ನರ್ಸ್‌ಗಳಾಗಿ ಕೆಲಸ ಮಾಡಬಹುದು. ಯಶಸ್ವಿ 15ನೇ ವರ್ಷದಲ್ಲಿ
ಮಾನಸ ಕಮ್ಯೂನಿಟಿ ಕಾಲೇಜ್ (ರಿ)
LK ಕಾಂಪ್ಲೆಕ್ಸ್, 1ನೇ ಮಹಡಿ, ಅಶೋಕ ರಸ್ತೆ, 1ನೇ ಕ್ರಾಸ್, ಆಹಾರ್ 2000 ಹಿಂಭಾಗ ರಸ್ತೆ, ದಾವಣಗೆರೆ-577002.
97402 58276

**Work From Home**
Male/ Female,
Full / Part time Hand writing work. Small to Capital Letter.
Earn Per Month. 10,000/- to 12,000/-
Calling time 10 AM to 7 PM
89718 52431

**ಶಿಕ್ಷಕಿ ಬೇಕಾಗಿದ್ದಾರೆ**
ಶಾಲೆಯಲ್ಲಿ ಮಕ್ಕಳಿಗೆ ಕಂಪ್ಯೂಟರ್ (Basic) ಹೇಳಿಕೊಡಲು ಶಿಕ್ಷಕಿ ಬೇಕಾಗಿದ್ದಾರೆ.
95910 00198

# ವಾಲ್ಮೀಕಿ ಶ್ರೀಗಳ ಧರಣಿ ಬೆಂಬಲಿಸಿ 11ಕ್ಕೆ ಡಿಸಿ ಕಚೇರಿ ಮುಂದೆ ಪ್ರತಿಭಟನೆ



ದಾವಣಗೆರೆ, ಜೂ. 8- ಮೀಸಲಾತಿ ಹೆಚ್ಚಳಕ್ಕಾಗಿ ಆಗ್ರಹಿಸಿ ಶ್ರೀ ಮಹರ್ಷಿ ವಾಲ್ಮೀಕಿ ಪ್ರಸನ್ನಾನಂದ ಸ್ವಾಮೀಜಿ ಅವರು ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ನಡೆಸುತ್ತಿರುವ ಅಹೋರಾತ್ರಿ ಧರಣಿ ಸತ್ಯಾಗ್ರಹವನ್ನು ಬೆಂಬಲಿಸಿ, ಸ್ವಾಭಿಮಾನಿ ಎಸ್.ಸಿ./ಎಸ್.ಟಿ. ಸಂಘಟನೆಗಳ ಒಕ್ಕೂಟದಿಂದ ಇದೇ ದಿನಾಂಕ 11ರ ಸೋಮವಾರ ಬೆಳಿಗ್ಗೆ 11 ಗಂಟೆಗೆ ಜಿಲ್ಲಾಧಿಕಾರಿ ಕಚೇರಿ ಮುಂದೆ ಪ್ರತಿಭಟನೆ ಹಮ್ಮಿಕೊಂಡಿರುವುದಾಗಿ ಒಕ್ಕೂಟದ ಸಂಚಾಲಕ ಹೊದಿಗೆರೆ ರಮೇಶ್ ತಿಳಿಸಿದ್ದಾರೆ.

ಇಂದಿಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಮೀಸಲಾತಿ ಹೆಚ್ಚಳಕ್ಕಾಗಿ ನಡೆಸುತ್ತಿರುವ ಶ್ರೀಗಳ ಹೋರಾಟ ಕಾನೂನಾತ್ಮಕ, ಸಾಮಾಜಿಕವಾಗಿ ನ್ಯಾಯಯುತವಾಗಿದೆ. ಆದರೆ ಈ ಹೋರಾಟವನ್ನು ಸರ್ಕಾರ ಹತ್ತಿಕ್ಕುವ ಪ್ರಯತ್ನ ಮಾಡುತ್ತಿದೆ. ಆ ಮೂಲಕ ಡಾ.ಬಿ.ಆರ್. ಅಂಬೇಡ್ಕರ್ ಅವರ ಸಂವಿಧಾನದ ಮೂಲ ಆಶಯಗಳಿಗೆ ಧಕ್ಕೆ ತರುವ ಕೆಲಸ ಮಾಡುತ್ತಿದೆ ಎಂದು ಆರೋಪಿಸಿದರು.

ಹೋರಾಟಗಳ ಅಹವಾಲುಗಳನ್ನು ಆಲಿಸುವುದು ರಾಜಧರ್ಮ. ಆದರೆ ಅದನ್ನು ವಿರೋಧಿಸಿ ಸರ್ಕಾರ ಮನುವಾದಿ ಆಡಳಿತ ನಡೆಸುತ್ತಿದೆ ಎಂದ ಅವರು, ಇದೇ ಧೋರಣೆ ಮುಂದುವರೆದರೆ ಮತದಾರರ ಬಳಿ ಹೋಗಿ ಅವರನ್ನು ಜಾಗೃತಗೊಳಿಸಿ ನಿಮ್ಮನ್ನು ಮನೆಗೆ ಕಳುಹಿಸುವ ಕೆಲಸ ಮಾಡುವುದಾಗಿ ಎಚ್ಚರಿಸಿದರು.

ಸರ್ಕಾರ ಕೂಡಲೇ ನ್ಯಾ. ನಾಗಮೋಹನದಾಸ್ ಇವರ ವರದಿಯನ್ನು ಯಥಾವತ್ತಾಗಿ ಜಾರಿಗೊಳಿಸಿ, ವಾಲ್ಮೀಕಿ ಶ್ರೀ ಪ್ರಸನ್ನಾನಂದ ಸ್ವಾಮೀಜಿ ಅವರ ಬೇಡಿಕೆಗಳನ್ನು ಕೂಡಲೇ ಈಡೇರಿಸಬೇಕು ಎಂದು ಒತ್ತಾಯಿಸಿದರು.

ಶ್ರೀಗಳ ಹೋರಾಟ ಬೆಂಬಲಿಸಿ ಜಿಲ್ಲಾಧಿಕಾರಿ ಕಚೇರಿ ಬಳಿ ನಡೆಸುವ ಪ್ರತಿಭಟನೆಗೆ ಎಲ್ಲಾ ಎಸ್.ಸಿ., ಎಸ್.ಟಿ ಸಂಘಟನೆಗಳು ಭಾಗವಹಿಸಿ ಬೆಂಬಲಿಸುವಂತೆ ಅವರು ಕರೆ ನೀಡಿದರು.

ಪತ್ರಿಕಾಗೋಷ್ಠಿಯಲ್ಲಿ ವಿವಿಧ ಸಂಘಟನೆಗಳ ಮುಖಂಡರುಗಳಾದ ಹೆಗ್ಗೆರೆ ರಂಗಪ್ಪ, ನವೀನ್, ಬಿ.ವೀರಣ್ಣ, ತಿಮ್ಮಣ್ಣ, ಹನುಮಂತಪ್ಪ, ಚೌಡಪ್ಪ, ನಾಗರಾಜ್ ಕಾರಿಗನೂರು, ಜಯಣ್ಣ, ರಾಘವೇಂದ್ರ ಎಸ್.ಪಾಟೀಲ್, ಪ್ರವೀಣ್ ಶ್ಯಾಮನೂರು ಇತರರು ಉಪಸ್ಥಿತರಿದ್ದರು.

### ಐಎಎಸ್ ಪದವಿ ಪಡೆದಿರುವ ಎಂ.ಎಸ್, ದಿವಾಕರ್ ಮತ್ತು ಜಿ.ಆರ್. ಅಜ್ಜಯ್ಯ ಅವರುಗಳಿಗೆ

# ಗಂಗನಕಟ್ಟೆಯಲ್ಲಿ ನಾಳೆ ಅಭಿನಂದನಾ ಸಮಾರಂಭ

ದಾವಣಗೆರೆ, ಜು.8 - ತಾಲ್ಲೂಕಿನ ಗಂಗನಕಟ್ಟೆ ಗ್ರಾಮದಲ್ಲಿ ನಾಡಿದ್ದು ದಿನಾಂಕ 10ರ ಭಾನುವಾರ ಬೆಳಿಗ್ಗೆ 11 ಗಂಟೆಗೆ ಸರ್ಕಾರಿ ಶಾಲಾ ಆವರಣದಲ್ಲಿ ನೂತನವಾಗಿ ಐ.ಎ.ಎಸ್. ಪದವಿ ಪಡೆದಿರುವ ಎಂ.ಎಸ್. ದಿವಾಕರ್ ಹಾಗೂ ಕಳೆದ 6 ವರ್ಷಗಳಿಂದ ಅರಣ್ಯಾಧಿಕಾರಿಯಾಗಿ ಸೇವೆ ಸಲ್ಲಿಸುತ್ತಿರುವ ಐ.ಎಫ್.ಎಸ್. ಪದವಿ ಪುರಸ್ಕೃತ ಜಿ.ಆರ್. ಅಜ್ಜಯ್ಯನವರಿಗೆ ಗ್ರಾಮಸ್ಥರಿಂದ ಅಭಿನಂದನಾ ಸಮಾರಂಭವನ್ನು ಏರ್ಪಡಿಸಲಾಗಿದೆ. ಇದೇ ಸಂದರ್ಭದಲ್ಲಿ ಶ್ರೀ ಈಶ್ವರ ದೇವಸ್ಥಾನದ ಜೀರ್ಣೋದ್ಧಾರ, ಶಿಲಾನ್ಯಾಸ ಕಾರ್ಯಕ್ರಮವನ್ನೂ ಹಮ್ಮಿಕೊಳ್ಳಲಾಗಿದೆ.

ವಿವಿಧ ಇಲಾಖೆಗಳ ಹದಿನೈದು ಅಧಿಕಾರಿಗಳನ್ನು ಗುರುತಿಸಿ ಯುಪಿಎಸ್‌ಸಿ ಪರೀಕ್ಷೆಗೆ ಕಳುಹಿಸಲಾಗಿತ್ತು. ಈ ಪರೀಕ್ಷೆಯಲ್ಲಿ ಪಾಸಾದವರಲ್ಲಿ 1:5 ಅನುಪಾತದಲ್ಲಿ ಐ.ಎ.ಎಸ್. ಪದವಿ ನೀಡಿ ಆಯ್ಕೆ ಮಾಡಲಾಗುತ್ತದೆ. ಹಾಗೆ ಯುಪಿಎಸ್‌ಸಿ ಪರೀಕ್ಷೆ ಎದುರಿಸಿ ಐ.ಎ.ಎಸ್ ಪದವಿ ಪಡೆದುಕೊಂಡವರು ಈಗಾಗಲೇ ರಾಜ್ಯ ಸರ್ಕಾರದ ಕೃಷಿ ಇಲಾಖೆಯಲ್ಲಿ ಜಂಟಿ ಕೃಷಿ





ನಿರ್ದೇಶಕರಾಗಿದ್ದ ಎಂ.ಎಸ್. ದಿವಾಕರ್ ಅವರು ಕೃಷಿಗೆ ಸಂಬಂಧಪಟ್ಟ ವೈಜ್ಞಾನಿಕ ಅನ್ವೇಷಣೆಯಲ್ಲಿ ತೊಡಗಿಕೊಂಡು 'ಕೆ.ಕಿಸಾನ್' ಎಂಬ ದೇಶದ ಮೊದಲ ಕೃಷಿ ಆ್ಯಪ್ ಸಿದ್ಧಪಡಿಸಿ ರಾಜ್ಯ ಸರ್ಕಾರ ಹಾಗೂ ಕೇಂದ್ರ ಸರ್ಕಾರದ ಮೆಚ್ಚುಗೆ ಗಳಿಸಿದ್ದರು ಎಂಬುದು ವಿಶೇಷ.

ಇನ್ನು ಮಾಸ್ಟರ್ ಆಫ್ ವೆಟರ್ನರಿ ಸೈನ್ಸ್ ಪದವಿಯೊಂದಿಗೆ ರಾಜ್ಯ ಸರ್ಕಾರದ ಸರ್ಕಾರಿ ಆಸ್ಪತ್ರೆಯಲ್ಲಿ ಪಶುವೈದ್ಯರಾಗಿದ್ದುಕೊಂಡೇ ಯುಪಿಎಸ್‌ಸಿ ಪರೀಕ್ಷೆ ಬರೆದು 2016 ರಲ್ಲಿ ಐ.ಎಫ್.ಎಸ್. ಪದವಿ ಪಡೆದುಕೊಂಡಿರುವ ಜಿ. ಆರ್. ಅಜ್ಜಯ್ಯ ಅವರು ಪ್ರಸ್ತುತ ಶಿರಸಿಯಲ್ಲಿ ಜಿಲ್ಲಾ ಅರಣ್ಯ ಸಂರಕ್ಷಣಾಧಿಕಾರಿಯಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ.

ಈ ಹಿನ್ನೆಲೆಯಲ್ಲಿ ಈರ್ವರಿಗೂ ಗಂಗನಕಟ್ಟೆ ಗ್ರಾಮದಲ್ಲಿ ಅಭಿನಂದನಾ ಸಮಾರಂಭವನ್ನು ಏರ್ಪಡಿಸಲಾಗಿದೆ.

ಕಾರ್ಯಕ್ರಮದ ಸಾನ್ನಿಧ್ಯವನ್ನು ಸಿರಿಗೆರೆ ಬೃಹನ್ಮಠದ ಜಗದ್ಗುರು ಡಾ. ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮೀಜಿ ವಹಿಸಲಿದ್ದು, ಉದ್ಘಾಟನೆಯನ್ನು ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ನೆರವೇರಿಸಲಿದ್ದಾರೆ. ನೇರ್ಲಿಗೆ ಗ್ರಾಮ ಪಂಚಾಯ್ತಿ ಅಧ್ಯಕ್ಷರಾದ ಸುಮಂಗಳಮ್ಮ ಮಲ್ಲಿಕಾರ್ಜುನ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿದ್ದಾರೆ.

ಮುಖ್ಯ ಅತಿಥಿಗಳಾಗಿ 'ಜನತಾವಾಣಿ' ಸಂಪಾದಕ ಎಂ.ಎಸ್.ವಿಕಾಸ್, ಜಿಲ್ಲಾ ಕಸಾಪ ಅಧ್ಯಕ್ಷ ಬಿ. ವಾಮದೇವಪ್ಪ, ಲೇಖಕ, ಹಿರಿಯ ಪತ್ರಕರ್ತ ಬಾ.ಮ.ಬಸವರಾಜಯ್ಯ, ಗ್ರಾಮದ ಹಿರಿಯ ಮುಖಂಡರುಗಳಾದ ಜಿ.ಎನ್. ಸಂಗಪ್ಪ ಮತ್ತು ಜಿ.ಡಿ. ಶರಣಪ್ಪ ಪಾಲ್ಗೊಳ್ಳಲಿದ್ದಾರೆ.

# ರಿಪಬ್ಲಿಕನ್ ಪಾರ್ಟಿ ಆಫ್ ಇಂಡಿಯಾ ರಾಜಕೀಯ ಚಳುವಳಿಯ ಪಕ್ಷ

## ಪಕ್ಷದ ಜಿಲ್ಲಾ ಪದಾಧಿಕಾರಿಗಳ ಪ್ರಥಮ ಸಮಾವೇಶ

ದಾವಣಗೆರೆ, ಜು.8- ರಿಪಬ್ಲಿಕನ್ ಪಾರ್ಟಿ ಆಫ್ ಇಂಡಿಯಾ ಪಕ್ಷವು ವೃತ್ತಿ ಪರವಾದ ರಾಜಕೀಯ ಪಕ್ಷವಲ್ಲ. ರಾಜಕೀಯ ಚಳುವಳಿಗಾಗಿ ಬಂದ ಪಕ್ಷ. ಜನಪರ ಆಡಳಿತ ನೀಡುವ ಆಶಯವನ್ನು ಹೊಂದಿದೆ ಎಂದು ರಾಜ್ಯಾಧ್ಯಕ್ಷ ಡಾ. ಎಂ. ವೆಂಕಟಸ್ವಾಮಿ ತಿಳಿಸಿದರು.

ನಗರದ ಭಗತ್ ಸಿಂಗ್ ನಗರ ರಸ್ತೆಯಲ್ಲಿನ ಎಸ್ ಜೆಎಂ ಎಂಟರ್ ಪ್ರೈಸಸ್ ಸಭಾಂಗಣದಲ್ಲಿ ನಿನ್ನೆ ಏರ್ಪಾಡಾಗಿದ್ದ ರಿಪಬ್ಲಿಕನ್ ಪಾರ್ಟಿ ಆಫ್ ಇಂಡಿಯಾ ಪಕ್ಷದ ಜಿಲ್ಲಾ ಪದಾಧಿಕಾರಿಗಳ ಪ್ರಥಮ ಸಮಾವೇಶವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಪ್ರಸ್ತುತ ದೇಶ, ರಾಜ್ಯದಲ್ಲಿ ಜಾತಿ, ಧರ್ಮದ ಆಧಾರದ ಮೇಲೆ ಜನರಿಂದ ಅಧಿಕಾರಕ್ಕೆ ಬರುವ ಪಕ್ಷಗಳು, ಕುಟುಂಬ ರಾಜಕಾರಣ ಮಾಡುತ್ತಾ ಭ್ರಷ್ಟಾಚಾರ ಮಾಡುವ ಮೂಲಕ ಸಂವಿಧಾನದ ಆಶೋತ್ತರಗಳ ಹಾಗೂ ಜನರ ವಿರುದ್ಧವಾಗಿ ಆಡಳಿತವನ್ನು ನಡೆಸುತ್ತಿವೆ. ಅದಕ್ಕೆ ಪರ್ಯಾಯವಾಗಿ ಈ ಪಕ್ಷ ಬೆಳೆಯಬೇಕಿದೆ. ನಮ್ಮ ಪಕ್ಷ ಅಧಿಕಾರಕ್ಕೆ ಬಂದರೆ ಸಂವಿಧಾನದ ಆಶಯಗಳಂತೆ ಆಡಳಿತ ನಡೆಸಲಿದೆ ಎಂದು ಹೇಳಿದರು. ದಾವಣಗೆರೆಯು ಕಾರ್ಮಿಕರ ಚಳುವಳಿಗೆ ಹೆಸರಾಗಿತ್ತು. ಆದರೆ ದಾವಣಗೆರೆ ಜಿಲ್ಲೆ ಆದಾಗಿನಿಂದ ಕಾರ್ಮಿಕ, ರೈತ ಚಳುವಳಿಗಳು ಹಾಗೂ ಮಹಿಳಾ ಹೋರಾಟಗಳಲ್ಲಿ ಹಿನ್ನಡೆ ಕಾಣುತ್ತಿದೆ. ಜಿಲ್ಲೆಯ ಇಂತಹ ಹೋರಾಟಗಳಲ್ಲಿ ಮುನ್ನಡೆ ಸಾಧಿಸುವ ಗುರಿ ನಮ್ಮ ಪಕ್ಷ ಹೊಂದಿದೆ ಎಂದರು.

ಪಕ್ಷದ ಮುಖಂಡ ವೆಂಕಟರಮಣಪ್ಪ ಮಾತನಾಡಿ, ದೇಶದಲ್ಲಿ ಅಂಬೇಡ್ಕರ್ ಅವರ ವಿಚಾರಗಳಡಿ ಹೋರಾಟ ನಡೆಸುತ್ತಿರುವ ಪಕ್ಷವೆಂದರೆ ಅದು ನಮ್ಮ ಪಕ್ಷ. ಸಂವಿಧಾನದ ಪ್ರಸ್ತಾವನೆಯ ಸ್ಫೂರ್ತಿಯಾಗಿ ಈ ಪಕ್ಷ ಪ್ರಣಾಳಿಕೆಯನ್ನು ಹೊಂದಿದೆ ಎಂದರು.

ಸಮಾವೇಶದಲ್ಲಿ ಜಿಲ್ಲಾ ಸಮಿತಿಯ ಅಧ್ಯಕ್ಷ ಎನ್. ಅಜ್ಜಪ್ಪ, ಎನ್. ಸಂತೋಷ್, ವಿನಯ್, ವಿನೋದ್ ಛಾಪು ಸೇರಿದಂತೆ ಇತರರು ಇದ್ದರು.

# ದಾಸ ಶ್ರೇಷ್ಠ ಕನಕ ವೃತ್ತದಲ್ಲಿನ ನಾಮಫಲಕ ಧ್ವಂಸ ಸಮಾಜದ ಮುಖಂಡರಿಂದ ಪ್ರತಿಭಟನೆ

ಹೊನ್ನಾಳಿ, ಜು.8 - ಹೊನ್ನಾಳಿ ಪಟ್ಟಣದ ದೇವನಾಯ್ಕನಹಳ್ಳಿ ಕನಕದಾಸ ವೃತ್ತದ ಬಳಿ ಇದ್ದ ದಾಸ ಶ್ರೇಷ್ಠ ಕನಕದಾಸರ ಹೆಸರಿನ ನಾಮಫಲಕವನ್ನು ಗುರುವಾರ ತಡರಾತ್ರಿ ಯಾರೋ ಕಿಡಿಗೇಡಿಗಳು



ಧ್ವಂಸಗೊಳಿಸಿದ್ದು, ಇದನ್ನು ಖಂಡಿಸಿ ಶುಕ್ರವಾರ ಹಾಲುಮತ ಮಹಾ ಸಭಾ ಮತ್ತು ಕುರುಬ ಸಮಾಜದ ಹಿರಿಯ ಮುಖಂಡರು ಕನಕದಾಸ ವೃತ್ತದಲ್ಲಿ ರಸ್ತೆ ತಡೆ ಮತ್ತು ಪ್ರತಿಭಟನೆ ನಡೆಸಿ ಧ್ವಂಸಗೊಳಿಸಿದವರನ್ನು ಬಂಧಿಸಿ, ಕೂಡಲೇ ನಾಮಫಲಕವನ್ನು ಪುನರ್ನಿಮಿಸಿ ಕೊಡಬೇಕೆಂದು ಒತ್ತಾಯಿಸಿ ತಹಶೀಲ್ದಾರ್ ಎಚ್. ಜಿ. ರಶ್ಮಿ ಅವರಿಗೆ ಮನವಿ ಪತ್ರ ಸಲ್ಲಿಸಿದರು.

ಮನವಿ ಪತ್ರ ಸ್ವೀಕರಿಸಿ ಮಾತನಾಡಿದ ತಹಶೀಲ್ದಾರ್ ರಶ್ಮಿ, ಈ ನಾಮಫಲಕವನ್ನು ಲೋಕೋಪಯೋಗಿ ಇಲಾಖೆ ಅಥವಾ ಪುರಸಭೆ ಅಧಿಕಾರಿಗಳ ಮೂಲಕ ಪುನರ್ನಿಮಿಸಿ ಕೊಡುವ ವ್ಯವಸ್ಥೆ ಮಾಡಲಾಗುವುದು ಹಾಗೂ ಈ ನಾಮಫಲಕವನ್ನು ಧ್ವಂಸಗೊಳಿಸಿರುವ ಬಗ್ಗೆ ಕೂಡ ಸ್ಥಳೀಯ ಪೊಲೀಸರು ತನಿಖೆ ನಡೆಸಿ ಕ್ರಮಕೈಗೊಳ್ಳುವರು ಎಂದು ಮುಖಂಡರಿಗೆ ಭರವಸೆ ನೀಡಿದರು.

ಸರ್ಕಲ್ ಇನ್ಸ್‌ಸ್ಪೆಕ್ಟರ್ ದೇವರಾಜ್, ಪಿ.ಎಸ್.ಐ. ಬಸವರಾಜ್ ಹಾಗೂ ಪೊಲೀಸ್ ಸಿಬ್ಬಂದಿಗಳು ಸೂಕ್ತ ಬಂದೋಬಸ್ತ್ ವ್ಯವಸ್ಥೆ ಮಾಡಿದರು.

ಹಾಲು ಮತ ಮಹಾ ಸಭಾದ ಅಧ್ಯಕ್ಷ ರಾಜು ಕಡೂಣ್ಣರ, ಜಿ.ಪಂ. ಮಾಜಿ ಸದಸ್ಯ ಎಂ.ಆರ್. ಮಹೇಶ್, ಪುರಸಭೆ ಅಧ್ಯಕ್ಷ ಟಿ.ಎಚ್.ರಂಗನಾಥ್, ಕುರುಬ ಸಮಾಜದ ಹಿರಿಯ ಮುಖಂಡರಾದ ಬಿ. ಸಿದ್ದಪ್ಪ, ಎಚ್.ಎ. ಉಮಾಪತಿ, ಗಾಳಿ ನಾಗರಾಜ್, ಕರವೇ ವಿನಯ್ ವಗ್ಗರ್, ಆಮ್ ಆದ್ಮಿ ಪಕ್ಷದ ಅಧ್ಯಕ್ಷ ಗುರುಪಾದಯ್ಯ ಮಠದ್, ಕಾರ್ಯದರ್ಶಿ ಎಸ್. ಶ್ರೀನಿವಾಸ್, ಪುರಸಭೆ ಸದಸ್ಯ ಎಂ. ಸುರೇಶ್, ಎಚ್.ಎಸ್.ರಂಜಿತ್, ದೊಡ್ಡೇಶ್, ಮನು ವಾಲಜ್ಜಿ, ಪ್ರದೀಪ್ ಮಾರಗೊಂಡನಹಳ್ಳಿ, ಕರವೇ ಗ್ರಾಮ ಘಟಕದ ಅಧ್ಯಕ್ಷ ದಯಾನಂದ್ ಮತ್ತಿತರರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

# ಜಿಎಂಐಟಿಯಲ್ಲಿ ವಿಟಿಯು ಅಂತರ ವಲಯ ಪುರುಷರ ಕೋ ಕೋ ಪಂದ್ಯ




ದಾವಣಗೆರೆ, ಜು. 8- ನಗರದ ಜಿಎಂ ತಾಂತ್ರಿಕ ಮಹಾವಿದ್ಯಾಲಯದಲ್ಲಿ ವಿಟಿಯು ಅಂತರ ವಲಯ ಪುರುಷರ ಕೋ ಕೋ ಪಂದ್ಯಾವಳಿಗಳನ್ನು ಜಿಎಂಐಟಿ ಕಾಲೇಜಿನ ಪ್ರಾಂಶುಪಾಲ ಡಾ. ವೈ. ವಿಜಯಕುಮಾರ್ ಉದ್ಘಾಟಿಸಿದರು.

ಆಚಾರ್ಯ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಬೆಂಗಳೂರು (ಪ್ರಥಮ), ಬಿಎಂಎಸ್ ಕಾಲೇಜ್ ಆಫ್ ಇಂಜಿನಿಯರಿಂಗ್ ಬೆಂಗಳೂರು (ದ್ವಿತೀಯ) ಮತ್ತು ಎಸ್‌ಐಟಿ ತುಮಕೂರು (ತೃತೀಯ) ಬಹುಮಾನ ಪಡೆದುಕೊಂಡವು.

ಕಾರ್ಯಕ್ರಮದಲ್ಲಿ ದೈಹಿಕ ಶಿಕ್ಷಣಾಧಿಕಾರಿ ಅಜ್ಜಯ್ಯ ಜಿ.ಬಿ., ಕ್ರೀಡಾ ಸಂಯೋಜಕ ಡಾ. ಕಿರಣ್ ಕುಮಾರ್ ಎಚ್.ಎಸ್., ತರಬೇತಿ ಮತ್ತು ಉದ್ಯೋಗ ಅಧಿಕಾರಿ ತೇಜಸ್ವಿ ಕಟ್ಟಿಮನಿ ಟಿ.ಆರ್., ಎನ್‌ಎಸ್‌ಎಸ್ ಸಂಯೋಜಕ ಡಾ. ಓಂಕಾರಪ್ಪ ಎಚ್.ಎಸ್ ಉಪಸ್ಥಿತರಿದ್ದರು.

# ಉಕ್ಕಡಗಾತ್ರಿಗೆ ತಹಶೀಲ್ದಾರ್ ಭೇಟಿ



ಮಲೇಬೆನ್ನೂರು, ಜು.8- ಮಲೆನಾಡಿನಲ್ಲಿ ಭಾರೀ ಮಳೆಯಾಗುತ್ತಿರುವುದರಿಂದ ತುಂಗಭದ್ರಾ ನದಿಯಲ್ಲಿ ನೀರಿನ ಮಟ್ಟ ಏರಿಕೆಯಾಗಿ ಉಕ್ಕಡಗಾತ್ರಿ-ಪತ್ತೇಪುರ ರಸ್ತೆ ಸಂಪರ್ಕ ಬಂದ್ ಆಗಿರುವ ಸ್ಥಳವನ್ನು ಶುಕ್ರವಾರ ತಹಶೀಲ್ದಾರ್ ಡಾ. ಬಿ.ಎಂ. ಅಶ್ವತ್ಥ್ ಪರಿಶೀಲಿಸಿದರು.

ಪ್ರತಿ ವರ್ಷ ಮಳೆಗಾಲದಲ್ಲಿ ತುಂಗಭದ್ರಾ ನದಿ ಹಿನ್ನೀರಿನಲ್ಲಿ ಉಕ್ಕಡಗಾತ್ರಿ-ಪತ್ತೇಪುರ ಸಂಪರ್ಕ ಸೇತುವೆ ಮುಳುಗಡೆ ಆಗುತ್ತಿದೆ. ಇದರಿಂದ ಪ್ರಯಾಣಿಕರಿಗೆ ತುಂಬಾ ತೊಂದರೆ ಆಗುತ್ತಿದೆ ಎಂಬುದನ್ನು ಶ್ರೀ ಗುರು ಕರಿಬಸವೇಶ್ವರ ಗದ್ದುಗೆ ಟ್ರಸ್ಟ್ ಕಮಿಟಿ ಕಾರ್ಯದರ್ಶಿ ಸುರೇಶ್ ಹಾಗೂ ಗ್ರಾಮಸ್ಥರು ತಹಶೀಲ್ದಾರ್ ಅವರಿಗೆ ಮನವರಿಕೆ ಮಾಡಿಕೊಟ್ಟರು.

ನಂತರ ತಹಶೀಲ್ದಾರ್ ಅವರು ನದಿ ನೀರಿನಲ್ಲಿ ದೇವಸ್ಥಾನದ ಸ್ನಾನಘಟ್ಟ ಮತ್ತು ದೇವಸ್ಥಾನದ ಕೆಳಗಡೆ ಇದ್ದ ಅಂಗಡಿಗಳು ಮುಳುಗಿರುವುದನ್ನು ವೀಕ್ಷಿಸಿದರು. ಪಿಎಸ್‌ಐ ರವಿಕುಮಾರ್, ಕಂದಾಯ ನಿರೀಕ್ಷಕ ಆನಂದ್, ಗ್ರಾಮ ಲೆಕ್ಕಾಧಿಕಾರಿ ಆನಂದತೀರ್ಥ, ಗ್ರಾ.ಪಂ. ಪಿಡಿಓ ಈರಣ್ಣ ಈ ವೇಳೆ ಹಾಜರಿದ್ದರು.

# ಹರಿಹರ : ಸರ್ಕಾರಿ ಪದವಿ ಕಾಲೇಜು ಸ್ನಾತಕ ಪದವಿ ಪ್ರವೇಶಾತಿ ಆರಂಭ

ದಾವಣಗೆರೆ, ಜು.8- ಹರಿಹರ ಸರ್ಕಾರಿ ಪದವಿ ಕಾಲೇಜಿನಲ್ಲಿ 2022-23 ನೇ ಶೈಕ್ಷಣಿಕ ಸಾಲಿನ ಸ್ನಾತಕ ಪದವಿ ಕೋರ್ಸ್‌ಗಳಾದ ಬಿ.ಎ, ಬಿ.ಎಸ್ಸಿ, ಬಿ.ಕಾಂ ಹಾಗೂ ಬಿ.ಬಿ.ಎ ಪ್ರವೇಶಾತಿಗಾಗಿ ಪಿ.ಯು.ಸಿ ಪೂರ್ಣಗೊಳಿಸಿದ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ವಿವರಗಳಿಗೆ ದೂರವಾಣಿ ಸಂಖ್ಯೆ: 7892418329, 948208877, 9844425125 ಹಾಗೂ 9686341400 ಇಲ್ಲಿಗೆ ಕರೆ ಮಾಡಿ ಮಾಹಿತಿ ಪಡೆಯಬಹುದಾಗಿದೆ.

# ಪ್ರಧಾನಮಂತ್ರಿ ಶಿಶಿಕ್ಷು ಮೇಳ

ದಾವಣಗೆರೆ, ಜು. 8- ಡಿಜಿಇಟಿ ನವದೆಹಲಿ ಇವರು ದಾವಣಗೆರೆ ಜಿಲ್ಲೆಯಲ್ಲಿ ತರಬೇತುದಾರರಿಗೆ ಅನುಕೂಲವಾಗುವಂತೆ ಎಟಿಎಸ್ ಮೇಳವನ್ನು ಇದೇ ದಿನಾಂಕ 12 ರಂದು ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಯಲ್ಲಿ ಇಲ್ಲಿ ಪ್ರಧಾನಮಂತ್ರಿ ಶಿಶಿಕ್ಷು ಮೇಳವನ್ನು ಆಯೋಜಿಸಿರುತ್ತಾರೆ.

ಐಟಿಐ ಪಾಸಾದ ಅಥವಾ ಅಂತಿಮ ವರ್ಷದಲ್ಲಿ ವ್ಯಾಸಂಗ ಮಾಡುತ್ತಿರುವ ಎಲ್ಲಾ ತರಬೇತಿದಾರರಿಗೆ ಈ ಮೇಳದಲ್ಲಿ ಭಾಗವಹಿಸಬಹುದೆಂದು ಸರ್ಕಾರಿ ತರಬೇತಿ ಮತ್ತು ಉದ್ಯೋಗ ಇಲಾಖೆಯ ಪ್ರಾಚಾರ್ಯರು ತಿಳಿಸಿದ್ದಾರೆ.

# ಜಿ.ಟಿ.ಟಿ.ಸಿ. ನೇರ ಸಂದರ್ಶನ

ದಾವಣಗೆರೆ, ಜು. 8- ಸರ್ಕಾರಿ ಉಪಕರಣಾಗಾರ ಮತ್ತು ತರಬೇತಿ ಕೇಂದ್ರ ಹಾಗೂ ಟಯೋಟಾ ಕಿರ್ಲೋಸ್ಕರ್ ಮೋಟಾರ್ಸ್ ಸಹಭಾಗಿತ್ವದಲ್ಲಿ (ಬೆಂಗಳೂರು) ಟಯೋಟ ಕಾರು ಉತ್ಪಾದನಾ ಘಟಕ ಕಂಪನಿಯಲ್ಲಿ ಆಟೋಮ್ಯಾಟಿಕ್ ಸ್ಕಿಲ್ ಡೆವಲಪ್‌ಮೆಂಟ್ ಕೌನ್ಸಿಲ್ ವತಿಯಿಂದ ಉಚಿತವಾಗಿ ತರಬೇತಿ ನೀಡಲಾಗುತ್ತದೆ. ಎಸ್.ಎಸ್.ಎಲ್.ಸಿ ಪಾಸ್ ಹಾಗೂ ಪಿಯುಸಿ, ಐಟಿಐ, ಡಿಪ್ಲೋಮಾ ಪಾಸ್/ಫೇಲ್ ಆದ 18 ರಿಂದ 23 ವರ್ಷದೊಳಗಿನ ಆಸಕ್ತಿಯುಳ್ಳ ಅಭ್ಯರ್ಥಿಗಳು ನೇರ ಸಂದರ್ಶನಕ್ಕೆ ಇದೇ ದಿನಾಂಕ 12 ರಂದು ಹರಿಹರದ ಜಿ.ಟಿ.ಟಿ.ಸಿ ಕೇಂದ್ರಕ್ಕೆ ಭೇಟಿ ನೀಡಬಹುದು. ವಿವರಗಳಿಗಾಗಿ ಸರ್ಕಾರಿ ಉಪಕರಣಾಗಾರ ಮತ್ತು ತರಬೇತಿ ಕೇಂದ್ರ, 22 ಸಿ ಮತ್ತು ಡಿ, ಕೆ.ಐ.ಎ.ಡಿ.ಬಿ, ಇಂಡಸ್ಟ್ರಿಯಲ್ ಏರಿಯ ಹರ್ಲಾಪುರ, ಕೆ.ಎಸ್.ಆರ್.ಟಿ.ಸಿ ಡಿಪೋ ಹತ್ತಿರ ಹರಿಹರ. 99160 18111, 88844 88202, 87119 13947 ಈ ಸಂಖ್ಯೆಗಳಿಗೆ ಸಂಪರ್ಕಿಸಬಹುದಾಗಿದೆ.

# ರಾಣೇಬೆನ್ನೂರಿನಲ್ಲಿ ಇಂದು ಉಪನ್ಯಾಸ

ಉತ್ತಮ ಬದುಕು ರೂಪಿಸಿಕೊಳ್ಳಲು ಪಿಯುಸಿ ನಂತರ ವಿದ್ಯಾರ್ಥಿಗಳು ಏನು ಓದಬೇಕು, ಯಾವ ಓದಿನಿಂದ ಏನು ಸಾಧಿಸಬಹುದು ಮುಂತಾದವುಗಳ ಬಗ್ಗೆ ತಿಳುವಳಿಕೆ ಕೊಡಲು ಪ್ರಕಾಶ್ ಕೋಳಿವಾಡರ ಪಿಕೆಕೆ ಇನಿಷಿಯೇಟಿವ್ ಇಂದು ಬೆಳಿಗ್ಗೆ ಬಳ್ಳಾರಿ ಕಲ್ಯಾಣ ಮಂಟಪದಲ್ಲಿ ಕಾರ್ಯಕ್ರಮ ಏರ್ಪಡಿಸಿದೆ.

ಚಿತ್ರ ನಟ, ಅನಿಮೇಷನ್ ಪರಿಣಿತ ಮಾಸ್ಟರ್ ಕಿಶನ್, ಕೃಷಿ ಕೋಳಿವಾಡ, ದಾವಣಗೆರೆ ಆಕಾಶ ಎಜುಕೇಶನ್‌ನ ಎಂ. ಕಿಶೋರ್, ತೆರಿಗೆ ಇಲಾಖೆ ನಿವೃತ್ತ ಅಧಿಕಾರಿ ಶ್ರೀ ಕಾಂತ ಸಾಗರ ಹಿರೇಮಠ, ರೇವು ಸಹಾಯಕ ಪ್ರಾಧ್ಯಾಪಕ ರಘುನಂದನ್ ಮುಂತಾದ ಸಂಪನ್ಮೂಲ ವ್ಯಕ್ತಿಗಳು ಈ ಕಾರ್ಯಕ್ರಮದಲ್ಲಿ ಭಾಗವಹಿಸುವರು.

# ನಗರದಲ್ಲಿ ನಾಳೆ ಮಹಿಳೆಯರಿಗೆ ಉಚಿತ ಆರೋಗ್ಯ ತಪಾಸಣಾ ಶಿಬಿರ

ದಾವಣಗೆರೆ, ಜು.8- ಶ್ರೀ ಭಗವಾನ್ ಮಹಾವೀರ ಜೈನ್ ಆಸ್ಪತ್ರೆ (ಹಳೇ ಅಶ್ವಿನಿ ಆಸ್ಪತ್ರೆ)ಯಲ್ಲಿ ಮಹಿಳೆಯರಿಗೆ ಸ್ತ್ರೀರೋಗ ತಜ್ಞವೈದ್ಯರಿಂದ ಉಚಿತವಾಗಿ ತಪಾಸಣಾ ಶಿಬಿರವನ್ನು ನಾಡಿದ್ದು ದಿನಾಂಕ 10ರ ಭಾನುವಾರ ಬೆಳಿಗ್ಗೆ 9 ಗಂಟೆಯಿಂದ ಮಧ್ಯಾಹ್ನ 1.30 ಗಂಟೆಗೆ ನಡೆಯಲಿದೆ.

ವೈದ್ಯರ ಸಲಹೆ ಮೇರೆಗೆ ಉಚಿತವಾಗಿ ಸಾಮಾನ್ಯ ಸ್ತ್ರೀರೋಗ ಪರೀಕ್ಷೆ, ರಕ್ತ ಪರೀಕ್ಷೆ ಮತ್ತು ವಿಶೇಷವಾದ ಗರ್ಭಚೀಲದ ಬಾಯಿ ಸ್ರಾವ ಪರೀಕ್ಷೆ (PAP Smear Test) ಮಾಡಲಾಗುವುದು. ಇದರ ಜೊತೆಯಲ್ಲಿ ಉಚಿತವಾಗಿ ಔಷಧ ವಿತರಣೆ ಮಾಡಲಾಗುವುದು. ಷಾ ರಮಣಲಾಲ್‌ಜೀ ಓಟ್ಮಲ್‌ಜೀಯವರು ಶಿಬಿರದ ಪ್ರಯೋಜಕರಾಗಿದ್ದಾರೆ. ಉಚಿತವಾಗಿ ಸೌಲಭ್ಯ ಪಡೆಯುವವರು ಆಸ್ಪತ್ರೆ (96060 48423)ಯಲ್ಲಿ ನೊಂದಣಿ ಮಾಡಿಸಿಕೊಳ್ಳಬೇಕೆಂದು ಆಸ್ಪತ್ರೆಯ ಕಮಿಟಿ ಟ್ರಸ್ಟ್‌ನ ಅಧ್ಯಕ್ಷ ಸಂಘವಿ ಮಹಾವೀರ್ ಜೈನ್ ತಿಳಿಸಿದ್ದಾರೆ.

# ಭಾನುವಳ್ಳಿ : ಶಾಲೆ ಆವರಣದಲ್ಲಿ ನಾಟಿ ಮಾಡಿ ಪ್ರತಿಭಟನೆ



ಮಲೇಬೆನ್ನೂರು, ಜು.8- ಭಾನುವಳ್ಳಿ ಗ್ರಾಮದ ಕರ್ನಾಟಕ ಪಬ್ಲಿಕ್ ಶಾಲೆಯ ಮೈದಾನ ಕೆಸರು ಗದ್ದೆಯಂತಾಗಿದ್ದು, ಶುಕ್ರವಾರ ವಿದ್ಯಾರ್ಥಿಗಳ ಪೋಷಕರು, ಎಸ್‌ಡಿಎಂಸಿ ಪದಾಧಿಕಾರಿಗಳು, ಗ್ರಾಮಸ್ಥರು ನಾಟಿ ಮಾಡುವ ಮೂಲಕ ಪ್ರತಿಭಟನೆ ನಡೆಸಿದರು.

ಈ ಶಾಲೆಯಲ್ಲಿ 670 ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದು, ಮಳೆಗಾಲ ಬಂತೆಂದರೆ ಶಾಲೆಯ ವಿಶಾಲವಾದ ಆವರಣ ಕೆಸರು ಗದ್ದೆಯಾಗಿ ವಿದ್ಯಾರ್ಥಿಗಳು ಓಡಾಡಲು ಹೆಣಗಾಡುವ ಪರಿಸ್ಥಿತಿ ನಿರ್ಮಾಣವಾಗುತ್ತಿದೆ.

ಶಾಲೆ ಆವರಣವನ್ನು ಅಭಿವೃದ್ಧಿ ಪಡಿಸಿದರೆ ವಿದ್ಯಾರ್ಥಿಗಳ ಕ್ರೀಡಾಭ್ಯಾಸಕ್ಕೂ ಅನುಕೂಲವಾಗುತ್ತದೆ ಎಂದು ಸಂಬಂಧಪಟ್ಟವರಿಗೆ ತಿಳಿಸಿದ್ದರೂ ಇದುವರೆಗೂ ಯಾರೂ ಗಮನ ಹರಿಸಿಲ್ಲ.

ಶಾಸಕರು ಅಥವಾ ಸಂಸದರು ಈ ಬಗ್ಗೆ ಕೂಡಲೇ ಗಮನ ಹರಿಸಿ ಶಾಲೆಯ ಆವರಣವನ್ನು ಅಭಿವೃದ್ಧಿಪಡಿಸಬೇಕೆಂದು ರೈತ ಸಂಘದ ಅಧ್ಯಕ್ಷ ಕೆ.ಎಸ್. ರವೀಂದ್ರಕುಮಾರ್, ಎನ್. ಪ್ರಕಾಶ್, ಕೆ.ವಿ. ಜಗದೀಶ್, ಬಿ. ಶಾಂತಪ್ಪ, ರಾಜುಸ್ವಾಮಿ ಒತ್ತಾಯಿಸಿದ್ದಾರೆ.

# ಪ್ರೇರಣಾ ಸಂಸ್ಥೆಯಿಂದ ಇಂದು ಜಿಲ್ಲಾ ಮಟ್ಟದ ಪ್ರತಿಭಾ ಪುರಸ್ಕಾರ ಸಮಾರಂಭ

ಪ್ರೇರಣಾ ಸಾಂಸ್ಕೃತಿಕ ಸಂಸ್ಥೆ ವತಿಯಿಂದ ಇಂದು ಬೆಳಿಗ್ಗೆ 10.30 ಕ್ಕೆ ಚನ್ನಗಿರಿ ವಿರೂಪಾಕ್ಷಪ್ಪ ಧರ್ಮಶಾಲಾ ಸಭಾಂಗಣದಲ್ಲಿ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಅತಿ ಹೆಚ್ಚು ಅಂಕ ಗಳಿಸಿದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಜಿಲ್ಲಾ ಮಟ್ಟದ ಪ್ರತಿಭಾ ಪುರಸ್ಕಾರ ಸಮಾರಂಭ ಏರ್ಪಡಿಸಲಾಗಿದೆ ಎಂದು ಸಂಸ್ಥೆ ಪ್ರಧಾನ ಕಾರ್ಯದರ್ಶಿ ಆರ್.ಬಿ. ಶಿವಕುಮಾರ್ ತಿಳಿಸಿದ್ದಾರೆ.

ಶ್ರೀ ಬಸವಪ್ರಭು ಸ್ವಾಮೀಜಿ ಸಾನ್ನಿಧ್ಯ ವಹಿಸಲಿದ್ದಾರೆ. ಜಾನಪದ ಅಕಾಡೆಮಿ ಅಧ್ಯಕ್ಷರಾದ ಮಾತಾ ಮಂಜಮ್ಮ ಜೋಗತಿ ಕಾರ್ಯಕ್ರಮ ಉದ್ಘಾಟಿಸುವರು. ಪ್ರೇರಣಾ ಸಾಂಸ್ಕೃತಿಕ ಸಂಸ್ಥೆಯ ಸಂಸ್ಥಾಪಕರಾದ ಶ್ರೀಮತಿ ಚೇತನ ಶಿವಕುಮಾರ್ ಅಧ್ಯಕ್ಷತೆ ವಹಿಸಲಿದ್ದಾರೆ.

ಮುಖ್ಯ ಅತಿಥಿಗಳು : ಇಂದಿರಾ ರಾಮಚಂದ್ರಪ್ಪ, ಬಿ.ಜೆ. ಅಜಯ್‌ಕುಮಾರ್, ಶ್ರೀನಿವಾಸ ದಾಸಕರಿಯಪ್ಪ, ಲೋಕಿಕೆರೆ ನಾಗರಾಜ್, ಶ್ರೀಮತಿ ಚೌಬೆ ಎಂ.ಆರ್., ಎನ್. ಬಕ್ಕೇಶ್, ಕೆ. ಏಕಾಂತಪ್ಪ, ಗೌಡ್ರು ಚನ್ನಬಸಪ್ಪ, ದೇವರಮನೆ ಶಿವಕುಮಾರ್, ವಿಜಯಕುಮಾರ್, ಗಣೇಶ್‌ಶೆಣೈ, ಮಲ್ಲಾಡಿ ಪ್ರಭಾಕರ ಶೆಟ್ಟಿ, ಜಿ.ಎಚ್. ಮರಿಯೋಜಿರಾವ್, ಜಯಲಕ್ಷ್ಮಿ ಮಹೇಶ್, ಜಯಮ್ಮ ಶಿವಪ್ರಕಾಶ್, ಮಾಲತೇಶ್ ಜಾಧವ್, ವೆಂಕಟೇಶ್ ಕಾಟೆ, ವಾಸುದೇವ ರಾಯ್ಕರ್, ಜೆ.ಪಿ. ಮುಪ್ಪಣ್ಣ, ಅಕ್ಕಿ ಶಿವಣ್ಣ, ಮಹೇಶ್ ಆರ್., ವಕುಮಾರ್, ಬಾಡದ ಅನಂದರಾಜ್, ಶ್ರೀಮತಿ ದೇವೀರಮ್ಮ ರಾಮಚಂದ್ರಪ್ಪ, ಶ್ರೀಮತಿ ಅರುಣಬಾಬು.

# ನಗರದಲ್ಲಿ ಇಂದು ರೋಟರಿ ಅನುಸ್ಥಾಪನಾ ಸಮಾರಂಭ

ರೋಟರಿ ಕ್ಲಬ್ ದಾವಣಗೆರೆ ದಕ್ಷಿಣದ ಅನುಸ್ಥಾಪನಾ ಸಮಾರಂಭವು ಇಂದು ಸಂಜೆ 6 ಗಂಟೆಗೆ ರೋಟರಿ ಬಾಲ ಭವನದ ಸಿ. ಕೇಶವಮೂರ್ತಿ ಸಭಾಂಗಣದಲ್ಲಿ ನಡೆಯಲಿದೆ.

ರೋಟರಿ ಕ್ಲಬ್‌ನ ಜಿಲ್ಲಾ ಗವರ್ನರ್ ಮಾಣಿಕ್ ಪವಾರ್ ಕಾರ್ಯಕ್ರಮ ಉದ್ಘಾಟಿಸಲಿದ್ದು, ಆರ್‌ಸಿ ದಾವಣಗೆರೆ ದಕ್ಷಿಣ ಅಧ್ಯಕ್ಷ ರಂಗಪ್ಪ ಸಿ.ಕೆ. ಮತ್ತು ಪ್ರಧಾನ ಕಾರ್ಯದರ್ಶಿ ಎಂ.ಆರ್. ಪುಟ್ಟೇಶಿ ಅವರ ಗೌರವ ಉಪಸ್ಥಿತರಿರುವರು. ಮುಖ್ಯಅತಿಥಿಗಳಾಗಿ ಆರ್.ಎಸ್. ನಾರಾಯಣ ಸ್ವಾಮಿ, ನಯನ್ ಪಾಟೀಲ್, ಎನ್.ಬಿ. ಮೃತ್ಯುಂಜಯಪ್ಪ ಪಾಲ್ಗೊಳ್ಳಲಿದ್ದಾರೆ.

# ನಗರದಲ್ಲಿ ಇಂದು 'ಅರಿವಿನ ಗಾನ ಸುಧೆ'

ಡಾನ್ ಬಾಸ್ಕೋ ಬಾಲಕಾರ್ಮಿಕರ ಮಿಷನ್ ಆವರಣದಲ್ಲಿ ಇಂದು ಬೆಳಿಗ್ಗೆ 11 ಕ್ಕೆ 'ಕಾಮಿಡಿ ಕಿಲಾಡಿಗಳ ಆಗಮನ' ಅರಿವಿನ ಗಾನ ಸುಧೆ ಕಾರ್ಯಕ್ರಮ ಏರ್ಪಡಿಸಲಾಗಿದೆ.


ಉದ್ಘಾಟನೆ : ಟಿ. ಅಂಬಣ್ಣ ಕಾರ್ಯಕ್ರಮ. ಮುಖ್ಯ ಅತಿಥಿಗಳು : ಕೆ.ಎ. ಫುಸೀಹ್ ಉದ್ದೀನ್ ಶಾಕೀರ್, ನಾಗರಾಜ್, ಕೊಂಡಾರೆಡ್ಡಿ, ಫಾ. ರೆ ಜೇಕಬ್.

# ಪ್ರವಚನದಿಂದ ಮನುಷ್ಯನ ಮನಸ್ಸು ವಿಕಾಸ : ಬಸವಪ್ರಭು ಶ್ರೀ

ದಾವಣಗೆರೆ, ಜು.8- ಪ್ರವಚನವು ಮನುಷ್ಯನ ಮನಸ್ಸನ್ನು ವಿಕಾಸಗೊಳಿಸುತ್ತದೆ. ಇದರಲ್ಲಿ ಜ್ಞಾನದ ಬೆಳಕು ಇರುತ್ತದೆ. ಆ ಬೆಳಕು ಪ್ರತಿಯೊಬ್ಬರ ಬದುಕಿನಲ್ಲೂ ಜ್ಞಾನದ ಜ್ಯೋತಿಯನ್ನು ಹಚ್ಚುತ್ತದೆ ಎಂದು ವಿರಕ್ತಮಠದ ಶ್ರೀ ಬಸವಪ್ರಭು ಸ್ವಾಮೀಜಿ ಹೇಳಿದರು.

ನಗರದ ಶಿವಯೋಗಿ ಮಂದಿರದ ಒಳಾಂಗಣದಲ್ಲಿ ಜಯದೇವ ಜಗದ್ಗುರುಗಳ ಸ್ಮರಣೋತ್ಸವ, ಅಥಣಿ ಮುರುಘೇಂದ್ರ ಶಿವಯೋಗಿಗಳ ಲಿಂಗೈಕ್ಯ ಶತಮಾನೋತ್ಸವ, ಡಾ. ಶಿವಮೂರ್ತಿ ಮುರುಘಾ ಶರಣರ ಶೂನ್ಯ ಪೀಠಾರೋಹಣದ ತೃತೀಯ ದಶಮನೋತ್ಸವದ ಅಂಗವಾಗಿ ಇಂದು ಏರ್ಪಡಿಸಿದ್ದ ವಿಶೇಷ ಪ್ರವಚನ ಕಾರ್ಯಕ್ರಮದಲ್ಲಿ ಶ್ರೀಗಳು ಆಶೀರ್ವಚನ ನೀಡಿದರು.

ಯಾವಾಗ ಸುಜ್ಞಾನ ನಮ್ಮೊಳಗೆ ಪ್ರವೇಶ ಮಾಡುತ್ತದೆಯೋ ಆಗ ನಮ್ಮಲ್ಲಿರುವ ಅಹಂಕಾರ ನಿರ್ಗಮಿಸುತ್ತದೆ ಎಂದರು.



ಪ್ರವಚನ ಆಲಿಸುವುದರಿಂದ ಮನುಷ್ಯ ಅಜ್ಞಾನದಿಂದ ಜ್ಞಾನದ ಕಡೆಗೆ ಸಾಗುತ್ತಾನೆ. ಅಹಂಕಾರ, ಕೋಪ, ಮತ್ಸರಗಳು ವಿನಾಶವಾದ ಮೇಲೆ ವ್ಯಕ್ತಿಯಲ್ಲಿ ಸದ್ಗುಣಗಳು ಹೊರಹೊಮ್ಮುತ್ತವೆ ಎಂದು ಹೇಳಿದರು.

ಅಥಣಿಯ ಜನವಾಡದ ಶ್ರೀ ಮಲ್ಲಿಕಾರ್ಜುನ ಸ್ವಾಮೀಜಿ ಪ್ರವಚನ ನೀಡಿ, ಬಹುತೇಕರು ಕೇವಲ ಪೂಜೆ, ಪುನಸ್ಕಾರದಲ್ಲಿ ಇರುತ್ತಾರೆ. ಆದರೆ ಕಷ್ಟದಲ್ಲಿರುವ ಜನರ ನೆರವಿಗೆ ಧಾವಿಸುವುದಿಲ್ಲ. ಆದರೆ ಕಷ್ಟದಲ್ಲಿರುವ ಜನರಿಗೆ ಸಹಾಯ ಹಸ್ತ ಚಾಚುವುದೇ ನಿಜವಾದ ಮಾನವ ಧರ್ಮ ಎಂದರು.

ಬಡತನ ಬದುಕಿನ ಪರಮ ಗುರು. ಅದು ಜೀವನದಲ್ಲಿ ಹೇಗೆ ಜೀವಿಸಬೇಕೆಂಬುದನ್ನು ಕಲಿಸಿಕೊಡುತ್ತದೆ. ಕಷ್ಟದಲ್ಲಿರುವವರನ್ನು ಮುನ್ನಡೆಸುವವ ನಿಜ ದೇವರು ಎಂದು ಹೇಳಿದರು.

ಅನ್ನ ಮತ್ತು ಬಟ್ಟೆ ಮನುಷ್ಯರಿಗೆ ಅವಶ್ಯಕವಾಗಿ ಬೇಕಾಗಿರುವಂತಹವು. ಯಾರು ಕಷ್ಟದಲ್ಲಿರುವ ವ್ಯಕ್ತಿಗಳಿಗೆ ಇವುಗಳನ್ನು ದಾನ ಮಾಡುತ್ತಾರೋ ಅವರು ಸುಖ, ಶಾಂತಿ, ನೆಮ್ಮದಿಯಿಂದ ಬದುಕಲು ಸಾಧ್ಯವಿದೆ. ಅಂತಹ ದಾನಿಗಳಿಗೆ ಪುಣ್ಯ ಪ್ರಾಪ್ತಿಯಾಗಲಿದೆ ಎಂದರು.

ಹಾರ್ದಿಕ ಶುಭಾಶಯಗಳು





ಮಾನವ ಕಲ್ಯಾಣ ಹಾಗೂ
ಆತ್ಮಬಲ ವೃದ್ಧಿಯ ಸಂಕಲ್ಪದಲ್ಲಿ
ಶ್ರೀಮದ್ ರಂಭಾಪುರಿ ಜಗದ್ಗುರುಗಳು
ಹಾಗೂ ಶ್ರೀ ಕೇದಾರ ಜಗದ್ಗುರುಗಳ
ದಿವ್ಯ ಸಾನ್ನಿಧ್ಯದಲ್ಲಿ
ಪರಂಪರೆ ಪುನರ್ ಮನನ ಧರ್ಮ ಸಮಾರಂಭ
ದಿನಾಂಕ: 9.7.2022ನೇ ಶನಿವಾರ, ಸ್ಥಳ : ತ್ರಿಶೂಲ್ ಕಲಾ ಭವನ, ದಾವಣಗೆರೆ.
ಧರ್ಮಕಂಕಣ ಧಾರಣೆ: ಸಂಜೆ 5.00 ರಿಂದ
ಧ್ವಜ ಸಂಕಲ್ಪ: ಸಂಜೆ 5.30ಕ್ಕೆ
ಧ್ವಜಾರೋಹಣ: ಸಂಜೆ 5.50ಕ್ಕೆ
ಧರ್ಮಸಭೆ ಸಂಜೆ 6 ರಿಂದ
ಈ ಕಾರ್ಯಕ್ರಮಕ್ಕೆ ಹಾರ್ದಿಕ ಶುಭಾಶಯಗಳು
ಎಸ್.ಜಿ. ಉಳುವಯ್ಯ, ಎಸ್.ಯು. ಆಕಾಶ್
ಶ್ರೀ ಚನ್ನಬಸವೇಶ್ವರ ರೈಸ್ ಟೆಕ್, ಬಸಾಪುರ ರಸ್ತೆ, ದಾವಣಗೆರೆ.
♦ ಭುವನೇಶ್ವರಿ ಆಗ್ರೋ ಇಂಡಸ್ಟ್ರೀಸ್ ♦ ರಾಜು ಏಜೆನ್ಸೀಸ್ ♦ ಅಶ್ವಿನಿ ಅಂಡ್ ಕೋ ♦ ಸ್ವಾಮಿ ಎಂಟರ್‌ಪ್ರೈಸಸ್

# ಸಂತ ಪೌಲರ ವಿದ್ಯಾಸಂಸ್ಥೆಯ ಅಮೃತ ಮಹೋತ್ಸವ : 'ಆರೋಗ್ಯ ಹಬ್ಬ'



ದಾವಣಗೆರೆ, ಜು. 8 - ನಗರದ ಸಂತ ಪೌಲರ ವಿದ್ಯಾಸಂಸ್ಥೆಯು 75 ವರ್ಷ ಪೂರೈಸಿದ ಹಿನ್ನೆಲೆಯಲ್ಲಿ ಅಮೃತ ಮಹೋತ್ಸವದ ಅಂಗವಾಗಿ ಎಸ್.ಎಸ್.ಕೇರ್ ಟ್ರಸ್ಟ್, ಜೆ.ಜೆ.ಎಂ.ವೈದ್ಯಕೀಯ ಮಹಾವಿದ್ಯಾಲಯ - ಬಾಪೂಜಿ ಆಸ್ಪತ್ರೆ, ಎಸ್.ಎಸ್.ವೈದ್ಯಕೀಯ ಮಹಾ ವಿದ್ಯಾಲಯ - ಎಸ್ಸೆಸ್ ಆಸ್ಪತ್ರೆ, ಬಾಪೂಜಿ ಡೆಂಟಲ್ ಕಾಲೇಜು, ಕಾಲೇಜು ಆಫ್ ಡೆಂಟಲ್ ಸೈನ್ಸ್ ವತಿ ಯಿಂದ ಉಚಿತ ಆರೋಗ್ಯ ತಪಾಸಣಾ ಶಿಬಿರವನ್ನು ಸಂತ ಪೌಲರ ವಿದ್ಯಾಸಂಸ್ಥೆಯ ಆವರಣದಲ್ಲಿ ಇಂದು ನಡೆಸಲಾಯಿತು. ನಾಳೆ ಶನಿವಾರವೂ ಈ ಶಿಬಿರ ನಡೆಯಲಿದೆ.

ಈ ಶಿಬಿರಕ್ಕೆ ಬಾಪೂಜಿ ವಿದ್ಯಾಸಂಸ್ಥೆಯ ನಿರ್ದೇಶಕರಾದ ಶ್ರೀಮತಿ ಪ್ರಭಾ ಮಲ್ಲಿಕಾರ್ಜುನ್ ಅವರು ಚಾಲನೆ ನೀಡಿ ಮಾತನಾಡಿ, ಶಿಬಿರದಲ್ಲಿ ರಕ್ತ ತಪಾಸಣೆ, ಕಣ್ಣಿನ ತಪಾಸಣೆ, ಸ್ತನ ಆರೋಗ್ಯ ತಪಾಸಣೆ, ದಂತ ತಪಾಸಣೆ ಹಾಗೂ ಡಯಾಬಿಟಿಕ್ ನ್ಯೂರೋ ಥೆರಪಿ ಚಿಕಿತ್ಸೆ ಮಾಡಲಾಗುವುದು ಎಂದು ತಿಳಿಸಿದರು.

ಈಗಾಗಲೇ ದಾವಣಗೆರೆ ನಗರ ಮತ್ತು ಗ್ರಾಮಾಂತರ ಪ್ರದೇಶಗಳಲ್ಲಿ 50ಕ್ಕೂ ಹೆಚ್ಚು ಶಿಬಿರಗಳನ್ನು ನಡೆಸುವ ಮೂಲಕ ಆರೋಗ್ಯ ದಾವಣಗೆರೆ ಮಾಡಲಾಗಿದೆ. ಉಚಿತ ತಪಾಸಣೆ ಮತ್ತು ಚಿಕಿತ್ಸೆ ನೀಡುವುದರ ಜೊತೆಗೆ ಔಷಧೋಪಚಾರವನ್ನು ಉಚಿತವಾಗಿ ಒದಗಿಸಲಾಗಿದೆ ಎಂದು ಅವರು ವಿವರಿಸಿದರು.

ಸಂತಪೌಲರ ವಿದ್ಯಾಸಂಸ್ಥೆಯ ಹಳೇ ವಿದ್ಯಾರ್ಥಿಗಳ ಸಂಘದ ಅಧ್ಯಕ್ಷ ದಿನೇಶ್ ಕೆ.ಶೆಟ್ಟಿ ಅಧ್ಯಕ್ಷತೆಯಲ್ಲಿ ನಡೆದ ಈ ಶಿಬಿರದಲ್ಲಿ 300ಕ್ಕೂ ಹೆಚ್ಚು ಜನರನ್ನು ತಪಾಸಣೆಗೊಳಪಡಿಸಲಾಯಿತು. ಹೆಚ್ಚಿನ ಚಿಕಿತ್ಸೆಗೂ ಸಹ ಶಿಫಾರಸ್ಸು ಮಾಡಲಾಗಿದೆ.

ಜೆ.ಜೆ.ಎಂ.ವೈದ್ಯಕೀಯ ಮಹಾವಿದ್ಯಾಲಯದ ಪ್ರಾಂಶುಪಾಲ ಡಾ. ಎಸ್.ಬಿ.ಮುರುಗೇಶ್, ಬಾಪೂಜಿ ಆಸ್ಪತ್ರೆಯ ವೈದ್ಯಕೀಯ ನಿರ್ದೇಶಕ ಡಾ.ಕುಮಾರ್, ಎಸ್.ಎಸ್.ವೈದ್ಯಕೀಯ ಮಹಾವಿದ್ಯಾಲಯದ ವೈದ್ಯಕೀಯ ನಿರ್ದೇಶಕ ಡಾ.ಅರುಣಕುಮಾರ್, ಪ್ರಾಂಶುಪಾಲ ಡಾ. ಬಿ.ಎಸ್.ಪ್ರಸಾದ್, ಡಾ. ಲತಾ, ಡಾ. ಸುಶಾಂತ್, ಡಾ. ಪ್ರಶಾಂತ್, ವಿದ್ಯಾಸಂಸ್ಥೆಯ ಸಿಸ್ಟರ್ ಅಲ್ಬಿನಾ, ಸಿಸ್ಟರ್ ಮಾರ್ಜರಿ, ಸಿಸ್ಟರ್ ಸಮಂತಾ, ಶ್ರೀಮತಿ ಮೋನಿಕಾ, ರವೀಂದ್ರ ಸ್ವಾಮಿ ಶ್ರೀಮತಿ ಎನ್. ಕೆ.ಮಂಜುಳಾ, ಫಿಲೋಮಿನಾ ಮತ್ತಿತರರು ಶಿಬಿರದಲ್ಲಿ ಪಾಲ್ಗೊಂಡಿದ್ದರು.




# ಕೈಲಾಸ ಶಿವಗಣಾರಾಧನೆ

ಶ್ರೀ ಡಾ|| ಮಂಜುನಾಥ್ ಆಲೂರು ಮತ್ತು ಸಹೋದರಿಯರು
ತರಳಬಾಳು ಬಡಾವಣೆ, ದಾವಣಗೆರೆ.
ಇವರು ಮಾಡುವ ವಿಜ್ಞಾಪನೆಗಳು.

ಶರಣ ಬಂಧುಗಳೇ, ನಮ್ಮ ಪೂಜ್ಯ ಮಾತೃಶ್ರೀಯವರಾದ

**ಶ್ರೀಮತಿ ಸುನಂದಮ್ಮ ಚಂದ್ರಶೇಖರಪ್ಪ ಆಲೂರು**

ಜನನ : 1935 ಲಿಂಗೈಕ್ಯ : 2022

ಇವರು ದಿನಾಂಕ : 27.06.2022ನೇ ಸೋಮವಾರ ಮಧ್ಯಾಹ್ನ 1.35ಗಂಟೆಗೆ ಲಿಂಗೈಕ್ಯರಾಗಿರುತ್ತಾರೆ. ತತ್ಸಂಬಂಧವಾಗಿ "ಕೈಲಾಸ ಶಿವಗಣಾರಾಧನೆ"ಯನ್ನು ಪರಮಪೂಜ್ಯ ಶ್ರೀಮದ್ಉಜ್ಜಯನಿ ಸದ್ಧರ್ಮ ಸಿಂಹಾಸನಾಧೀಶ ಶ್ರೀ ತರಳಬಾಳು ಜಗದ್ಗುರು ಶ್ರೀ 1108 ಡಾ|| ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳವರು ಬೃಹನ್ಮಠ, ಸಿರಿಗೆರೆ. ಇವರ ದಿವ್ಯಸಾನಿಧ್ಯದಲ್ಲಿ ದಿನಾಂಕ : 09.07.2022ರ ಶನಿವಾರ ಬೆಳಿಗ್ಗೆ 11.00 ಗಂಟೆಗೆ ಶಾಮನೂರು ಶಿವಶಂಕರಪ್ಪ ಪಾರ್ವತಮ್ಮ ಕಲ್ಯಾಣ ಮಂಟಪ, ಹದಡಿ ರಸ್ತೆ, ದಾವಣಗೆರೆಯಲ್ಲಿ ಏರ್ಪಡಿಸಲಾಗಿದೆ. ತಾವುಗಳು ಆಗಮಿಸಿ ಲಿಂಗೈಕ್ಯರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತರು :
ಶ್ರೀಮತಿ ಶೈಲಜಿ, ಡಾ| ಮಂಜುನಾಥ ಆಲೂರು
ಡಾ|| ವರ್ಷಿತ, ಡಾ|| ವರುಣ್ ಚಂದ್ರ ಆಲೂರು ಮತ್ತು ಮಕ್ಕಳು
ಶ್ರೀಮತಿ ಪ್ರಿಯಾಂಕ ಶ್ರೀ ಹೇಮಂತ್ ಎಂ. ಬಸಪ್ಪ (USA) ಮತ್ತು ಮಕ್ಕಳು
ಶ್ರೀಮತಿ ಹರ್ಷಿಣಿ ಶ್ರೀ ಕಿರಣ್ ಚಂದ್ರ ಆಲೂರು
ಶ್ರೀಮತಿ ಗಂಗಾಂಬಿಕ, ಡಾ|| ಜೆ.ಸಿ. ಪ್ರಭಾಕರ್ ಮತ್ತು ಮಕ್ಕಳು
ಶ್ರೀಮತಿ ಕವಿತ, ಶ್ರೀ ವಿಶ್ವನಾಥ್ ಎಂ. ಮಾರ್ಗದ ಮತ್ತು ಮಕ್ಕಳು
ಶ್ರೀಮತಿ ಸುಜಾತ, ಡಾ|| ಕೆ. ರವೀಂದ್ರ ಮತ್ತು ಮಕ್ಕಳು
ಶ್ರೀಮತಿ ಅನಿತ, ಡಾ|| ಕೆ.ಪಿ. ಬಸವರಾಜು ಮತ್ತು ಮಕ್ಕಳು
ಮರಿಮೊಮ್ಮಕ್ಕಳು, ಆಲೂರು ವಂಶಸ್ಥರು ಹಾಗೂ ಬಂಧು-ಮಿತ್ರರು.


# ನಗರಕ್ಕೆ ಇಂದು ಸಿದ್ದರಾಮಯ್ಯ ಅಮೃತ ಮಹೋತ್ಸವ ಸಮಿತಿ



ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ 75ನೇ ಜನ್ಮ ದಿನಾಚರಣೆ ಅಂಗವಾಗಿ ನಗರದಲ್ಲಿ ಬರುವ ಆಗಸ್ಟ್ 3ರಂದು ಹಮ್ಮಿಕೊಂಡಿರುವ ಅಮೃತ ಮಹೋತ್ಸವ ನಡೆಯುವ ಹಿನ್ನೆಲೆಯಲ್ಲಿ ಈಗಾಗಲೇ ರಚನೆ ಆಗಿರುವ ಸಮಿತಿಯ ಸದಸ್ಯರು ಇಂದು ನಗರಕ್ಕೆ ಆಗಮಿಸಲಿದ್ದಾರೆ ಎಂದು ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಹೆಚ್.ಬಿ. ಮಂಜಪ್ಪ ಮತ್ತು ಜಿಲ್ಲಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ದಿನೇಶ್ ಕೆ.ಶೆಟ್ಟಿ ತಿಳಿಸಿದ್ದಾರೆ.

ಇಂದು ಬೆಳಿಗ್ಗೆ 11 ಗಂಟೆಗೆ ಆಗಮಿಸುವ ಸಮಿತಿಯ ಮಾಜಿ ಸಚಿವರುಗಳಾದ ಆರ್.ವಿ.ದೇಶಪಾಂಡೆ, ಬಸವರಾಜ ರಾಯರೆಡ್ಡಿ, ಡಾ|| ಹೆಚ್.ಸಿ. ಮಹಾದೇವಪ್ಪ, ಡಾ|| ಬಿ.ಎಲ್. ಶಂಕರ್, ಶ್ರೀಮತಿ ಜಯಮಾಲ, ವಿಧಾನ ಪರಿಷತ್ ಮಾಜಿ ಸಭಾಪತಿ ವಿ.ಆರ್. ಸುದರ್ಶನ್, ರಾಜ್ಯಸಭಾ ಸದಸ್ಯರಾದ ಡಾ.ಎಲ್.ಹನುಮಂತಯ್ಯ, ಹಿರಿಯ ಶಾಸಕ ಶಾಮನೂರು ಶಿವಶಂಕರಪ್ಪ, ಮಾಜಿ ಸಚಿವ ಶಾಮನೂರು ಮಲ್ಲಿಕಾರ್ಜುನ್ ಅವರು ಮಧ್ಯಾಹ್ನ 12 ಗಂಟೆಗೆ ಬಾಪೂಜಿ ಅತಿಥಿ ಗೃಹದಲ್ಲಿ ಕಾರ್ಯಕ್ರಮದ ಕುರಿತು ಪತ್ರಕರ್ತರೊಂದಿಗೆ ಮಾತನಾಡುವರು.

# ನಗರದಲ್ಲಿ ಇಂದು ವಿದ್ಯುತ್ ವ್ಯತ್ಯಯ

ಎಮ್‌ಬಿ ಕೇರಿ, ಹೊಂಡದ ಸರ್ಕಲ್ ಸುತ್ತಮುತ್ತ, ಕಾಯಿಪೇಟೆ, ಜಾಲಿನಗರ, ಟೀಚರ್ ಕಾಲೋನಿ, ಶಿವಾಜಿ ನಗರ, ಶಿವಾಜಿ ಸರ್ಕಲ್, ಚಲುವಾದಿ ಕೇರಿ, ಇಡಬ್ಲ್ಯೂಎಸ್ ಕಾಲೋನಿ, ಹಳೇಪೇಟೆ, ಬಾರ್‌ಲೈನ್ ರಸ್ತೆ ಹಾಗೂ ಇತರೆ ಪ್ರದೇಶಗಳು.


ಹಗೇದಿಬ್ಬ ಸರ್ಕಲ್, ಗಾಂಧಿನಗರ ಅಂಬೇಡ್ಕರ್ ಸರ್ಕಲ್, ಮಹಾರಾಜ ಪೇಟೆ, ಬಸವರಾಜ ಪೇಟೆ, ಚೌಕಿಪೇಟೆ, ವಿಜಯಲಕ್ಷ್ಮಿ ರಸ್ತೆ, ದೊಡ್ಡಪೇಟೆ, ಕಾಳಿಕಾದೇವಿ ರಸ್ತೆ, ಎಸ್‌ಕೆಪಿ ರಸ್ತೆ, ಹಳೇಪೇಟೆ ಶ್ರೀ ವೀರಭದ್ರೇಶ್ವರ ದೇವಸ್ಥಾನ, ಕೆ.ಆರ್ ಮಾರ್ಕೆಟ್ , ಹೆರಿಗೆ ಆಸ್ಪತ್ರೆ, ಚಾಮರಾಜಪೇಟೆ ಹಾಗೂ ಸುತ್ತಮುತ್ತ ಹಾಗೂ ಇತರೆ ಪ್ರದೇಶಗಳು.

ಭಾಷಾನಗರ 1 ರಿಂದ 17ನೇ ಕ್ರಾಸ್, ರಿಂಗ್ ರಸ್ತೆ, ಶಿವನಗರ ಸ್ವಲ್ಪ ಭಾಗ, ಮಿಲ್ಲತ್ ಕಾಲೋನಿ, ಬೀಡಿ ಲೇಔಟ್, ರಜಾವುಲ್ಲಾ ಮುಸ್ತಾಫ ನಗರ, ರಜಾಕ್ ಸರ್ಕಲ್, ಭಾಷಾನಗರ ಮುಖ್ಯರಸ್ತೆ, ಸುತ್ತಮುತ್ತ ಬೀಡಿ ಲೇಔಟ್, ಶಿವನಗರ, ರಜಾವುಲ್ಲಾ ಮುಸ್ತಾಫ ನಗರ, ಇಎಸ್‌ಐ ಆಸ್ಪತ್ರೆ ಹಿಂಭಾಗ ಹಾಗೂ ಮುಂಭಾಗ, ಭಾಷಾನಗರ ಮುಖ್ಯ ರಸ್ತೆ ಹಾಗೂ ಇತರೆ ಪ್ರದೇಶಗಳಲ್ಲಿ ಇಂದು ಬೆಳಿಗ್ಗೆ 10 ರಿಂದ ಸಂಜೆ 4 ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ.

# ಆನ್‌ಲೈನ್ ಅರ್ಜಿದಾರರು ದಾಖಲೆ ಸಲ್ಲಿಸಿ, ಕಟ್ಟಡ ಪರವಾನಿಗೆ ಪಡೆಯಿರಿ

ದಾವಣಗೆರೆ, ಜು. 8- ನಿರ್ಮಾಣ್-2 ತಂತ್ರಾಂಶವು ನಿರ್ವಹಣೆಯಲ್ಲಿ ಇರುವುದರಿಂದ ಕಟ್ಟಡ ಪರವಾನಿಗೆ ನೀಡಲು ಸಾಧ್ಯವಾಗುತ್ತಿಲ್ಲ. ಈಗಾಗಲೇ ಆನ್‌ಲೈನ್ ಮೂಲಕ (ನಿರ್ಮಾಣ್-2) ತಂತ್ರಾಂಶದಲ್ಲಿ ಅರ್ಜಿ ಸಲ್ಲಿಸಿರುವವರು ಅಗತ್ಯ ದಾಖಲೆಗಳ ಪ್ರತಿಯನ್ನು ಮಹಾನಗರ ಪಾಲಿಕೆಗೆ ಮತ್ತೊಂದು ಬಾರಿ ಸಲ್ಲಿಸಿ, ಕಟ್ಟಡ ಪರವಾನಿಗೆ ಪಡೆಯಲು ಆಯುಕ್ತ ವಿಶ್ವನಾಥ ಪಿ. ಮುದಜ್ಜಿ ತಿಳಿಸಿದ್ದಾರೆ. ಹೊಸದಾಗಿ ಕಟ್ಟಡ ಪರವಾನಿಗೆಗೆ ಅರ್ಜಿ ಸಲ್ಲಿಸುವವರು ಸಹ ದಾಖಲೆಗಳ ಸಹಿತ ಅರ್ಜಿ ಸಲ್ಲಿಸುವಂತೆ ಅವರು ಹೇಳಿದ್ದಾರೆ. ವಿವರಕ್ಕೆ ಮಹಾನಗರ ಪಾಲಿಕೆ ಪ್ರಥಮ ದರ್ಜೆ ಸಹಾಯಕರಾದ ಎಸ್.ಕೆ.ಪಾಂಡುರಾಜ್ (98865-20066), ಟಿ. ಈಶ್ವರಪ್ಪ (96329-31863) ಅವರನ್ನು ಸಂಪರ್ಕಿಸಬಹುದು.


# ಅಭಿನಂದನೆಗಳು



ಹರಪನಹಳ್ಳಿ ಪುರಸಭಾ ಅಧ್ಯಕ್ಷರಾಗಿ ನೂತನವಾಗಿ ಆಯ್ಕೆಯಾಗಿರುವ
ನಮ್ಮ ಸಮಾಜದ ಯುವ ಉದ್ಯಮಿಗಳು, ದಾನಿಗಳೂ ಆದ
**ಶ್ರೀ ಹರಾಳು ಅಶೋಕ್**
ಅವರಿಗೆ ಹಾರ್ದಿಕ ಅಭಿನಂದನೆಗಳು.
ಅವರ ಅಧಿಕಾರವಧಿಯಲ್ಲಿ ಪುರಸಭೆ ಸರ್ವತೋಮುಖ ಅಭಿವೃದ್ಧಿ
ಹೊಂದಲೆಂದು ಶುಭ ಹಾರೈಸುತ್ತೇವೆ.
**ದಾವಣಗೆರೆ ಜಿಲ್ಲಾ ಮಡಿವಾಳ ಮಾಚಿದೇವ ಸಂಘ, ದಾವಣಗೆರೆ**



# ಗ್ರಾಹಕರ ಅತ್ಯುತ್ತಮ ಪ್ರತಿಕ್ರಿಯೆಯಿಂದ

ಹೊಸ ಸ್ಟಾಕ್ ತರಿಸಲಾಗಿದೆ. ಸೇಲ್ ಕೊನೆಯ 2 ದಿನಗಳು ಮಾತ್ರ

Monsoon Sale

ಬ್ರಾಂಡೆಡ್ ರೆಡಿಮೇಡ್ ಗಾರ್ಮೆಂಟ್ಸ್ ಮಾನ್ಸೂನ್ ಆಫ್‌ರ್
ಬೃಹತ್ ರಿಯಾಯಿತಿ ಮಾರಾಟ

Monsoon Sale

ಬ್ರಾಂಡೆಡ್ ರೆಡಿಮೇಡ್ ಉಡುಪುಗಳ ಬೃಹತ್ ಸ್ಟಾಕ್‌ನಿಂದಾಗಿ ಗೋದಾಮಿನಲ್ಲಿ ಸಂಗ್ರಹವಾಯಿತು. ಇದು ಕಂಪನಿಯು ಆರ್ಥಿಕ ಬಿಕಟ್ಟಿನ ಕಡೆಗೆ ಎದುರಿಸಿತು, ಆದ್ದರಿಂದ ಕಂಪನಿಯು ದಾವಣಗೆರೆ ಗ್ರಾಹಕರಿಗೆ ಭಾರಿ ರಿಯಾಯಿತಿ ನೀಡಲು ನಿರ್ಧರಿಸಿದೆ 3 ಕೋಟಿ ರೂಪಾಯಿಗಳ ರೆಡಿಮೇಡ್ ಉಡುಪುಗಳನ್ನು ಈಗ ಕೇವಲ 60 ಲಕ್ಷಕ್ಕೆ ನಗದು ರೂಪದಲ್ಲಿ ಮಾರಾಟ ಮಾಡಲು ನಿರ್ಧರಿಸಿದೆ ಮತ್ತು 2 ದಿನಗಳಲ್ಲಿ ಬಾಕಿ ಸರಕನ್ನು ಮಾರಾಟ ಮಾಡಲಾಗುವುದು.

**ಸೇಲ್ @ ಹೋಟೆಲ್ ಸದರ್ನ್ ಸ್ಟಾರ್, ದಾವಣಗೆರೆ**

Sincere Request : To the customers to maintain silence during shopping

1,000 ವಿವಿಧ ಪ್ರಕಾರದ ಜಂಟ್ಸ್, ಲೇಡಿಸ್ ಮತ್ತು ಕಿಡ್ಸ್ ಪ್ಯಾಂಟ್, ಟೀ-ಶರ್ಟ್, ಲೋವರ್, ಟಾಪ್, ಬರ್ಮುಡಾ, ಕೇಪ್ರಿ, ಪ್ಲಾಜೊ, ಇತರೆ

ಕೇವಲ ರೂ. 200/- ರಿಂದ 350/- ರವರೆಗೆ

ಬಿಗ್ ಬ್ರಾಂಡ್ ಪುರುಷರ ರೆಡಿಮೇಡ್ ಗಾರ್ಮೆಂಟ್ಸ್ : MRP : 1499/- to 4999/-

ಜೀನ್ಸ್ ಪ್ಯಾಂಟ್, ಕಾಟನ್ ಪ್ಯಾಂಟ್ : ಸಿಲ್ಕ್‌ಸ್ಟ್ರೀಚ್, ಮಸ್‌ರೈಸ್ ಸ್ಟ್ರೆಚ್, ಸ್ಟ್ರೆಚ್ ಚಿನ್ಯೂಸ್ ಕಾಟನ್, ಸಾರ್ಟಿನ್ ಸ್ಟ್ರೆಚ್ ಇತ್ಯಾದಿ.
ಶರ್ಟ್, ಟಿ-ಶರ್ಟ್ : ಪಾರ್ಟಿವೇರ್, ಬಿಸ್‌ನೆಸ್‌ಕ್ಲಾಸ್, ಆಫೀಸ್‌ವೇರ್, ಫಾರ್ಮಲ್, ಕ್ಯಾಷ್ಯುಯಲ್ ಇತ್ಯಾದಿ.

INDIAN TERRAIN ColorPlus DANIEL HECHTER Lee Pepe Jeans LONDON IZOD NETPLAY INDIGO NATION SCULLERS

Only in Rs. 499/- to 999/-

ಬ್ರಾಂಡೆಡ್ ಲೇಡಿಸ್ ಕುರ್ತೀಸ್ ಮೇಳಾ, ಕುರ್ತಿ ಮತ್ತು ಪಶ್ಚಿಮಾತ್ಯ ಬಟ್ಟೆಗಳು

BIBA JACK&JONES DNMX AJIO ELINI abof avaasa MRP Up to Rs. 4999/-

Only in Rs. 200 /-, 400/- & 600/-

ಬಿಗ್ ಬ್ರಾಂಡ್ ಕಿಡ್ಸ್ ಮೇಳ MRP upto Rs.1999/-

ಹುಡಗಿಯರ : ಟಾಪ್, ಜೀನ್ಸ್ ಪ್ಯಾಂಟ್, ಕಾಟನ್ ಪ್ಯಾಂಟ್, ಫ್ಯಾನ್ಸಿ ಫ್ರಾಕ್, ಫ್ಯಾನ್ಸಿ ಡ್ರೆಸ್, ಪುಲೋವರ್, ಜಾಕೆಟ್ ಇತ್ಯಾದಿ ಹುಡುಗರ : ಜೀನ್ಸ್ ಪ್ಯಾಂಟ್, ಕಾಟನ್ ಪ್ಯಾಂಟ್, ಶರ್ಟ್, ಟೀ-ಶರ್ಟ್, ಪುಲೋವರ್, ಫ್ಯಾನ್ಸಿ ಡ್ರೆಸ್, ಜಾಕೆಟ್ ಇತ್ಯಾದಿ

wow mom ಕೇವಲ ರೂ: 150/- ರಿಂದ 499/- ಮಾತ್ರ Size 1 Month to 12 Years Disney

BIG OFFER Rajasthani Royal Printed Bedsheets , Pillow cover, Sofa cover etc

JACK&JONES NetWork Big Branded BLAZER MRP upto Rs. 11,999/-
Now Sale in only Rs. 1999/-

Note : 1 This sale is only for Retail customers Just for 2 days. 2 Wholesale Dealers will not be entertained. 3 We are selling on Such low prices just to collect cash.

ಆಫ್‌ರ್ ಕೊನೆಯ 2 ದಿನಗಳು ಮಾತ್ರ 9 ಮತ್ತು 10 ಜುಲೈ 2022 ಸಮಯ: 10 am to 9 pm NO LUNCH BREAK



ಹೋಟೆಲ್ ಸದರ್ನ್ ಸ್ಟಾರ್
(ಶಾಮನೂರು ಶಿವಶಂಕರಪ್ಪ ಕನ್ವೆನ್‌ಷನ್ ಸೆಂಟರ್)
# 3993/23, ಶಾಮನೂರು ರೋಡ್, ಎಸ್.ಎಸ್. ಲೇಔಟ್, ಎ ಬ್ಲಾಕ್, ಕುವೆಂಪು ನಗರ ದಾವಣಗೆರೆ-577004
HOTEL SOUTHERN STAR (Shamanur Shivashankarappa Convention Centre)
#3993/23, Shamanur Road, SS Layout A Block, Kuvempu Nagar, DAVANGERE-577 004

FREE PARKING ENTRANCE
All Major Debit / Credit Cards. Google Pay, PhonePe Accepted
As per Govt. Rules Please Wear Mask & Maintain Scoial Distance


JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte